ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನೀವು ಹೇಗೆ ಮಾತಾಡಬೇಕೆಂದರೆ ನಿಮ್ಮ ಮಾತು ಕೇಳಲು ಜನ ಕಾತರಿಸಬೇಕು. ನೀವು ಹೇಗೆ ಕೇಳಬೇಕೆಂದರೆ, ಜನ ನಿಮ್ಮೊಂದಿಗೆ ಮಾತಾಡಲು ಉಲ್ಲಸಿತರಾಗಬೇಕು. ಮಾತಾಡುವುದರಷ್ಟೇ ಕೇಳುವುದೂ ಒಂದು ಕಲೆ, ಸಂಸ್ಕಾರ. ಇವೆರಡನ್ನೂ ಬೆಳೆಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಶೋಧಿಸಲಾಗದ ಅಥವಾ ಪತ್ತೆ ಹಚ್ಚಲಾಗದ ಕೃತಿಚೌರ್ಯಕ್ಕೆ ಒರಿಜಿನಾಲಿಟಿ ಎನ್ನಬಹುದು.

ಪುಟ ತೆರೆದಂತೆ...

ಜೀವನದಲ್ಲಿ ಸಿಕ್ಕಿಲ್ಲ ಅನ್ನೋಕ್ಕಿಂತ, ಪಡೆಯಬಲ್ಲೆ ಎಂಬ ವಿಶ್ವಾಸ ಮುಖ್ಯ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಕ್ರಿಕೆಟ್, ಭಾರತೀಯರನ್ನು ಬೆಸೆಯುವ ಏಕೈಕ ಧರ್ಮ
ವ್ಯಕ್ತಿ ಚಿತ್ರ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು



ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಪ್ರಧಾನಿ, ಸಂಸದರು, ಕೇಂದ್ರ ಸಚಿವರ ಬಗ್ಗೆ ಲಘುವಾಗಿ ಮಾತನಾಡಿದ್ದರು, ಅವರು ಯಾರು ನಮಗೆ ಹೇಳೋಕೆ ಎಂಬಂತೆ ವರ್ತಿಸಿದ್ದರು. ಎರಡು ಬಾರಿ ಸಿಎಂ ಆಗಿರುವ ಕುಮಾರಸ್ವಾಮಿಗೆ ಕಾನೂನು ಜ್ಞಾನ ಇಲ್ಲವಾ ಅಂತ ನಾನು ಕೇಳೋಕೆ ಹೋಗಲ್ಲ. ಅವರಿಗೆ ನೋಯಿಸುವ ಉದ್ದೇಶ ನನಗಿಲ್ಲ. ಕುಮಾರಸ್ವಾಮಿ ಒಬ್ಬರದ್ದೇ ದೊಡ್ಡತನ, ಮಿಕ್ಕವರೆಲ್ಲಾ ಸಣ್ಣವರು.

- ಎನ್.ಚಲುವರಾಯಸ್ವಾಮಿ ಕೃಷಿ ಸಚಿವ

ರಾಜ್ಯದಲ್ಲಿ ಮತ್ತೆ 3 ಬಲಿ | ಬೆಂಗಳೂರಿನಲ್ಲಿ ಒಂದೇ ದಿನ 175 ಪ್ರಕರಣ | 24 ಗಂಟೆಗಳಲ್ಲಿ 325 ಮಂದಿಗೆ ಸೋಂಕು | ವೈದ್ಯಕೀಯ ತುರ್ತು ಘೋಷಣೆಗೆ ಡಾ.ಮಂಜುನಾಥ್ ಆಗ್ರಹ

ಡೆಂಘೀ ಸಾವಿನ ಡಂಗುರ

- ಬೆಂಗಳೂರಿನ ಅಂಜನಾಪುರದ ಬಾಲಕ ಗಗನ್ (11) ಶುಕ್ರವಾರ ತಡರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಡೆಂಘೀ ಜ್ವರದಿಂದ ಸಾವು.
- ಉತ್ತರ ಕನ್ನಡ ಶಿರಸಿಯ ಕಸ್ತೂರಬಾ ನಗರದ ಸುಹಾನಾ ಮಹ್ಮದ್ ಶಫಿ (12) ಡೆಂಘೀಯಿಂದ ಮರಣ.
- 12 ದಿನಗಳ ಹಿಂದೆ ಜ್ವರದಿಂದ ಬಳುತ್ತಿದ್ದ ಹಾವೇರಿಯ ಬ್ಯಾಡಗಿ ತಾಲೂಕಿನ ಮಾಸಣಗಿ ಗ್ರಾಮದ ದ್ಯಾಮಪ್ಪ ಬನ್ನಿಹಟ್ಟಿ ಎಂಬುವವರ ಪುತ್ರಿ ದಿವ್ಯ ದ್ಯಾಮಪ್ಪ (9 ವರ್ಷ) ಶಂಕಿತ ಡೆಂಘೀಗೆ ಸಾವು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯಾದ್ಯಂತ ಡೆಂಘೀ ಮಹಾಮಾರಿ ಉಲ್ಬಣಗೊಳ್ಳುತ್ತಿದ್ದು, ಆಸ್ಪತ್ರೆಗಳಲ್ಲಿ ಜ್ವರ ಬಾಧಿತರ ಸಂಖ್ಯೆ ಹೆಚ್ಚಾಗುತ್ತಿದೆ. ಕಳೆದ ಆರು ದಿನಗಳಲ್ಲಿ 819 ಡೆಂಘೀ ಪ್ರಕರಣಗಳು ದಾಖಲಾಗಿದ್ದು, ಆಸ್ಪತ್ರೆಗಳಲ್ಲಿ ಬೆಡ್‌ಗಳ ಕೊರತೆ ಎದುರಾಗಿದೆ. ಅಲ್ಲದೆ ಝೀಕಾ ವೈರಸ್ ಸದ್ದಿಲ್ಲದೆ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕರೋನಾದಂತೆ ಜ್ವರಾತಂಕದ ಸವಾಲು ಎದುರಾಗುವ ಸಾಧ್ಯತೆ ಗೋಚರಿಸುತ್ತಿದೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ 325 ಮಂದಿಯಲ್ಲಿ ಡೆಂಘೀ ಕಾಣಿಸಿಕೊಂಡಿದೆ. ಬೆಂಗಳೂರಿನಲ್ಲಿ ಹೆಚ್ಚು ಡೆಂಘೀ ಪ್ರಕರಣಗಳು ಕಾಣಿಸಿಕೊಂಡಿದ್ದು, 175 ಪ್ರಕರಣಗಳು ವರದಿಯಾಗಿವೆ. ದಾಖಲೆ ಪ್ರಮಾಣದಲ್ಲಿ ನಿತ್ಯ ಡೆಂಘೀ ಜ್ವರ ಬಾಧಿತರ ಪ್ರಮಾಣ ಹೆಚ್ಚಾಗುತ್ತಿದ್ದು, ತಿಂಗಳಾಂತ್ಯಕ್ಕೆ 10 ಸಾವಿರಕ್ಕೂ ಹೆಚ್ಚು ಮಂದಿಯನ್ನು ಕಾಡಲಿದೆ ಎಂದು ಆರೋಗ್ಯ ತಜ್ಞರು ಮಾಹಿತಿ ನೀಡಿದ್ದಾರೆ.

ಖಾಸಗಿ ಆಸ್ಪತ್ರೆಗಳಲ್ಲಿ ಡೆಂಘೀಗೆ ಬಲಿಯಾದವರ ಮಾಹಿತಿ ನೀಡಲು ಆರೋಗ್ಯ ಸಚಿವರು ಸೂಚಿಸಿದ್ದಾರೆ. ಜತೆಗೆ ಡೆತ್ ಆಡಿಟ್ ಮಾಡಲು ಮುಂದಾಗಿದ್ದಾರೆ. ಖಾಸಗಿ ಆಸ್ಪತ್ರೆಗಳು ಡೆಂಘೀ ಸಾವು ಮತ್ತು ಪ್ರಕರಣಗಳನ್ನು ದಾಖಲಿಸಬೇಕಾಗುತ್ತದೆ. ಯಾವುದೇ ಖಾಸಗಿ ಆಸ್ಪತ್ರೆಗೆ ಬರುವ ಡೆಂಘೀ ಪ್ರಕರಣದ ಬಗ್ಗೆ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು. ಜತೆಗೆ ವೆಬ್‌ಸೈಟ್‌ನಲ್ಲಿ ನಮೂದಿಸಬೇಕು. ಆದರೆ ಖಾಸಗಿ ಆಸ್ಪತ್ರೆಯವರು ಡೆಂಘೀ ಮಾಹಿತಿ ಒದಗಿಸದ ಆರೋಪ ಕೇಳಿ ಬಂದಿದೆ.

ಬೆಂಗಳೂರಿನಲ್ಲಿ ಸೋಂಕು ಜ್ವರಗಳದ್ದೆ ಕಾಟ: ಬದಲಾದ ವಾತಾವರಣ, ಹವಾಮಾನ ವೈಪರೀತ್ಯದಿಂದ ರಾಜ್ಯದ ಜನರಲ್ಲಿ ವೈರಲ್ ಜ್ವರಗಳು ಕಾಣಿಸಿಕೊಳ್ಳುತ್ತಿರುವ ಬೆನ್ನಲ್ಲೆ ಬೆಂಗಳೂರಿನಲ್ಲಿ ಡೆಂಘೀ, ಚಿಕೂನ್ ಗುನ್ಯಾ ಪ್ರಕರಣಗಳ ಸಂಖ್ಯೆ ಕೂಡ ಅಧಿಕವಾಗಿದೆ. ಬೆಂಗಳೂರಿನ ಕೆ.ಸಿ.ಜನರಲ್, ಜಯನಗರ ಜನರಲ್ ಆಸ್ಪತ್ರೆ, ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಬರುವವರ ಸಂಖ್ಯೆ ಶೇ.60ರಷ್ಟು ಅಧಿಕವಾಗಿದೆ. ರಾಜಧಾನಿ ಆಸ್ಪತ್ರೆಗಳಲ್ಲಿ ಸೋಂಕು ಜ್ವರಗಳಿಂದಾಗಿ ಬೆಡ್‌ಗಳ ಕೊರತೆ ಉಂಟಾಗಿದೆ. ಇತರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಯಾವುದೇ ಸೋಂಕು ಜ್ವರ ಕಾಣಿಸಿಕೊಂಡರೂ ಹೆಚ್ಚು ದಾಖಲಾಗುವುದು ಬೆಂಗಳೂರಿನಲ್ಲಿ ಎಂಬುದು ಸಾಬೀತಾಗಿದೆ.

ಹೆಚ್ಚು ಡೆಂಘೀ ಸೋಂಕಿತ ಜಿಲ್ಲೆಗಳು

ಜಿಲ್ಲೆ	ಪ್ರಕರಣಗಳು
ಬೆಂಗಳೂರು	1,969
ಚಿಕ್ಕಮಗಳೂರು	521
ಮೈಸೂರು	496
ಹಾವೇರಿ	481
ಶಿವಮೊಗ್ಗ	292
ಧಾರವಾಡ	289



- ಡೆಂಘೀಗೆ ಬಾಲಕರು, ಗರ್ಭಿಣಿಯರೇ ಟಾರ್ಗೆಟ್, ವೈರಲ್ ಜ್ವರದಿಂದಾಗಿ ಆಸ್ಪತ್ರೆಯಲ್ಲಿ ಜನಸಾಗರ
- ಜ್ವರಾತಂಕದಿಂದ ಆಸ್ಪತ್ರೆಗಳಲ್ಲಿ ಬೆಡ್‌ಗಳ ಕೊರತೆ
- ಮಕ್ಕಳನ್ನು ಕಾಡುತ್ತಿರುವ ಕಾಲುಬಾಯಿ ರೋಗ
- ತಿಂಗಳಾಂತ್ಯಕ್ಕೆ 10 ಸಾವಿರಕ್ಕೂ ಹೆಚ್ಚು ಮಂದಿಗೆ ಜ್ವರದ ಭೀತಿ

ಡೆಂಘೀಗೆ ನಿಖರವಾದ ಔಷಧವಿಲ್ಲ. ಸೊಳ್ಳೆಗಳ ನಿಯಂತ್ರಣ ಮಾಡದಿದ್ದರೆ ಝೀಕಾ ವೈರಸ್, ಚಿಕನ್ ಗುನ್ಯಾ ಕೂಡ ಬರಬಹುದು. ಕರೋನಾ ಸಾಂಕ್ರಾಮಿಕ ರೋಗ ಈ ಹಿಂದೆ ಎದುರಿಸಿದ್ದೇವೆ. ಈಗ ಡೆಂಘೀ ರೋಗ ರಾಜ್ಯಾದ್ಯಂತ ಹೆಚ್ಚಾಗಿದೆ. ಆದ್ದರಿಂದ ವೈದ್ಯಕೀಯ ತುರ್ತು ಘೋಷಣೆ ಮಾಡಬೇಕು. ಡೆಂಘೀ ನಿಯಂತ್ರಣಕ್ಕೆ ಟಾಸ್ಕ್‌ಫೋರ್ಸ್ ರಚಿಸಬೇಕು.

- ಡಾ.ಸಿ.ಎನ್.ಮಂಜುನಾಥ್ ಸಂಸದ ಹಾಗೂ ಹೃದ್ರೋಗ ತಜ್ಞರು

ಸಾವಿನ ಸಂಖ್ಯೆ 12ಕ್ಕೆ ಏರಿಕೆ

ರಾಜ್ಯದಲ್ಲಿ ಡೆಂಘೀ ಸಾವಿನ ಪ್ರಕರಣಗಳ ಸಂಖ್ಯೆ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾದ ವರದಿಗಳ ಪ್ರಕಾರ 12ಕ್ಕೆ ಏರಿಕೆಯಾಗಿದೆ. 12 ಸಾವಿನ ಪ್ರಕರಣಗಳ ಪೈಕಿ ಹಾಸನ 6, ಉತ್ತರ ಕನ್ನಡ 2, ಹಾವೇರಿ 1, ಬೆಂಗಳೂರು ವ್ಯಾಪ್ತಿಯಲ್ಲಿ ಮೂವರು ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಜ್ವರಕ್ಕೆ ತುತ್ತಾಗಿ ಸಾವಿಗೀಡಾಗುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಖಾಸಗಿ ಆಸ್ಪತ್ರೆಗಳಲ್ಲಿ ಡೆಂಘೀ ಸಾವಿನ ಪ್ರಕರಣಗಳು ಆರೋಗ್ಯ ಇಲಾಖೆಯ ಅಂಕಿ ಅಂಶಗಳಲ್ಲಿ ದಾಖಲಾಗಿಲ್ಲ. ಇಲಾಖೆ ಅಧಿಕೃತವಾಗಿ ನೀಡಿರುವ ವರದಿ ಪ್ರಕಾರ ಕೇವಲ 6 ಮಂದಿ ಡೆಂಘೀ ಜ್ವರದಿಂದ ಮೃತಪಟ್ಟಿದ್ದಾರೆ.

ರಾಜ್ಯಕ್ಕೂ ಕಾಲಿಟ್ಟ ಝೀಕಾ: ವೃದ್ಧ ಬಲಿ

ಶಿವಮೊಗ್ಗ: ರಾಜ್ಯದಲ್ಲಿ ಝೀಕಾ ವೈರಸ್ ಆತಂಕ ಹೆಚ್ಚಾಗಿದ್ದು, ಶಿವಮೊಗ್ಗದಲ್ಲಿ ಝೀಕಾ ವೈರಸ್‌ಗೆ 74 ವರ್ಷದ ವೃದ್ಧರೊಬ್ಬರು ಬಲಿಯಾಗಿದ್ದಾರೆ. ಝೀಕಾ ವೈರಸ್ ಜತೆಗೆ ಬಹು ಅಂಗಾಂಗ ವೈಫಲ್ಯಗಳಿಂದ ವೃದ್ಧ ಬಳಲುತ್ತಿದ್ದರು ಎನ್ನಲಾಗಿದೆ. ಕಳೆದ ಹತ್ತು ದಿನಗಳಿಂದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೃದ್ಧ ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಕೇವಲ ಝೀಕಾ ವೈರಸ್‌ಗೆ ವ್ಯಕ್ತಿ ಸಾಯಲು ಸಾಧ್ಯವಿಲ್ಲ. ಅವರು ಬಹು ಅಂಗಾಂಗ ವೈಫಲ್ಯಗಳಿಂದ ಬಳಲುತ್ತಿದ್ದರು ಎಂದು ಶಿವಮೊಗ್ಗ ಡಿಎಚ್‌ಒ ಡಾ.ನಟರಾಜ್ ಸ್ಪಷ್ಟಪಡಿಸಿದ್ದಾರೆ. ಶಿವಮೊಗ್ಗದ ಸಾಗರ ಮೂಲದ 24 ವರ್ಷದ ಯುವಕನಲ್ಲೂ ಝೀಕಾ ವೈರಸ್ ಪತ್ತೆಯಾಗಿದೆ ಎನ್ನಲಾಗಿದೆ. ಯುವಕನಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್‌ಗೆ ತಾತ್ಕಾಲಿಕ ತಡೆ

ಮಂಡ್ಯ: ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್‌ಗೆ ತಾತ್ಕಾಲಿಕ ತಡೆ ನೀಡಲಾಗಿದೆ. ಇದು 2018 ರಿಂದ ಇದೆ. ಸಾಕಷ್ಟು ರೈತರು ಟ್ರಯಲ್ ಬ್ಲಾಸ್ಟ್ ಬೇಡ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹೇಳಿದರು. ಬೇಬಿ ಬೆಟ್ಟ ಟ್ರಯಲ್ ಬ್ಲಾಸ್ಟ್ ವಿರೋಧಿಸಿ ರೈತರು ಧರಣಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಮಂಡ್ಯದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆದ ತುರ್ತು ಸಭೆಯಲ್ಲಿ ಮಾತನಾಡಿ, ಸರಕಾರ ಹಾಗೂ ನಮಗೆ ಬೇರೆ ಯಾವ ವಿಶೇಷ ಕಾಳಜಿ ಇಲ್ಲ. ನಮಗೆ ಜಲಾಶಯದ ಸುರಕ್ಷತೆ ಮುಖ್ಯ. ಈಗಾಗಲೇ ರೈತರು ನಮ್ಮನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ ಎಂದು ಹೇಳಿದರು.

ಅರ್ಜುನನ ಸ್ಮಾರಕಕ್ಕೆ ಶಂಕುಸ್ಥಾಪನೆ

ಹಾಸನ: ದಸರಾ ಆನೆ ಅರ್ಜುನನ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು. ಹಾಸನ ಜಿಲ್ಲೆಯ



ಸಕಲೇಶಪುರ ತಾಲೂಕಿನ ಯಸಳೂರು ಅರಣ್ಯ ವಲಯದ ದಬ್ಬಳ್ಳಿಕಟ್ಟೆಯ ನೆಡುತೋಪಿನಲ್ಲಿ 50 ಲಕ್ಷ ರು. ವೆಚ್ಚದಲ್ಲಿ ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. 2023ರ ಡಿ.4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಕ್ಯಾಪ್ಟನ್ ಅರ್ಜುನ ವೀರ ಮರಣವನ್ನಪ್ಪಿತ್ತು. ಬಳಿಕ ಅರ್ಜುನನ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಗಳು ಕೇಳಿಬಂದಿದ್ದರಿಂದ ರಾಜ್ಯ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿತ್ತು. ಇದೀಗ ಅರ್ಜುನನ ಅಭಿಮಾನಿಗಳ ಆಸೆ ಈಡೇರಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಕೆಲಸದ ಒತ್ತಡ, ಖಿನ್ನತೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ ರೋಬಾಟ್ ಸುದ್ದಿ



ನೀಟ್ ಯುಜಿ ಕೌನ್ಸೆಲಿಂಗ್ ಮುಂದಕ್ಕೆ

ದೆಹಲಿ: ರಾಷ್ಟ್ರೀಯ ಅರ್ಹತೆ ಮತ್ತು ವೈದ್ಯಕೀಯ ಪದವಿ ಪ್ರವೇಶ ಪರೀಕ್ಷೆ (ನೀಟ್-ಯುಜಿ) 2024ರ ಕೌನ್ಸೆಲಿಂಗ್ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಕೌನ್ಸೆಲಿಂಗ್ ದಿನಾಂಕದ ಬಗ್ಗೆ ಮುಂದೆ ಸೂಚನೆ ಹೊರಡಿಸಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನೀಟ್-ಯುಜಿ 2024ರ ಅಖಿಲ ಭಾರತ ಕೋಟಾ (ಎಐಕ್ಯು) ಸೀಟ್ ಕೌನ್ಸೆಲಿಂಗ್ ಶನಿವಾರ ಆರಂಭವಾಗ ಬೇಕಿತ್ತು. ಆದರೆ, ಕೌನ್ಸೆಲಿಂಗ್ ವಿಳಂಬಗೊಳಿಸಲು ಸುಪ್ರೀಂಕೋರ್ಟ್ ನಿರಾಕರಿಸಿದ ನಂತರ ಕೇಂದ್ರ ಸರಕಾರ ಈ ಕ್ರಮ ಕೈಗೊಂಡಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾ. ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾ.ಜೆ.ಬಿ. ಪರ್ದಿವಾಲಾ ಮತ್ತು ನ್ಯಾ.ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಸೋಮವಾರ ನೀಟ್-ಯುಜಿ 2024 ಪರೀಕ್ಷೆ-ಕೌನ್ಸೆಲಿಂಗ್ ಕುರಿತ ವಿವಿಧ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳಲಿದೆ.

ಬ್ರಿಟನ್ ಸಂಸತ್ತಿಗೆ 28 ಭಾರತೀಯ ಮೂಲದವರ ಆಯ್ಕೆ

ಲಂಡನ್: ಬ್ರಿಟನ್ ಸಂಸತ್ ಚುನಾವಣೆಯಲ್ಲಿ 28 ಭಾರತೀಯ ಮೂಲದವರು ಆಯ್ಕೆಯಾಗಿದ್ದಾರೆ. ಈ ಪೈಕಿ ಸಿಖ್ ಸಮುದಾಯದವರು ಸಿಂಹಪಾಲು ಹೊಂದಿದ್ದಾರೆ. ಬ್ರಿಟನ್ ಸಂಸತ್ತಿಗೆ ಆಯ್ಕೆಯಾದ 28 ಭಾರತೀಯ ಪೈಕಿ 12 ಮಂದಿ ಸಿಖ್ ಸಮುದಾಯದವರು, 6 ಮಂದಿ ಮಹಿಳೆಯರು ಸೇರಿದ್ದಾರೆ. ಗಮನಾರ್ಹ ಸಂಗತಿ ಎಂದರೆ ಈ ಎಲ್ಲ ಸಿಖ್ ಸಂಸದರು ಲೇಬರ್ ಪಕ್ಷದವರು. ಈ ಪೈಕಿ 9 ಮಂದಿ ಮೊದಲ ಬಾರಿ ಆಯ್ಕೆಯಾಗಿದ್ದಾರೆ. ಇನ್ನು ಇಬ್ಬರು ಸತತ ಮೂರನೇ ಬಾರಿಗೆ ಆಯ್ಕೆಯಾದರೆ, ಒಬ್ಬರು ಎರಡನೇ ಬಾರಿಗೆ ಸಂಸತ್ ಪ್ರವೇಶಿಸುತ್ತಿದ್ದಾರೆ. ಕೆನಡಾದ ಬಳಿಕ ಇದೀಗ ಇಂಗ್ಲೆಂಡ್ ಸಂಸತ್ತು ಕೂಡ ದಾಖಲೆಯ ಪ್ರಮಾಣದ ಸಿಖ್ ಸಂಸದರನ್ನು ಹೊಂದಿದಂತಾಗಿದೆ. ಕೆನಡಾದಲ್ಲಿ 18 ಸಿಖ್ ಸಂಸದರಿದ್ದಾರೆ.

ಜು.22ರಿಂದ ಆ.12ರವರೆಗೆ ಬಜೆಟ್ ಅಧಿವೇಶನ

23ಕ್ಕೆ ಕೇಂದ್ರ ಬಜೆಟ್

ದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನ ಜು.22ರಿಂದ ಆರಂಭವಾಗಲಿದ್ದು, 2024-25ನೇ ಹಣಕಾಸು ವರ್ಷದ ಬಜೆಟ್ ಜು.23ರಂದು ಲೋಕಸಭೆಯಲ್ಲಿ ಮಂಡನೆಯಾಗಲಿದೆ. ಬಜೆಟ್ ಅಧಿವೇಶನ ಆ.12ರವರೆಗೂ ನಡೆಯಲಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಶನಿವಾರ ತಿಳಿಸಿದ್ದಾರೆ.

ಪ್ರಧಾನಿ ಮೋದಿ 3.0 ಸರಕಾರದ ಮೊದಲ ಬಜೆಟ್

18ನೇ ಲೋಕಸಭೆ ರಚನೆಯಾದ ನಂತರ ಕಾರ್ಯಾರಂಭ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು 3ನೇ ಅವಧಿಯ ಸರಕಾರದ ಮೊದಲ ಬಜೆಟ್ ಜು.23ಕ್ಕೆ ಮಂಡನೆಯಾಗಲಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸಕ್ತ ಹಣಕಾಸು ವರ್ಷದ ಪೂರ್ಣ ಬಜೆಟ್ ಮಂಡಿಸಲಿದ್ದಾರೆ ಎಂದು ಸಚಿವ ಕಿರಣ್ ರಿಜಿಜು 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ. ಕೇಂದ್ರ ಸರಕಾರ ಈ ಬಾರಿಯ ಬಜೆಟ್‌ನಲ್ಲಿ ಗ್ರಾಮೀಣ ವಸತಿಗೆ ಸಹಾಯಧನ ಹೆಚ್ಚಿಸಲಿದೆ. ಕಳೆದ ವರ್ಷ ನೀಡಿದ್ದಕ್ಕಿಂತ ಶೇ.50ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಸರಕಾರದ ಇಬ್ಬರು ಅಧಿಕಾರಿಗಳನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ರಾಯಿಟರ್ಸ್ ವರದಿ ಪ್ರಕಟಿಸಿದೆ.

ಸಚಿವೆ ನಿರ್ಮಲಾ ದಾಖಲೆ

ಸತತ 7 ಕೇಂದ್ರ ಬಜೆಟ್‌ಗಳನ್ನು ಮಂಡಿಸಿದ ಭಾರತದ ಮೊದಲ ಹಣಕಾಸು

ಸಚಿವೆ ಎಂಬ ಹೆಗ್ಗಳಿಕೆಗೆ ಸಚಿವೆ ನಿರ್ಮಲಾ ಸೀತಾರಾಮನ್ ಪಾತ್ರರಾಗಲಿದ್ದಾರೆ. ಮೊರಾರ್ಜಿ ದೇಸಾಯಿ ಅವರು ಸತತ 6 ಬಾರಿ ಬಜೆಟ್ ಮಂಡಿಸಿದ್ದರು. 2024ರಲ್ಲಿ ಎರಡು ಬಾರಿ ಬಜೆಟ್ ಮಂಡಿಸಲಾಗುತ್ತಿದೆ. ಫೆ.1ರಂದು 2024-25ನೇ ಹಣಕಾಸು ವರ್ಷದ ಮಧ್ಯಂತರ ಬಜೆಟ್ ಮಂಡಿಸಲಾಗಿದೆ. ಈಗ ಪೂರ್ಣ ಪ್ರಮಾಣದ ಬಜೆಟ್ ಮಂಡನೆಯಾಗಲಿದೆ.

ಬೆಂಗಳೂರಿನ ಅಪೋಲೊ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರನ್ನು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಶನಿವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಶಾಸಕಾಂಗ ನಾಯಕ ಆಯ್ಕೆ ಹೊಣೆ ಎಚ್ಡಿಡಿ ಹೆಗಲಿಗೆ

ಬೆಂಗಳೂರು: ಎಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನಸಭಾ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯ ಹೊಣೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರ ಹೆಗಲಿಗೆ ಹಾಕಲಾಗಿದೆ.

ಜೆ.ಪಿ.ಭವನದಲ್ಲಿ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ಬಹುತೇಕ ನಾಯಕರು ದೇವೇಗೌಡರ ತೀರ್ಮಾನಕ್ಕೆ ಬದ್ಧವೆಂದು ಹೇಳಿರುವುದರಿಂದ, ಎಚ್‌ಡಿಕೆ ಹಾಗೂ ಎಚ್‌ಡಿಡಿ ತೀರ್ಮಾನಕ್ಕೆ ಬಿಡಲಾಗಿದೆ. ಜು.16ರಿಂದ ಆರಂಭವಾಗಲಿರುವ ವಿಧಾನಸಭಾ ಕಲಾಪದ ವೇಳೆಗೆ ಹೆಸರನ್ನು ಪ್ರಕಟಿಸುವ ಸಾಧ್ಯತೆಯಿದೆ.

→ 4

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಮ್ಮೇಳನದಲ್ಲಿ ಸಿಎಂ ಸಿದ್ದು ಪ್ರಶ್ನೆ

ರಾಜ್ಯದಲ್ಲಿ ಡ್ರಗ್ಸ್ ದಂಧೆಗೆ ಕಡಿವಾಣ ಬಿದ್ದಿಲ್ಲವೇಕೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡ್ರಗ್ಸ್ ಮತ್ತು ಮಟ್ಕಾ ವಿರುದ್ಧ ನಿರಂತರ ಕಾರ್ಯಾಚರಣೆ ನಡುವೆಯೂ ಬ್ರೇಕ್ ಆಗಿಲ್ಲವೇಕೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಮ್ಮೇಳನ ಹಾಗೂ ಇಲಾಖೆ ಪರಿಶೀಲನಾ ಸಭೆ ಬಳಿಕ ಮಾತನಾಡಿ, ಕಾನೂನು ಸುವ್ಯವಸ್ಥೆ ಹಾಗೂ ರಾಜ್ಯದ ಅಭಿವೃದ್ಧಿಗೆ ನೇರ ಸಂಬಂಧವಿದೆ. ಆದ್ದರಿಂದ ಕಾನೂನು ಸುವ್ಯವಸ್ಥೆ ಕಾಪಾಡಲೇಬೇಕು. ಕರ್ನಾಟಕ ಪೊಲೀಸರ ಬಗ್ಗೆ ದೇಶದಲ್ಲಿ ಒಳ್ಳೆ ಹೆಸರಿದೆ. ಈ ಹೆಸರಿಗೆ ಕಳಂಕ ತರುವ ಕೆಲಸ ಯಾರೂ ಮಾಡಬಾರದು ಎಂದು ಖಡಕ್ ಸೂಚನೆ ನೀಡಿದರು.

- ಹಿರಿಯ ಅಧಿಕಾರಿಗಳು ಠಾಣೆಗಳಿಗೆ ಭೇಟಿ ನೀಡದಿದ್ದರೆ ಸಮಸ್ಯೆ
- ಡ್ರಗ್ಸ್ ವಿರುದ್ಧ ನಿರಂತರ ಹೋರಾಟದ ನಡುವೆಯೂ ಬ್ರೇಕ್ ಆಗಿಲ್ಲವೇಕೆ?
- ನೂತನ ಕಾನೂನುಗಳಿಗೆ ಪ್ರತ್ಯೇಕ ಆ್ಯಪ್ ಬಿಡುಗಡೆ

ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಠಾಣೆಗಳಿಗೆ ಭೇಟಿ ನೀಡುವುದು ಕಡ್ಡಾಯ. ಸ್ಥಳೀಯ ಪೊಲೀಸ್ ಠಾಣೆಗೆ ತಿಳಿಯದೆ ಯಾವ ಅಪರಾಧಗಳು ನಡೆಯಲ್ಲ. ಮಾದಕ ವಸ್ತು, ಕಳ್ಳತನ, ದರೋಡೆ, ಜೂಜು, ಮಟ್ಕಾ ಮುಂತಾದವು ಗೊತ್ತಿಲ್ಲದೆ ನಡೆಯಲು ಸಾಧ್ಯವಿಲ್ಲ. ಕೆಲವೆಡೆ ಪೊಲೀಸ್‌ನವರು ಇಂಥವರೊಂದಿಗೆ ಶಾಮೀಲಾಗುತ್ತಾರೆ. ಅವರು ಮನಸ್ಸು ಮಾಡಿದರೆ ಬಹುತೇಕ ಅಪರಾಧಗಳನ್ನು ತಡೆಯಲು ಸಾಧ್ಯ ಎಂದರು. ಕರ್ನಾಟಕವನ್ನು ಶಾಂತಿಯ ತೋಟವನ್ನಾಗಿ ನಿರ್ಮಿಸುವುದೇ ನಮ್ಮ ಸರಕಾರ ಧ್ಯೇಯ. ಯಾವುದೇ ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿನ ಕಾನೂನು ಸುವ್ಯವಸ್ಥೆ ಸರಿಯಾಗಿರಬೇಕು. ಆದ್ದರಿಂದ ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕು ಎಂದರು.

→ 4

ಸಾರ್ವಜನಿಕರ ಅಭಿಪ್ರಾಯ ರೂಪಿತವಾಗುವ ಬಗ್ಗೆ ಪೊಲೀಸರು ಗಮನ ಹರಿಸಬೇಕು. ಪೊಲೀಸ್ ವ್ಯವಸ್ಥೆಯಲ್ಲಿ ಜನರ ಆಸ್ತಿಪಾಸ್ತಿ ಪ್ರಾಣ, ಮಾನ ರಕ್ಷಣೆ, ಸುರಕ್ಷಿತ ವ್ಯವಸ್ಥೆ, ನಿರ್ಭಯವಾಗಿ ಬದುಕುವ ವ್ಯವಸ್ಥೆ ನಿರ್ಮಾಣ ಮಾಡುವುದು ನಮ್ಮ ಕರ್ತವ್ಯ. ಒಳ್ಳೆ ಕೆಲಸ ಮಾಡಿದರೆ ಸರ್ಕಾರ ಶ್ಲಾಘನೆ, ಕರ್ತವ್ಯ ಲೋಪವಾದರೆ ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ

- ಸಿದ್ದರಾಮಯ್ಯ ಮುಖ್ಯಮಂತ್ರಿ

ದಕ್ಷಿಣ ಕನ್ನಡ: ಬೀಚ್, ಗಿರಿ ತಾಣಗಳಿಗೆ ಪ್ರವೇಶ ಬಂದ್

ಮಳೆಗಾಲ ಮುಗಿಯುವವರೆಗೂ ಪ್ರವಾಸಿಗರ ಭೇಟಿಗೆ ನಿರ್ಬಂಧ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ವಿವಿಧೆಡೆ ಭೂಕುಸಿತ, ಗುಡ್ಡ ಕುಸಿತ ಪ್ರಕರಣಗಳು ಹೆಚ್ಚಾಗಿದೆ. ಇನ್ನಷ್ಟು ಪ್ರಾಕೃತಿಕ ವಿಕೋಪದ ಹಿನ್ನೆಲೆಯಲ್ಲಿ ಜಿಲ್ಲೆಯ ಗಿರಿತಾಣ, ಶಿಖರಗಳಲ್ಲಿ ಚಾರಣಕ್ಕೆ ಪ್ರವಾಸಿಗರು ತೆರಳದಂತೆ ನಿಷೇಧ ಹೇರಲಾಗಿದೆ.

ದಕ್ಷಿಣ ಕನ್ನಡ ಡಿಸಿ ಮುಲ್ಲೈ ಮುಗಿಲನ್ ನಿಷೇಧ ಆದೇಶ ಹೊರಡಿಸಿದ್ದು, ಮಳೆಗಾಲ ಮುಗಿಯುವವರೆಗೆ ಹೋಮ್ ಸ್ಟೇ, ರೆಸಾರ್ಟ್ ಸೇರಿದಂತೆ ಅರಣ್ಯ ಇಲಾಖೆ ಏರ್ಪಡಿಸುವ ಟ್ರೆಕ್ಕಿಂಗ್, ಸಾಹಸ ಯಾತ್ರೆಗೂ ನಿಷೇಧ ಹೇರಲಾಗಿದೆ. ಇದರ ಜೊತೆಗೆ ನದಿ, ಸಮುದ್ರ ತಟದಲ್ಲಿ ಈಜು, ಮೋಜು-ಮಸ್ತಿ, ಮೀನು ಹಿಡಿಯುವುದು ಇತ್ಯಾದಿ ಚಟುವಟಿಕೆಗಳಿಗೂ ನಿಷೇಧ ಹೇರಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಮುಂದುವರಿದ ಮಳೆ: ಕರಾವಳಿ ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, ದ.ಕನ್ನಡ ಜಿಲ್ಲೆಯಲ್ಲಿ ಭಾನುವಾರವೂ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ.

ಈಶಾನ್ಯ ರಾಜ್ಯಗಳಲ್ಲಿ ರೆಡ್ ಅಲರ್ಟ್

ದೆಹಲಿ: ವಾಯುವ್ಯ ಮತ್ತು ಪೂರ್ವ ಭಾರತ, ಈಶಾನ್ಯ ಪ್ರದೇಶ, ಪಶ್ಚಿಮ ಘಟ್ಟಗಳು ಮತ್ತು ಗುಜರಾತ್‌ನಲ್ಲಿ ವ್ಯಾಪಕವಾದ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಪ್ರಬಲ ಮಾನ್ಸೂನ್ ನಿಂದಾಗಿ ಮುಂದಿನ 24 ಗಂಟೆಗಳಲ್ಲಿ ಹಠಾತ್ ಪ್ರವಾಹ ಉಂಟಾಗಬಹುದು ಎಂದು ಎಚ್ಚರಿಕೆ ನೀಡಿದೆ. ಮುಂದಿನ ಕೆಲವು ದಿನಗಳವರೆಗೆ ಉತ್ತರಾಖಂಡ, ಈಶಾನ್ಯ ರಾಜ್ಯಗಳಲ್ಲಿ ರೆಡ್ ಅಲರ್ಟ್ ಘೋಷಿಸಿದೆ. ಸಿಕ್ಕಿಂ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ಉತ್ತರಾಖಂಡ, ಜಮ್ಮು -ಕಾಶ್ಮೀರ, ರಾಜಸ್ಥಾನದಲ್ಲೂ ಪ್ರವಾಹದ ಎಚ್ಚರಿಕೆ ನೀಡಲಾಗಿದೆ.

ಲೋಕಾ ಚುನಾವಣೆಯಲ್ಲಿ 160 ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿದ ಉತ್ಸಾಹ ಸಂಘಟನೆಗೆ ಒತ್ತು ನೀಡುವಂತೆ ಪಕ್ಷದ ಕಾರ್ಯಕಾರಿಣಿಯಲ್ಲಿ ತೀರ್ಮಾನ

ಸ್ಥಳೀಯ ಸಂಸ್ಥೆ ಚುನಾವಣೆಯೇ ಬಿಜೆಪಿಯ ಮುಂದಿನ ಟಾರ್ಗೆಟ್

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿನ ಹೀನಾಯ ಸೋಲಿನ ಕಹಿಯನ್ನು ಲೋಕಸಭಾ ಚುನಾವಣೆಯಲ್ಲಿ ಮರೆತಿರುವ ರಾಜ್ಯ ಬಿಜೆಪಿ ನಾಯಕರು ಇದೀಗ, ಸ್ಥಳೀಯ ಸಂಸ್ಥೆ ಚುನಾವಣೆ ಎದುರಿಸುವ ಉತ್ಸಾಹದಲ್ಲಿದ್ದಾರೆ.

ವಿಶ್ವವಾಣಿ ವಿಶೇಷ

2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ, 2024ರಲ್ಲಿ ಬಿಜೆಪಿ ಒಂಬತ್ತು ಕ್ಷೇತ್ರಗಳಲ್ಲಿ ಹಿನ್ನಡೆಯಾಗಿದೆ. ಆದರೆ, ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಸುಮಾರು 160 ಕ್ಷೇತ್ರಗಳಲ್ಲಿ ಬಿಜೆಪಿ ಮುನ್ನಡೆ ಕಾಯ್ದುಕೊಂಡಿದೆ. ಆದ್ದರಿಂದ ಇದೀಗ ಒಂಬತ್ತು ಕ್ಷೇತ್ರಗಳ ಸೋಲಿಗಿಂತ ಮುನ್ನಡೆ ಸಾಧಿಸಿರುವ ಕ್ಷೇತ್ರಗಳನ್ನು ಗಮನದಲ್ಲಿರಿಸಿಕೊಂಡು ಪಕ್ಷವನ್ನು ಸಂಘಟಿಸಲು ಬಿಜೆಪಿ ಮುಂದಾಗಿದೆ.

ವರ್ಷಾಂತ್ಯಕ್ಕೆ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ಎದುರಾಗಲಿದೆ.

→ 4

- ವರ್ಷಾಂತ್ಯಕ್ಕೆ ಬಿಬಿಎಂಪಿ, ಜಿಪಂ, ತಾಪಂ ಚುನಾವಣೆ
- ಈಗಿನಿಂದಲೇ ಸಿದ್ಧತೆ ಆರಂಭಿಸಲು ಬಿಜೆಪಿ ತೀರ್ಮಾನ
- ಕಾರ್ಯಕಾರಿಣಿಯಲ್ಲಿ ಚುನಾವಣೆ ಎದುರಿಸುವ ಬಗ್ಗೆ ಚರ್ಚೆ
- ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಲು ತೀರ್ಮಾನ

ಬೂತ್ ಮಟ್ಟದ ಸಂಘಟನೆಗೆ ಒತ್ತು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಈಗಾಗಲೇ ಜಿಲ್ಲಾಮಟ್ಟದಲ್ಲಿ ಪಕ್ಷ ಸಂಘಟನೆಗೆ ಸಾಲುಸಾಲು ಕಾರ್ಯಕ್ರಗಳನ್ನು ಬಿಜೆಪಿ ಕೈಗೊಂಡಿದೆ. ಇದೀಗ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು, ಮುಂದಿನ ದಿನದಲ್ಲಿ ಬೂತ್ ಮಟ್ಟದ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ತಿಂಗಳೊಳಗಾಗಿ ವರದಿ ನೀಡುವಂತೆ ಸೂಚನೆ

ಹೇಮಾವತಿ ನಾಲೆ; ತಾಂತ್ರಿಕ ಸಮಿತಿ ರಚನೆ

ಬೆಂಗಳೂರು: ಹೇಮಾವತಿ ನಾಲೆಯಿಂದ ಕುಣಿಗಲ್ ಹಾಗೂ ಮಾಗಡಿ ತಾಲೂಕಿಗೆ ಕುಡಿಯುವ ನೀರು ಒದಗಿಸುವ ಯೋಜನೆಯ ಸಾಧಕ-ಬಾಧಕಗಳು ಹಾಗೂ ತಾಂತ್ರಿಕ ಮಾಹಿತಿ ಅಧ್ಯಯನಕ್ಕೆ ರಾಜ್ಯ ಸರಕಾರ ಸಮಿತಿ ರಚಿಸಿದ್ದು, ತಿಂಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಿದೆ.

ತುಮಕೂರು ಶಾಖಾ ನಾಲೆಯ ಸರಪಳಿ 70 ಕಿ.ಮೀ.ನಿಂದ ಗುರುತ್ವಾಕರ್ಷಣೆ ಪೈಪ್‌ಲೈನ್ ಅವಳಡಿಸುವ ಮುಖಾಂತರ ಶ್ರೀರಂಗ ಕೆರೆ ತುಂಬಿಸುವ ಯೋಜನೆಯ ಮೊದಲನೇ ಹಂತ ಸರಪಳಿ 0 ಕಿ.ಮೀ.ನಿಂದ 17ನೇ ಕಿ.ಮೀ. ವರೆಗೆ ಹಾಗೂ 2ನೇ ಹಂತ ಸರಪಳಿ 17 ಕಿ.ಮೀ.ನಿಂದ 35.54 ಕಿ.ಮೀ.ವರೆಗೆ ಕಾಮಗಾರಿ ಪ್ರಾರಂಭಿಸಲಾಗಿದೆ.

→ 4

ಸಮಾಚಾರ ಸಣ್ಣದಲ್ಲ

ದರ್ಶನ್: ಅಂಧ ಅಭಿಮಾನ

ಚಿತ್ರದುರ್ಗ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ ಅಂಡ್ ಗ್ಯಾಂಗ್ ಈಗ ಸೆರೆವಾಸದಲ್ಲಿ ಇರುವ ದರ್ಶನ ಅಂಡ್ ಗ್ಯಾಂಗ್ ಒಂದು ಕಡೆಯಾದರೆ ಅಂಧ ಅಭಿಮಾನ ತೋರುವ ದರ್ಶನ ಪ್ಯಾನ್ಸ್ ರಾಜ್ಯದಲ್ಲಿ ವಾಹನಗಳಲ್ಲಿ ಕೈದಿ ನಂಬರ್ ಹಾಕಿಸಿಕೊಳ್ಳುವ ಮೂಲಕ ಅಂದ ಅಭಿಮಾನ ತೋರುವ ಘಟನೆಗಳು ನಿರಂತರವಾಗಿ ನಡೆಯುತ್ತಿವೆ. ಹೌದು ಅಂತಹದೊಂದು ಘಟನೆ ಚಳ್ಳಕೆರೆ ನಗದಲ್ಲಿ ಕೆಲವು ಆಟೋ ಚಾಲಕರು ದರ್ಶನ ಅಂದಾಭಿಮಾನಕ್ಕೆ ಕೈದಿ ನಂಬರ್ 6106 ನಂಬರ್ ಸ್ಟಿಕರ್ ಹಾಕಿಸಿಕೊಳ್ಳುವ ಮೂಲಕ ಅಂದಭಿಮಾನಕ್ಕೆ ಮಾರುಹೊಗಿದ್ದಾರೆ. ಈ ಕ್ರಮಕ್ಕೆ ರಾಜ್ಯದಲ್ಲಿ ಆರ್.ಟಿ.ಓ ಅಧಿಕಾರಿಗಳು ವಾಹನಗಳನ್ನು ತಡೆದು ತಪಾಸಣೆ ನಡೆಸುತ್ತಿದ್ದಾರೆ.

ಹಾಲಸ್ವಾಮಿ ಮಠದ ಉತ್ತರಾಧಿಕಾರಿ ಆಯ್ಕೆ

ಸಾಸ್ವೆಹಳ್ಳಿ: ಹೊನ್ನಾಳಿ ತಾಲೂಕಿನ ರಾಂಪುರ ಗ್ರಾಮದ ಧಾರ್ಮಿಕ ಕ್ಷೇತ್ರ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಬೃಹನ್ ಮಠ ದ ಉತ್ತರಾಧಿಕಾರಿಯನ್ನು ಜು.10 ರ ಬುಧವಾರ ಬೆಳಗ್ಗೆ ಹತ್ತು ಗಂಟೆಗೆ ಶ್ರೀ ಮಠದ ಆವರಣದಲ್ಲಿ ಕಾಶಿ ಜಗದ್ಗುರುಗಳು ಡಾ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಆಯ್ಕೆ ನಡೆಯಲಿದೆ ಜು.9 ರಂದು ರಾಂಪುರ ಶ್ರೀ ಮಠಕ್ಕೆ . ಪಂಚಪೀಠದ ಕಾಶಿ ಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಆಗಮಿಸಲಿದ್ದು ಜು.10 ರ ಬೆಳಿಗ್ಗೆ 9.30 ರಿಂದ ಮಠದ ಉತ್ತರಾಧಿಕಾರಿ ಆಯ್ಕೆ ಬಗ್ಗೆ ಭಕ್ತರ ಸಮ್ಮುಖದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಹಾಲ ಸ್ವಾಮಿಗಳು ಸಾನಿಧ್ಯವಹಿಸುವರು ಎಂದು ಮಠದ ಮೂಲಗಳು ತಿಳಿಸಿವೆ.

ಸಾರಥಿಯಲ್ಲಿ ಪೌಷ್ಟಿಕ ಆಹಾರ ಬಳಕೆ ಶಿಬಿರ

ಹರಿಹರ: ಸಮೀಪದ ಸಾರಥಿ ಗ್ರಾಮದ ಈಶ್ವರನ ದೇವಾಲಯದಲ್ಲಿ ಪೌಷ್ಠಿಕ ಆಹಾರ ಬಳಕೆ ಕುರಿತ ಶಿಬಿರ ಜರುಗಿತು. ಕೊಂಡಜ್ಜಿ ಆರೋಗ್ಯ ಕೇಂದ್ರದ ಸಮುದಾಯ ಆರೋಗ್ಯ ಅಧಿಕಾರಿ ಕಾವ್ಯ ಮಾತನಾಡಿ, ಮನೆಯಲ್ಲಿ ಎಲ್ಲರೂ ಆಹಾರದಲ್ಲಿ ಪಾಲಕ್, ಮೆಂತ್ಯೆ, ಸೌತೆ, ಮೂಲಂಗಿ, ನುಗ್ಗೆ ಹೆಚ್ಚು ಬಳಸಿದಲ್ಲಿ ಅರ್ಧ ಖಾಯಿಲೆ ದೂರ ಮಾಡಬಹುದು ಎಂದರು. ಹಿರಿಯರು ಮತ್ತು ಮಕ್ಕಳು ಜಂಕ್ ಫುಡ್‌ನ್ನು ಅಪೇಕ್ಷೆ ಪಡುವುದು ಅನಾರೋಗ್ಯಕ್ಕೆ ಮಾರ್ಗ ಹಾಕಿದಂತಾಗುತ್ತದೆ, ಮಹಿಳೆಯರೇ ಸ್ವತಃ ಸ್ತನ ಸ್ಪರ್ಶಿಸಿ ಮತ್ತು ಮುಟ್ಟು ಆದ ನಂತರ ವಾಸನೆ ಪರೀಕ್ಷೆ ನಡೆಸಿ ವೈದ್ಯರ ಬಳಿ ಸೂಕ್ತ ಸಲಹೆ ಪಡೆದುಕೊಳ್ಳಿ ಎಂದರು. ಸಮನ್ವಯಾಧಿಕಾರಿ ಭಾರತಿ ಮಾತನಾಡಿ, ಹರಿಹರ ಯೋಜನಾ ವ್ಯಾಪ್ತಿಯಲ್ಲಿ 46 ನಿರ್ಗತಿಕರಿಗೆ ಅಡುಗೆ ಸಾಮಾಗ್ರಿ ವಿತರಿಸಿದ್ದು, ಸಾತ್ವನ ಯೋಜನೆಯ ಮನೆ ನಿರ್ಮಿಸಲು ಅರ್ಜಿಗಳು ಬಂದಿದೆ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಮೂರು ಲಕ್ಷ ರು. ಸುಜ್ಞಾನ ನಿಧಿ ಹಣ ನೀಡಲಾಗಿದೆ ಎಂದರು. ಸು 26 ವಿವಿಧ ತರಹದ ಮನೆ ಅಡುಗೆ ಮಾಡಿ ಮೆಚ್ಚುಗೆ ಪಡೆದ ಲತಾ, ನಿರ್ಮಲಾ, ಅನಿತಾ ರವರಿಗೆ ಬಹುಮಾನ ವಿತರಿಸಲಾಯಿತು. ಸಂಪನ್ಮೂಲ ವ್ಯಕ್ತಿ ಎಚ್.ಎಂ. ಸದಾನಂದ ಆರೋಗ್ಯ ಗೀತೆ ಹಾಡಿದರು. ಮೇಲ್ವಿಚಾರಕ ರಾಜು, ತಿಪ್ಪೇಸ್ವಾಮಿ, ರಂಗನಾಥ್, ಸೇವಾಪ್ರತಿನಿಧಿಗಳಾದ ಸಾವಿತ್ರ, ವೀಣಾ, ಒಕ್ಕೂಟದ ಪ್ರೇಮಾವತಿ, ಕಸ್ತೂರಮ್ಮ, ಜ್ಞಾನ ವಿಕಾಸ ಮಹಿಳಾ ಸಂಘದ ನಾಗರತ್ನ, ಸಜಾತ, ತ್ರಿವೇಣಿ, ಗೀತಾ, ಲತಾ, ಜಯಶ್ರೀ ನೂರಾರು ಮಹಿಳೆಯರು ಇದ್ದರು.

ವಿದ್ಯಾರ್ಥಿ ನಿಲಯ ಪ್ರವೇಶಕ್ಕಾಗಿ ಅರ್ಜಿ

ಚಿತ್ರದುರ್ಗ: ಹಿರಿಯೂರು ತಾಲೂಕು ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳ 2024-25 ನೇ ಸಾಲಿನ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜು.15 ಅರ್ಜಿ ಸಲ್ಲಿಸಲು ಕೊನೆಯ ದಿನ. ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಹಿಂದಿನ ಎಸ್.ಹೆಚ್.ಪಿ. ಪೋರ್ಟಲ್ ಬದಲಾಗಿ ಇಲಾಖೆಯ ಹೆಚ್.ಎಂ.ಐ.ಎಸ್. ತಂತ್ರಾಂಶದ ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಿದೆ. ಒಂದು ವೇಳೆ ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗದೇ ಇದ್ದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಮ್ಯಾನುಯಲ್ ಅರ್ಜಿಯನ್ನು ಜು.15ರ ಒಳಗಾಗಿ ಸಂಬಂಧಿಸಿದ ನಿಲಯ ಪಾಲಕರಿಗೆ, ಸಹಾಯಕ ನಿರ್ದೇಶಕರು ಗ್ರೇಡ್-1, ಸಮಾಜ ಕಲ್ಯಾಣ ಇಲಾಖೆ, ಹಿರಿಯೂರು ಈ ಕಚೇರಿಗೆ ಸಲ್ಲಿಸಿ ಪ್ರವೇಶಾತಿ ಪಡೆಯಬಹುದು ಪ್ರಕಟಣೆ ತಿಳಿಸಿದೆ.

ರಸ್ತೆ ಅಪಘಾತದಲಿ ನಾಲ್ವರ ದುರ್ಮರಣ

ಚಳ್ಳಕೆರೆ: ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ಕು ಜನ ದುರ್ಮರಣ ಹೊಂದಿರುವ ಘಟನೆ ಜರುಗಿದೆ. ಶಿವಮೊಗ್ಗ ಮಾರ್ಗದ ಸಿಂಹಧಾಮ ಸಮೀಪ ಜರುಗಿದ ಈ ಘಟನೆ ಇನ್ನೋರ್ವ ಪಾರ್ಚನರ್ ಹಾಗೂ ಸಿಪ್ಟ್ ವಾಹನಗಳ ಮಧ್ಯೆ ಮುಖಾ ಮುಖಿಯಾಗಿ ಡಿಕ್ಕಿಯಾಗಿದ್ದು.ಚಂದ್ರು(35),ಸಿದ್ದಪ್ಪ(50). ಸೇರಿದಂತೆ ಇಬ್ಬರು, ಒಟ್ಟಾರೆ ನಾಲ್ವರು ಸಾವಿಗಿಡಾಗಿದ್ದಾರೆ.

{ಪ್ರಹ್ಲಾದ ಜೋಶಿ} ಕೇಂದ್ರ ಸಚಿವ

ಮಹದಾಯಿ ಪ್ರವಾಹ್ ಸಮಿತಿ ಭೇಟಿ ಬಗ್ಗೆ ಬೇರೆ ಅರ್ಥ ಕೊಡಬಾರದು. ನ್ಯಾಯಾಧಿಕರಣದ ಆದೇಶದ ನಂತರ ಯೋಜನೆಗೆ ಸಮಿತಿಯನ್ನು ನೇಮಕ ಮಾಡಲಾಗುತ್ತದೆ. ಅದೇ ರೀತಿ ಮಹದಾಯಿ ಯೋಜನೆಗೂ ಸಮಿತಿ ನೇಮಿಸಲಾಗಿದೆ ವಿನಾ ಗೋವಾ ಸಿಎಂ ಮನವಿ ಮೇರೆಗೆ ಈ ಸಮಿತಿ ಬರುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಸಂಸದೆ ಸಭೆ

ರಾಜ್ಯ ಹೆದ್ದಾರಿ ಪರಿವರ್ತನೆಗೆ ಮನವಿ

ದಾವಣಗೆರೆ: ಹರಿಹರ, ಹೊನ್ನಾಳಿ ಹಾಗೂ ಹರಪನಹಳ್ಳಿ ತಾಲೂಕಿನ ಮೂಲಕ ಹಾದುಹೋಗುವ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯಲ್ಲಿ ನಡೆಸಿ ಮಾತನಾಡಿದರು. ಈಗಾಗಲೇ ಈ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು. 2016ರಲ್ಲಿ 800 ಕೋಟಿ ವೆಚ್ಚದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, 2023ಕ್ಕೆ ಇದರ ವೆಚ್ಚ 2017 ಕೋಟಿಗೆ ಏರಿದೆ. ಇದನ್ನು ಶೀಘ್ರವೇ

ಅನುಮೋದನೆಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೆ ತರಲಾಗಿದ್ದು, ಈ ಯೋಜನೆಯಿಂದ ಸಾಮಾಜಿಕ ಹಾಗೂ ಆರ್ಥಿಕ ಬಲವರ್ಧನೆ ಆಗಲಿದೆ ಎಂದರು.

ಆದಷ್ಟು ಶೀಘ್ರ ಪೂರ್ವ ಸೂಚನೆ ಇಲ್ಲದೇ ವಸತಿನಿಲಯಗಳಿಗೆ ಭೇಟಿ ನೀಡಲಿದ್ದು, ಸ್ವಚ್ಛತೆ ಇಲ್ಲದೇ ಇರುವುದು ಮತ್ತು ಆಹಾರ ವಿತರಣೆಯಲ್ಲಿ ಲೋಪದೋಷಗಳಾದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ವಸತಿನಿಲಯಗಳ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಸೂಕ್ತ ರೀತಿಯಲ್ಲಿ ವಿತರಿಸಬೇಕು, ಸಂಗೀತ ಮತ್ತಿತರೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಲು ಪ್ರೋತ್ಸಾಹಿಸಬೇಕು. ಈ ಬಾರಿಯ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಗಳಲ್ಲಿ ವಸತಿ ನಿಲಯಗಳ ವಿದ್ಯಾರ್ಥಿಗಳು ಭಾಗವಹಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಈಗಾಗಲೇ ಅನೇಕ ಕಡೆಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದು, ವಸತಿ ನಿಲಯಗಳ ವಿದ್ಯಾರ್ಥಿಗಳಿಗೂ ಸಹ ದಂತ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸಲಾಗುವುದು

ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಹಾಸ್ಟೆಲ್‌ಗೆ ದಿಢೀರ್ ಭೇಟಿ

ಜಿಲ್ಲೆಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ನೂತನ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ವಸತಿ ನಿಲಯಗಳಲ್ಲಿ ಪೌಷ್ಠಿಕಾಂಶದ ಆಹಾರ ಮತ್ತು ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸೂಚಿಸಿದರು

ಎಂದು ತಿಳಿಸಿದರು. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಆಯಾ ಸಮಾಜಗಳ ಬಡವರಿಗೆ ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳಿದ್ದು, ಪ್ರತಿಯೊಬ್ಬರಿಗೂ ಮುಟ್ಟುವಂತೆ ಕಾರ್ಯಕ್ರಮ ರೂಪಿಸಿ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸುವಾಗ ಭ್ರಷ್ಟಾಚಾರಕ್ಕೆ ಆಸ್ಪದ

> **ಗೃಹ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಸಂಸದರು ಜಿಲ್ಲೆಯ ಹಲವು ವಸತಿನಿಲಯಗಳಲ್ಲಿ ಆಹಾರ ಮತ್ತು ಅನೈರ್ಮಲ್ಯದ ಬಗ್ಗೆ ಸಾಕಷ್ಟು ದೂರುಗಳು ಬಂದಿದ್ದು, ಎಲ್ಲಾ ವಸತಿ ನಿಲಯಗಳಲ್ಲಿ ಪೌಷ್ಠಿಕಾಂಶ ಮತ್ತು ಗುಣಮಟ್ಟದ ಆಹಾರ ವಿತರಣೆ ಆಗಬೇಕು ಹಾಗೂ ಸ್ವಚ್ಛತೆಗೆ ಕ್ರಮಕೈಗೊಳ್ಳುವುದಾಗಿ ಹೇಳಿದರು.**
> -ಡಾ. ಪ್ರಭಾ ಮಲ್ಲಿಕಾರ್ಜುನ್, ಸಂಸದೆ

ನೀಡಬಾರದು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಗಾಯತ್ರಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಬೇಬಿ ಸುನೀತಾ ಉಪಸ್ಥಿತರಿದ್ದರು.

ಗ್ರಾಮದಲ್ಲಿ ಕಲುಷಿತ ನೀರಿನ ಪ್ರಕರಣ ಆಗದಂತೆ ಕ್ರಮ ಕೈಗೊಳ್ಳಿ

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಪಂ ಸಿಇಒ ಎಸ್.ಜೆ.ಸೋಮಶೇಖರ್ ಮಾತನಾಡಿದರು.

ಚಿತ್ರದುರ್ಗ: ಎಲ್ಲ ಗ್ರಾಮ ಪಂಚಾಯತ್ ಮಟ್ಟದಲ್ಲಿ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ, ನೀರುಗಂಟಿಗಳಿಗೆ ಮಾಹಿತಿಯನ್ನು ನೀಡಿ. ಗ್ರಾಮಗಳಲ್ಲಿ ಕಲುಷಿತ ನೀರಿನ ಪ್ರಕರಣಗಳು ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಜೆ.ಸೋಮಶೇಖರ್ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ವಿಭಾಗ ಚಿತ್ರದುರ್ಗ ಅವರ ಸಹಯೋಗದಲ್ಲಿ ಹೊಳಲ್ಕೆರೆ ಮತ್ತು ಹೊಸದುರ್ಗ ತಾಲೂಕುಗಳ ಗ್ರಾಮ ಪಂಚಾಯಿತ್ ಅಭಿವೃದ್ದಿ ಅಧಿಕಾರಿಗಳಿಗೆ ಫೀಲ್ಡ್ ಟೆಸ್ಟ್ ಕಿಟ್ ಮತ್ತು ಹೆಚ್ 2 ಎಸ್ ವೈಲ್ಸ್ ಉಪಯೋಗಿಸಿ ನೀರು ಪರೀಕ್ಷೆ ಕೈಗೊಳ್ಳಲು ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲೆಯ 6 ತಾಲೂಕುಗಳ 189 ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀರು ಪರೀಕ್ಷೆ ಕಿಟ್ಸ್,ವೈಲ್ಸ್ ಉಪಯೋಗಿಸಿ ನೀರಿನ ಪರೀಕ್ಷೆಗಳನ್ನು ಕೈಗೊಳ್ಳಲು ಪರಿಣಾಮಕಾರಿಯಾಗಿ ತರಬೇತಿ

> **ನೀರು ಕುಡಿಯಲು ಯೋಗ್ಯವಾಗಿ ಇಲ್ಲದಿದ್ದರೆ ಅಂತಹ ನೀರನ್ನು ತಾಲ್ಲೂಕು ಮಟ್ಟದ ನೀರು ಪರೀಕ್ಷಾ ಪ್ರಯೋಗಾಲಯಕ್ಕೆ ತಂದು ನೀರು ಪರೀಕ್ಷೆ ಮಾಡಿಸಿ, ನಂತರ ಅದರ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು. ಸ್ವಚ್ಛ ಭಾರತ್ ಮಿಷನ್ ಯೋಜನೆಯ ವೈಯುಕ್ತಿಕ ಗೃಹ ಶೌಚಲಯಗಳು ಬೂದು ನೀರು ನಿರ್ವಹಣೆಯ ಕಾಮಗಾರಿಗಳು ತ್ವರಿತವಾಗಿ ಪ್ರಗತಿ ಸಾಧಿಸಲು ಸೂಚಿಸಿದರು.**
> - ಎಸ್.ಜೆ.ಸೋಮಶೇಖರ್
> ಜಿಪಂ ಸಿಇಒ

ನೀಡಲಾಗಿದೆ. ಪಂಚಾಯತ್ ಮಟ್ಟದಲ್ಲಿ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ಮತ್ತು ನೀರುಗಂಟಿಗಳಿಗೆ ಮಾಹಿತಿಯನ್ನು ನೀಡಿ ಯಾವುದೇ ಗ್ರಾಮಗಳಲ್ಲಿ ಕಲುಷಿತ ನೀರಿನ ಪ್ರಕರಣಗಳು ಆಗದಂತೆ ಕ್ರಮ ಕೈಗೊಳ್ಳಬೇಕು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಹಾಗೂ ಅಭಿಪ್ರಾಯವನ್ನು ಪಡೆದುಕೊಂಡರು.

ಮರೆಯಾಗುವುದ ಉಳಿಸುವುದೇ ಸಂಶೋಧನೆ

ಚಿತ್ರದುರ್ಗ: ''ಅಳಿಸಿ ಹೋಗುವುದನ್ನು ಉಳಿಸುವುದೇ ಸಂಶೋಧನೆಯ ಕೆಲಸವಾಗಬೇಕು'' ಎಂದು ಸಂಸ್ಕೃತಿ ಚಿಂತಕರಾದ ಪ್ರೊ.ಬರಗೂರು ರಾಮಚಂದ್ರಪ್ಪ ಹೇಳಿದರು.

ಚಿತ್ರದುರ್ಗ ತಾಲೂಕಿನ ಜಿ.ಆರ್.ಹಳ್ಳಿ ಜ್ಞಾನಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಶನಿವಾರ ದಾವಣಗೆರೆ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಹಾಗೂ ಜ್ಞಾನ ಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಕನ್ನಡ ಅಧ್ಯಯನ ವಿಭಾಗದ ವತಿಯಿಂದ ''ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು'' ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದರು.

ಸಂಘಟಿತ ವಲಯದಿಂದ ಅಸಂಘಟಿತ ವಲಯಕ್ಕೆ ಸ್ಥಿತ್ಯಂತರಗೊಳ್ಳಬೇಕಾದ ಕಾಲದಲ್ಲಿ ನಾವಿದ್ದೇವೆ. ಸಂಘಟಿತ ವಲಯದ ಸಂಶೋಧನೆಗಳು ಸಾಕಷ್ಟು ನಡೆಯುತ್ತಿದ್ದು, ಇದು ಸ್ವಾಗತಾರ್ಹ.ಆದರೆ ಸಂಘಟಿತ ವಲಯದಿಂದ ಅಸಂಘಟಿತ ವಲಯಕ್ಕೆ ಸಂಶೋಧನೆ ಸ್ಥಿತ್ಯಂತರ, ವಿಸ್ತರಣೆಗೊಳ್ಳಬೇಕಾಗಿದೆ. ಇದು ಹೊಸ ಸವಾಲು ಹಾಗೂ ಹೊಸ ಸಾಧ್ಯತೆಯೂ ಹೌದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಅವರು, ಬರೀ ಹೂವು ನೋಡಿ ಬಹಳ ಸುಂದರವಾಗಿದೆ ಎಂದರೆ ಸಾಲದು, ತನ್ನ ಜೀವನವನ್ನೇ ತೇದು ಹೂವು ಮಾಡಿದ ಮೊಳಕೆಯನ್ನೂ ಜ್ಞಾಪಿಸಿಕೊಳ್ಳಬೇಕು. ಜಿ.ಆರ್.ಹಳ್ಳಿ ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ. ಎಚ್.ಜಿ. ವಿಜಯಕುಮಾರ್ ಮಾತನಾಡಿ, 'ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು'' ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಲೇಖನಗಳನ್ನು ಆಹ್ವಾನಿಸಿ, 210 ಜನ ವಿದ್ವಾಂಸರು, ಸಂಶೋಧಕರು ಲೇಖನಗಳನ್ನು ಕಳಿಸಿದ್ದು, ಇವುಗಳನ್ನು ''ನವನೀತ'' ಎಂಬ ಶೀರ್ಷಿಕೆಯಡಿಯಲ್ಲಿ ಬೃಹತ್ ಗ್ರಂಥ ಪ್ರಕಟಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳ ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಲೇಖನಗಳ ಒಳಗೊಂಡ ''ನವನೀತ'' ಬೃಹತ್ ಗ್ರಂಥವನ್ನು ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾಲಯ

ಶಿಕ್ಷಣದಿಂದ ಸಾಹಿತ್ಯ, ಸಂಶೋಧನೆ ವಿಸ್ತರಣೆ

ಶಿಕ್ಷಣ ವಿಸ್ತರಣೆಯಾದಂತೆ ಸಾಹಿತ್ಯ, ವಿಮರ್ಶೆ, ಸಂಶೋಧನೆಯ ವಿಸ್ತರಣೆಯೂ ಆಯಿತು. ಈ ಹಿನ್ನಲೆಯಲ್ಲಿ ಶಿಕ್ಷಣವು ಹಟ್ಟಿ, ಹಾಡಿ, ಗುಡಿಸಲು, ಮಣ್ಣಿನ ಮನೆ, ಮಹಿಳೆಯರಿಗೆ ಶಿಕ್ಷಣ ಬಂತು. ಹಟ್ಟಿಗೆ ಹಾಡುಗಳಿಂದ ಅದರ ಪಾಡುಗಳು, ಮಣ್ಣಿನ ಮನೆಯಿಂದ ಮನದಾಳ, ಮಹಿಳೆಯರಿಗೆ ಶಿಕ್ಷಣ ತಲುಪಿದ ನಂತರ ಇನ್ನೊಂದು ಆಯಾಮವೇ ಸಾಹಿತ್ಯದಲ್ಲಿ ಸೃಷ್ಟಿಯಾಯಿತು. ಶಿಕ್ಷಣದಿಂದ ಮಹಿಳಾ ಲೋಕ, ಬುಡಕಟ್ಟು ಲೋಕ, ಅಲೆಮಾರಿ ಲೋಕ ಸಾಹಿತ್ಯ ಸಂಸ್ಕೃತಿ ಸೇರಿದಂತೆ ಬೇರೆ ಬೇರೆ ಲೋಕ ಅನಾವರಣಕ್ಕೆ ಕಾರಣವಾಯಿತು ಎಂದು ಪ್ರೊ.ಬರಗೂರು ರಾಮಚಂದ್ರಪ್ಪ ಹೇಳಿದರು.

ಕುಲಪತಿ ಪ್ರೊ.ಬಿ.ಡಿ.ಕುಂಬಾರ, ವಿಶ್ರಾಂತಿ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಕುವೆಂಪು ವಿಶ್ವವಿದ್ಯಾಲಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ನೆಲ್ಲಿಕಟ್ಟೆ ಎಸ್ ಸಿದ್ದೇಶ್, ಜಿ.ಆರ್.ಹಳ್ಳಿ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿ ಪ್ರೊ.ಎಂ.ಯು.ಲೋಕೇಶ್, ದಾವಣಗೆರೆ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ವಿಭಾಗ ಅಧ್ಯಕ್ಷ ಡಾ.ವಿ.ಜಯರಾಮಯ್ಯ, ಶಿಕಾರಿಪುರ ಸುವ್ವಿ ಪಬ್ಲಿಕೇಷನ್ ಪ್ರಕಾಶಕ ಬಿ.ಎನ್.ಸುನೀಲ್ ಕುಮಾರ್, ತುಮಕೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕಿ ಗೀತಾ ವಸಂತ, ಸರಕಾರಿ ಕಲಾ ಕಾಲೇಜು ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ. ಜೆ.ಕರಿಯಪ್ಪ ಮಾಳಿಗೆ ಇದ್ದರು.

ಸ್ಪೆಷಾಲಿಟಿ ಆಸ್ಪತ್ರೆ ಪೂರ್ಣಗೊಳಿಸಲು ಕ್ರಮ

ಚಿಕ್ಕಮಗಳೂರು: ಮುಂಬರುವ ಜನವರಿ ಅಂತ್ಯದೊಳಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣಗೊಳಿಸುವುದರೊಂದಿಗೆ ಪರಿಪೂರ್ಣವಾಗಿ ವೈದ್ಯಕೀಯ ಕಾಲೇಜನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದೆಂದು ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಸಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಆರ್.ಪಾಟೀಲ್ ತಿಳಿಸಿದರು.

ಜಿಲ್ಲೆಯ ಮೆಡಿಕಲ್ ಕಾಲೇಜು ಆವರಣಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದ ನಂತರ ಕಾಲೇಜು ನಿರ್ಮಾಣದ ಬಗ್ಗೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ,ಜಿಲ್ಲೆಯಲ್ಲಿ ಆರಂಭವಾಗಿರುವ ವೈದ್ಯಕೀಯ ಕಾಲೇಜು ಬಹುತೇಕ ಪೂರ್ಣಗೊಂಡಿದ್ದು, ಈ ಕಾಲೇಜಿನ ಸಮಸ್ಯೆಗಳ ಬಗ್ಗೆ ಖುದ್ದಾಗಿ ತಿಳಿದುಕೊಂಡು ಪರಿಹಾರ ಕ್ರಮ ಕೈಗೊಳ್ಳುವುದಕ್ಕಾಗಿ ಭೇಟಿ ನೀಡಿ ಪರಿಶೀಲಿಸಿರುವುದಾಗಿ ಹೇಳಿದರು.

ಕಾಲೇಜು ಸುತ್ತ-ಮುತ್ತ ರಕ್ಷಣೆಗಾಗಿ ಭದ್ರತಾ ಸಿಬ್ಬಂದಿ ನೇಮಕ ಹಾಗೂ ಸ್ವಚ್ಛತಾ ಸಿಬ್ಬಂದಿ ನೇಮಕಕ್ಕೆ ಅನುದಾನ

ವಿನಿಯೋಗಿಸುವ ಬಗ್ಗೆ ಆಡಳಿತಾತ್ಮಕ ಗೊಂದಲಗಳಿದ್ದು ಇದನ್ನು ಸರಿಪಡಿಸಿ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿದ್ದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮೊಹಿಸಿನ್ ಸೂಚನೆ ನೀಡಿದರು. ಪತ್ರಿಕಾಗೋಷ್ಠಿಗೂ ಮುನ್ನ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದು, ಕುಡಿಯುವ ನೀರು, ಶಾಪಿಂಗ್ ಕಾಂಪ್ಲೆಕ್ಸ್ ಹಾಗೂ ಹಾಸ್ಟೆಲ್ ಸಮಸ್ಯೆ ಸೇರಿದಂತೆ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಸಚಿವರ ಗಮನಕ್ಕೆ ತಂದರು. ಪ್ರಯೋಗಾಲಯವನ್ನು ಆರಂಭಿಸಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದಾಗಿ ತಿಳಿಸಿದರು.

ಹಾಲಿ, ಮಾಜಿ ಶಾಸಕರ ಸಮಗಮ: ಕೆರೆ ವೀಕ್ಷಣೆ

ಕೆರೆಗೆ ಹರಿದು ಬಂದ ನೀರು ಸಿಹಿ ಹಂಚಿ ಸಂಭ್ರಮಿಸಿದ ಶಾಸಕರು

ಜಗಳೂರು: ಪಟ್ಟಣದ ಕೆರೆಗೆ 57 ಕೆರೆ ತುಂಬಿಸುವ ಯೋಜನೆಯಡಿ ಪೈಪ್ ಲೈನ್ ಮೂಲಕ ಜಗಳೂರು ಕೆರೆಗೆ ನೀರು ಹರಿದು ಬರುತ್ತಿದ್ದು.ಹಾಲಿ ಮಾಜಿ ಶಾಸಕರುಗಳು ವೀಕ್ಷಿಸಿ ಒಬ್ಬರಿಗೊಬ್ಬರು ಸಿಹಿ ಹಂಚಿ ಸಂಭ್ರಮಿಸಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ,ಇಂದು ತಾಲೂಕಿನ 30 ಕೆರೆಗಳಿಗೆ ನೀರು ಹರಿಯುತ್ತಿರುವುದರಲ್ಲಿ ಕೇವಲ ನನ್ನದು ಪಾತ್ರ ಮಾತ್ರವಲ್ಲ. ಮಾಜಿ ಶಾಸಕ ಎಚ್.ಪಿ. ರಾಜೇಶ್, ಎಸ್.ವಿ. ರಾಮಚಂದ್ರ ಅವರ ನಿರಂತರ ಶ್ರಮವಿದೆ. ಕ್ಷೇತ್ರದ ಜನತೆಗೆ ಕೊಟ್ಟ ಭರವಸೆಯಂತೆ ನೀರಾವರಿ ಕನಸಿನ ಮೊದಲ ಪ್ರಯತ್ನದಿಂದ ದಿಟೂರಿನಿಂದ ಚಟ್ನಹಳ್ಳಿ ಗುಡ್ಡದ ಮೂಲಕ ಕ್ಷೇತ್ರದ 30ಕೆರೆಗಳಿಗೆ ನೀರು ಹರಿಯುತ್ತಿದೆ. ಹಂತಹಂತವಾಗಿ 57 ಕೆರೆಗಳಿಗೂ ಹರಿಸಲಾಗುವುದು. ಸಂಬಂಧಿಸಿದ ಎಂಜಿನಿಯರ್‌ಗಳ ಬಳಿ ಈಗಾಗಲೆ ಚರ್ಚಿಸಲಾಗುವುದು.ನಂತರ ಭದ್ರಾ ಡ್ಯಾಂ ನೀರಿನ ಹರಿವು ಕಡಿಮೆಯಾದ ನಂತರ ಭದ್ರಾಮೇಲ್ದಂಡೆ ಯೋಜನೆ ಕಾಮಗಾರಿ ವೀಕ್ಷಣೆಗೆ ತೆರಳಲಾಗುವುದು. ಪಕ್ಷಾತೀತವಾಗಿ ಆಗಮಿಸಿ ಕ್ಷೇತ್ರದ ಅಭಿವೃದ್ದಿಗೆ ಸಹಕರಿಸಬೇಕು' ಎಂದು ಮನವಿ ಮಾಡಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ತರಳಬಾಳು ಹುಣ್ಣಿಮೆ ಸಂದರ್ಭದಲ್ಲಿ ಕೈಗೊಂಡ ನಿರ್ಣಯದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನ ಆಡಳಿತಾವಧಿಯಲ್ಲಿ 250 ಕೋಟಿ ಹಣ ಬಜೆಟ್ ನಲ್ಲಿ ಮೀಸಲಿಟ್ಟರು.ನಾನು ಹಾಗೂ ಮಾಜಿ ಸಚಿವ ಎಚ್.ಆಂಜನೇಯ ಮತ್ತು ಮಾಜಿ

ಪಟ್ಟಣದ ಕೆರೆಗೆ 57 ಕೆರೆ ತುಂಬಿಸುವ ಯೋಜನೆಯಡಿ ಪೈಪ್ ಲೈನ್ ಮೂಲಕ ಜಗಳೂರು ಕೆರೆಗೆ ನೀರು ಹರಿದು ಬರುತ್ತಿರುವುದು.

> **57 ಕೆರೆ ತುಂಬಿಸುವ ಯೋಜನೆ ಸಾಕಾರಗೊಳ್ಳಲು ಪಕ್ಷಾತೀತ ಆಡಳಿತ ಸರಕಾರಗಳ ಕಾಳಜಿಯಿಂದ ಸಕಾಲದಲ್ಲಿ ಅನುದಾನ ಬಿಡುಗಡೆಗೊಂಡ ಪರಿಣಾಮ ಇಂದು ಕೆರೆಗಳಿಗೆ ಗಂಗೆ ಹರಿದುಬರುತ್ತಿದ್ದಾಳೆ. ಇದೀಗ ಹಾಲಿ ಶಾಸಕರು ಅಧಿವೇಶನದಲ್ಲಿ 57 ಕೆರೆ ತುಂಬಿಸುವ ಯೋಜನೆಯಡಿ ಶೀಘ್ರ ನೀರು ಹರಿಸಲು ಧ್ವನಿಯಾಗಿ ರೈತಪರ ಕಾಳಜಿ ಎತಿಹಿಡಿದಿರುವುದು ಪ್ರಶಂಸನೀಯ ಎಂದರು.**
> -ಎಸ್.ವಿ.ರಾಮಚಂದ್ರ,ಮಾಜಿ ಶಾಸಕ

ನೀರಾವರಿ ಇಲಾಖೆ ಸಚಿವ ಎಂ.ಬಿ.ಪಾಟೀಲ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆವು.ನಂತರ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ ಅವರ ಸಹಕಾರದಿಂದ ತಾಲೂಕಿನ 46 ಹಾಗೂ ವಿಧಾನಸಭಾ ಕ್ಷೇತ್ರದ 11 ಕೆರೆಗಳನ್ನೊಳಗೊಂಡಂತೆ ಒಟ್ಟು 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 670 ಕೋಟಿವರೆಗೂ ಅನುದಾನ ಏಕಕಾಲಕ್ಕೆ ಬಿಡುಗಡೆಗೊಳಿಸಿದ್ದರ ಫಲವಾಗಿ ತಾಲೂಕಿನ ಕೆರೆಗಳು ಶೀಘ್ರ ಭರ್ತಿಯಾಗಲಿವೆ' ಎಂದು ಹೇಳಿದರು. ಸಂದರ್ಭದಲ್ಲಿ ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್,ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್,ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ದಿಬ್ಬದಹಳ್ಳಿ ಶ್ರೀನಿವಾಸ್, ಪೂಜಾರಿ ಸಿದ್ದಪ್ಪ, ಸೇರಿದ್ದಂತೆ ನೂರಾರು ಸಾರ್ವಜನಿಕರು ಕೆರೆ ವಿಕ್ಷಣೆಯಲ್ಲಿ ತೊಡಗಿದ್ದರು.

ವೈದ್ಯಕೀಯ ವೃತ್ತಿ ವ್ಯಾಪಾರವಲ್ಲ, ಒಂದು ಸೇವೆ

ಹೊನ್ನಾಳಿ: ವೈದ್ಯಕೀಯ ವೃತ್ತಿಯು ವ್ಯಾಪಾರವಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಇದು ಒಂದು ಸೇವಾ ವೃತ್ತಿಯಾಗಿದೆ. ವೈದ್ಯರಾಗಿ ಸೇವೆ ಸಲ್ಲಿಸಿದ ಡಾ.ಬಿ.ಸಿ ರಾಯ್ ನಮಗೆ ಮಾದರಿ. ಮುಖ್ಯಮಂತ್ರಿಯಾಗಿದ್ದರೂ ಅವರ ಸೇವಾ ಮನೋಭಾವ ಇಂದಿಗೂ ಪ್ರಸ್ತುತ ಎಂದು ಭಾರತೀಯ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಎಚ್.ಪಿ ರಾಜ್ ಕುಮಾರ್ ಹೇಳಿದರು.

ಪಟ್ಟಣದ ಭಾರತೀಯ ವಿದ್ಯಾಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ವೈದ್ಯರ ದಿನಾಚಾರಣೆಯಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಏನಾದರೂ ಆಗು ಮೊದಲು ನಿನ್ನ ಒಲವಿನಂತೆ ಆಗು. ಹೊನ್ನಾಳಿ ತಾಲೂಕಿನ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿ, ಹಳ್ಳಿಯಲ್ಲಿಯೇ ಓದಿ, ಹಳ್ಳೂರು ಡಾಕ್ಟರ್ ಎಂದು ಖ್ಯಾತಿ ಪಡೆದ ಡಾ.ಚಿದಾನಂದ್ ಅವರ ಸೇವೆ ಶ್ಲಾಘನೀಯವಾದದ್ದು. ಕರೋನ ಸಂದರ್ಭದಲ್ಲಿ ಬಹಳಷ್ಟು ವೈದ್ಯರು ಕರೋನಕ್ಕೆ ತುತ್ತಾದರು ತಮ್ಮ ಸೇವೆಯಿಂದ ಹಲವರ ಪ್ರಾಣ ಉಳಿಸಿ ದೇವರಾಗಿದ್ದಾರೆ ಎಂದರು.

ಹಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ಯ ವೈದ್ಯರಾದ ಎಲ್.ಚಿದಾನಂದ್ ಮಾತನಾಡಿ, ಇಂದು ಶುಗರ್, ಬಿಪಿ ಹೆಚ್ಚಿನದಾಗಿ ಕಾಣಿಸಿಕೊಳ್ಳುತ್ತಿವೆ. ಇವುಗಳನ್ನು ಹತೋಟಿಯಲ್ಲಿಡಬೇಕಾದರೆ ನಮ್ಮ ಒಳ್ಳೆಯ ಆಹಾರವನ್ನು ಸೇವಿಸಬೇಕು. ಸಮತೋಲನ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳುವುದು ಅತಿಮುಖ್ಯ ಎಂದರು.

ಹಳ್ಳೂರಿನ ವೈದ್ಯರಾದ ಎಲ್.ಚಿದಾನಂದ್ ಅವರನ್ನು ಭಾರತೀಯ ವಿದ್ಯಾ ಸಂಸ್ಥೆ, ಹೊನ್ನಾಳಿಯ ಔಷಧಿ ವರ್ತಕರ ಸಂಘ ಹಾಗೂ ಭಾರತೀಯ ವೈದ್ಯಕೀಯ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಶೋಭ ಸಿಎಂ ನಿರೂಪಿಸಿದರು, ಪುನೀತ್ ಎಂ.ಕೆ ಸ್ವಾಗತಿಸಿದರು,



ಭಾರತೀಯ ವಿದ್ಯಾ ಸಂಸ್ಥೆಯಲ್ಲಿ ಹಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯರಾದ ಡಾ.ಎಲ್ ಚಿದಾನಂದ್ ರನ್ನು ಸನ್ಮಾನಿಸಲಾಯಿತು.

ಪ್ರಾಸ್ತಾವಿಕವಾಗಿ ಶಿಲ್ಪ ಮಾತನಾಡಿದರು, ಶಶಿಧರ್ ವಂದಿಸಿದರು, ಅಶೋಕ್ ಎಚ್. ಸನ್ಮನಿತರ ಪರಿಚಯ ಮಾಡಿದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ವೈದ್ಯರುಗಳಾದ ಡಾ. ಶಕುಂತಲಾ ರಾಜ್ ಕುಮಾರ್, ಡಾ. ನರೇಂದ್ರ, ಡಾ. ಮಲ್ಲಿಕಾರ್ಜುನ್, ಡಾ. ರಾಜನಾಯ್ಕ್ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಶಿವಾನಂದ ಸ್ವಾಮಿ, ಕಾರ್ಯದರ್ಶಿ ಶೈಲೇಶ್, ಖಜಾಂಚಿ ಪ್ರಕಾಶ್ ಹೆಬ್ಬಾರ್, ವಿಶ್ವನಾಥ್, ದತ್ತಾತ್ರೆಯ ವೈಶ್ಯರ, ಲೋಕೇಶ್ ಭಾರತೀಯ ವಿದ್ಯಾಸಂಸ್ಥೆಯ ಸದಸ್ಯರುಗಳಾದ ಕೆ. ಸೋಮಶೇಖರಪ್ಪ, ಅರುಣ್ ಕುಮಾರ್ ಎಚ್.ಎಂ, ಎಚ್.ಎನ್ ಗುರುದತ್, ಸುರೇಶ್ ಶೇಟ್, ಎಚ್.ಟಿ ಜಯಪ್ಪ, ನಾಮದೇವ್, ಹಾಲೇಶ್ ಕುಂಕೊದ್, ಗಣೇಶ್ ಕೆ. ಇದ್ದರು.

ಪತ್ರಕರ್ತರ ಸಂಘಕ್ಕೆ ವಾಣಿಜ್ಯ ಮಳಿಗೆ ಕೊಡಿ

ಹೊಸದುರ್ಗ: ಪಟ್ಟಣದ ಸಂತೆ ಹೊಂಡದ ಪಕ್ಕದ ಅಂಗಡಿ ಮಳಿಗೆಗಳ ಸಂಕೀರ್ಣದಲ್ಲಿ ತಾಲೂಕು ಪತ್ರಕರ್ತರ ಸಂಘಕ್ಕೊಂದು ವಾಣಿಜ್ಯ ಮಳಿಗೆ ಕೊಡಿ. ಪತ್ರಕರ್ತರ ಭವನ ನಿರ್ಮಾಣಕ್ಕೆ ಸೂಕ್ತ ಸ್ಥಳ ಹುಡುಕಿ ಎಂದು ಶಾಸಕ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಬಿ.ಜಿ.ಗೋವಿಂದಪ್ಪ ಅವರು ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದರು. ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಸಂತೆ ಹೊಂಡದ ಪಕ್ಕದಲ್ಲಿ ನಗರೋತ್ಥಾನ 3ನೇ ಹಂತದ ಅನುದಾನದಡಿ 1.17 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗಳ ಸಂಕೀರ್ಣವನ್ನು ಅವರು ಶನಿವಾರ ಉದ್ಘಾಟಿಸಿದ ಬಳಿಕ ಪತ್ರಕರ್ತರ ಮನವಿಗೆ ಪ್ರತಿಕ್ರಿಯಿಸಿ ಅವರು ಮಾತನಾಡಿದರು. ಮಧ್ಯೆದಲ್ಲಿರುವ ಜಾಗದಲ್ಲಿ ಹೋಟೆಲ್ ಮಳಿಗೆ ಪ್ರಾರಂಭಿಸುವುದಾದರೆ ಮೊದಲು ಸ್ವಚ್ಛತೆಗೆ ಆದ್ಯತೆ ಕೊಟ್ಟು ಕಾಪಾಡಬೇಕು. ಪಟ್ಟಣದ 23 ವಾರ್ಡ್ ಸ್ವಚ್ಛತೆಯನ್ನು ಸಮರ್ಪಕವಾಗಿ ಕಾಪಾಡುವ ಜೊತೆಗೆ ಕುಡಿಯುವ ನೀರು ಸರಬರಾಜು ಪೈಪ್ ಲೈನ್ ಒಡೆದಿದ್ದರೆ ತ್ವರಿತವಾಗಿ ದುರಸ್ತಿ ಮಾಡಬೇಕು. ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸಿ ಈ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರು ಬಾರದಂತೆ ಎಚ್ಚರ ವಹಿಸಿ ಎಂದು ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯರಾದ ಎಂ.ಪಿ.ಶಂಕರ್, ಅಲ್ತಾಫ್ ಪಾಷಾ, ಪುರಸಭೆ ಮುಖ್ಯಾಧಿಕಾರಿ ಜಿ.ವಿ.ತಿಮ್ಮರಾಜು, ಎಂಜಿನಿಯರ್ ವೆಂಕಟೇಶಲು, ಸದಸ್ಯ ಶ್ರೀನಿವಾಸ್, ಜ್ಯೋತಿ ಕೆಂಚಪ್ಪ, ದೊಡ್ಡಯ್ಯ ಹಾಜರಿದ್ದರು.

ಜಗಜೀವನರಾಂ ಪುಣ್ಯ ಸ್ಮರಣೆ

ಚಳ್ಳಕೆರೆ : ಹಸಿರುಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ ರಾಮ್ ಅವರ ಪುಣ್ಯಸ್ಮರಣೆಯಂದು ಅವರಿಗೆ ನಮನಗಳನ್ನು ಸಲ್ಲಿಸೋಣ ಎಂದು ಸ್ಥಳೀಯ ಶಾಸಕರು ಹಾಗೂ ಕರ್ನಾಟಕ ರಾಜ್ಯದ ಸಣ್ಣ ಕೈಗಾರಿಕೆಗಳ ಅಭಿವೃದ್ದಿ ನಿಗಮದ ಅಧ್ಯಕ್ಷ ಟಿ.ರಘುಮೂರ್ತಿ ಹೇಳಿದರು. ನಗರದ ಶಾಸಕರ ಭವನದಲ್ಲಿ ಬಾಬು ಜಗಜೀವನ್ ರಾಮ್ ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು, ಸ್ವಾತಂತ್ರ್ಯ ಹೋರಾಟಗಾರ, ಹಸಿರುಕ್ರಾಂತಿಯ ಹರಿಕಾರ ಬಾಬೂಜಿ ಅವರು ದೇಶಕ್ಕಾಗಿ ನೀಡಿದ ಕೊಡುಗೆಗಳು ಅಪಾರ. ಇಂತಹ ಮಹಾನ್ ನಾಯಕರ ಆದರ್ಶ, ಚಿಂತನೆಗಳು ಇಂದಿಗೂ ದಾರಿದೀಪವಾಗಿವೆ. ಶೋಷಿತರ ದಮನಿತರ ಪರವಾಗಿ ಹೋರಾಟ ನಡೆಸಿದ ಮಾಜಿ ಉಪ ಪ್ರಧಾನ ಮಂತ್ರಿ ಬಾಬು ಜಗಜೀವನ ರಾಮ್ ಅವರ ಪುಣ್ಯತಿಥಿಯಂದು ಅವರಿಗೆ ಅನಂತ ಪ್ರಣಾಮಗಳು. ಕೃಷಿ, ರಕ್ಷಣಾ ಸಚಿವರಾಗಿ ಅವರು ಸಲ್ಲಿಸಿದ ಸೇವೆ ಸ್ಮರಣೀಯವಾದದ್ದು ಎಂದು ಹೇಳಿದರು. ಕಾಂಗ್ರೆಸ್ ಅಧ್ಯಕ್ಷ ಕೆ.ವೀರಭದ್ರಪ್ಪ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರ, ದೇಶದ ಹಸಿರು ಕ್ರಾಂತಿಯ ಹರಿಕಾರ ಹಾಗೂ ಕಾರ್ಮಿಕರ ಕಲ್ಯಾಣಕ್ಕಾಗಿ ದುಡಿದ ಮುತ್ಸದ್ಧಿ ಹಾಗೂ ಮಾಜಿ ಉಪ ಪ್ರಧಾನಿ ಬಾಬು ಜಗಜೀವನರಾಮ್ ಅವರು ದೇಶಕ್ಕೆ ನೀಡಿರುವ ಕೊಡುಗೆ ಅಪಾರ, ಜಗಜೀವನ್ ರಾಮ್ ಅವರು ಮೇಲುಕೀಳೆಂಬ ತಾರತಮ್ಯ, ಜಾತಿ ಪದ್ಧತಿ, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಶ್ರಮಿಸಿದರು. ಸಾಮಾಜಿಕ ಬದಲಾವಣೆಗಾಗಿ ಹೋರಾಡಿದರು. ಶೋಷಿತರ ಪರವಾಗಿ ದನಿ ಎತ್ತಿದ ಅವರ ಚಿಂತನೆಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು.

ಶಾಲೆಗಳ ಉಳಿವಿಗೆ ಸಹಾಯ ಅಗತ್ಯ

ಹರಿಹರ: ಬೆಂಗಳೂರಿನ ಹೆಲ್ಪ್ ಟು ಎಜುಕೇಷನ್ ಫೌಂಡಷನ್ ಸಂಸ್ಥೆಯಿಂದ ಶುಕ್ರವಾರದಂದು ತಾಲ್ಲೂಕಿನ ಕೆಂಚನಹಳ್ಳಿ, ಪಾಮೇನಹಳ್ಳಿ, ಜಿ.ಟಿ.ಕಟ್ಟೆ ಹಾಗೂ ಹರಿಹರದ ಜೈಭೀಮನಗರ, ವಿದ್ಯಾನಗರ ಮತ್ತು ಅಮರಾವತಿ ಗ್ರಾಮಗಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಒಟ್ಟು 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ನೋಟ್ ಬುಕ್‌ಗಳನ್ನು ವಿತರಿಸಲಾಯಿತು. ಜೈಭೀಮನಗರದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿತರಣಾ ಸಮಾರಂಭದಲ್ಲಿ ಭಾಗವಹಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಚ್.ಮಲ್ಲೇಶ್ ಮಾತನಾಡಿ, ರಾಜ್ಯದಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಾ ಬಂದಿರುವುದು ಆತಂಕಕಾರಿಯಾಗಿದೆ ಎಂದು ಹೇಳಿದರು. ಬೆಂಗಳೂರಿನಲ್ಲಿರುವ ದೊಡ್ಡ ಸಂಸ್ಥೆಗಳು ತಮ್ಮ ಲಾಭಾಂಶದಲ್ಲಿ ಕೆಲ ಭಾಗವನ್ನು ಗ್ರಾಮೀಣ ಭಾಗದ ಶಾಲೆಗಳ ವಿದ್ಯಾರ್ಥಿಗಳ ಪಾಠೋಪಕರಣಕ್ಕೆ ವ್ಯಯಿಸುತ್ತಿರುವುದು ಶ್ಲಾಘನೀಯ, ಇದೇ ಮಾದರಿಯಲ್ಲಿ ಇತರೆ ಸಂಸ್ಥೆಗಳು ಶಾಲೆಗಳ ಭೌತಿಕ ಅಭಿವೃದ್ಧಿಗೂ ಅನುದಾನ ಬಿಡುಗಡೆ ಮಾಡಿದರೆ ಉತ್ತಮ ಎಂದು ಸಲಹೆ ನೀಡಿದರು. ಹೆಲ್ಪ್ ಟು ಎಜುಕೇಷನ್ ಫೌಂಡಷನ್ ಸಂಸ್ಥೆಯ ಸದಸ್ಯ ಮೋಹನ್ ಮಾತನಾಡಿ, ಪೋಷಕರು ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೆ ಆಸ್ತಿ ಎಂದು ಭಾವಿಸಿ ಅವರಿಗೆ ಉತ್ತಮ ಶಿಕ್ಷಣ ದೊರಕಿಸಬೇಕೆಂದು ಕರೆ ನೀಡಿದರು. ಹೆಲ್ಪ್ ಟು ಎಜುಕೇಷನ್ ಫೌಂಡಷನ್ ಸಂಸ್ಥೆಯ ಮತ್ತೊಬ್ಬ ಸದಸ್ಯ ದೇವರಾಜ್ ಮಾತನಾಡಿ, ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದೆಂಬುದು ನಮ್ಮ ಸಂಸ್ಥೆಯ ಉದ್ದೇಶವಾಗಿದೆ.

ಒಪಿಎಸ್ ಸೌಲಭ್ಯ ಸರಕಾರಕ್ಕೆ ಆಗ್ರಹ

ಹೊಸದುರ್ಗ: ಹಳೆಯ ಪಿಂಚಣಿ(ಒಪಿಎಸ್) ಸೌಲಭ್ಯ ಕಲ್ಪಿಸುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರ ಸಂಘದ ತಾಲೂಕು ಘಟಕದವರು ಶನಿವಾರ ತಹಸೀಲ್ದಾರ್ ತಿರುಪತಿ ಪಾಟೀಲ್ ಅವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. 2006ರಿಂದ ಈಚೆಗೆ ಸರಕಾರಿ ನೌಕರರಿಗೆ ಸೇರಿದವರಿಗೆ ಒಪಿಎಸ್ ರದ್ದುಪಡಿಸಿ ಎನ್ ಪಿಎಸ್ ಜಾರಿ ಮಾಡಲಾಗಿದೆ. ಆದರೆ ನಮಗೆ ಮಾತ್ರ ಯಾವುದೇ ಸೌಲಭ್ಯ ಕಲ್ಪಿಸದಿರುವುದು ದುರಂತ. ಹಾಗಾಗಿ ನಮಗೂ ಹಳೆಯ ಒಪಿಎಸ್ ಸೌಲಭ್ಯ ನೀಡಬೇಕು. 2015ರಿಂದ ಪ್ರಸ್ತುತದ ವರೆಗೆ ಅನುದಾನಿತ ಶಾಲಾಕಾಲೇಜಿನಲ್ಲಿ ಖಾಲಿ ಇರುವ ಹುದ್ದೆ ಶೀಘ್ರ ಭರ್ತಿ ಮಾಡಿಕೊಳ್ಳಬೇಕು. ನಮಗೂ ಜ್ಯೋತಿ ಸಂಜೀವಿನಿ ಆರೋಗ್ಯ ಸೌಲಭ್ಯ ಕೊಡಬೇಕು. 2014ರ ವಿಧೇಯಕ ರದ್ದುಪಡಿಸಬೇಕು. ಮಕ್ಕಳ ಅನುಪಾತವನ್ನು ಪ್ರೌಢಶಾಲೆಯಲ್ಲಿ 25ರಿಂದ 20ಕ್ಕೆ , ಪ್ರಾಥಮಿಕ ಶಾಲೆಯಲ್ಲಿ 40ರಿಂದ 30ಕ್ಕೆ ಇಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪಿಂಚಣಿ ವಂಚಿತ ನೌಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಪ್ರೌಢಶಾಲೆ ಸಹಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎನ್.ಓ.ಪ್ರಕಾಶ್, ಪಿಂಚಣಿ ವಂಚಿತ ನೌಕರರ ತಾಲೂಕು ಘಟಕದ ಅಧ್ಯಕ್ಷ ರುದ್ರೇಶ್, ಉಪಾಧ್ಯಕ್ಷ ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಮೂರ್ತಪ್ಪ, ಖಜಾಂಚಿ ಕೆ.ಸುರೇಶ್, ಮಲ್ಲಿಕಾರ್ಜುನ್, ವಸಂತಕುಮಾರ್, ಆನಂದಮೂರ್ತಿ ಪಿಂಚಣಿ ವಂಚಿತ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ಶಿವಮೊಗ್ಗ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಶಿವಮೊಗ್ಗ ಪ್ರೆಸ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜು.21 ರಂದು ಶಿವಮೊಗ್ಗದಲ್ಲಿ ನಡೆಯುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ ಪತ್ರಕರ್ತರು ಮತ್ತು ಪತ್ರಿಕಾಲಯಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳು ತಮ್ಮ ಅಂಕಪಟ್ಟಿ ಪ್ರತಿ, ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ತಮ್ಮ ಪೋಷಕರು ಪ್ರತಿನಿಧಿಸುವ ಪತ್ರಿಕಾ ಸಂಸ್ಥೆಯ ದೃಢೀಕರಣ ಪತ್ರವನ್ನು ಶಿವಮೊಗ್ಗ ಪತ್ರಿಕಾಭವನ ಕಚೇರಿಗೆ ಸಲ್ಲಿಸಬಹುದಾಗಿದೆ. ಜು.15 ರೊಳಗೆ ಮಾಹಿತಿ ನೀಡಬೇಕಿದ್ದು, ನಂತರ ಬಂದ ಹೆಸರುಗಳನ್ನು ಪರಿಗಣಿಸುವುದಿಲ್ಲ. 93411 26340, 9844518866,94481 38183 ಮಾಹಿತಿಗಾಗಿ ಸಂಪರ್ಕಿಸಬಹುದು.

ವಾಯುಸೇವೆ ಪರೀಕ್ಷೆಗೆ ಅರ್ಜಿ

ಶಿವಮೊಗ್ಗ: ಭಾರತೀಯ ವಾಯುಪಡೆಯಿಂದ ಅಗ್ನಿಪಥ್ ಯೋಜನೆಯಡಿಯಲ್ಲಿ ಅಗ್ನಿವೀರ್ ವಾಯು ಸೇವೆಗೆ ಆಯ್ಕೆ ಪರೀಕ್ಷೆಗಾಗಿ ಎಸ್.ಎಸ್.ಎಲ್.ಸಿ, ದ್ವಿತೀಯ ಪಿಯುಸಿ ತತ್ಸಮಾನ, ಡಿಪ್ಲೊಮಾ, ವೃತ್ತಿಪರ ಕೋರ್ಸ್ ವಿದ್ಯಾರ್ಹತೆ ಹೊಂದಿರುವ, 03, ಜುಲೈ-2004 ರಿಂದ 03, ಜನವರಿ 2008ರ ನಡುವೆ ಜನಿಸಿರುವ ಅವಿವಾಹಿತ ಪುರುಷ ಮತ್ತು ಮಹಿಳೆಯರಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯನ್ನು ಆನ್‌ಲೈನ್ https://agnipathvayu.cdac.in ರಲ್ಲಿ ನೊಂದಾಯಿಸಿಕೊಂಡು, ಜಿಲ್ಲಾ ಉದ್ಯೋಗ ವಿನಿಯಮ ಕಚೇರಿ, ಗುತ್ಯಪ್ಪ ಕಾಲೋನಿ, ಪಂಪಾನಗರ 2ನೇ ಕ್ರಾಸ್, ಸಾಗರ ರಸ್ತೆ, ಶಿವಮೊಗ್ಗ ಇಲ್ಲಿಗೆ ಸಂಪರ್ಕಿಸುವಂತೆ ಉದ್ಯೋಗಾಧಿಕಾರಿ ಖಲಂದರ್ ಖಾನ್ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಖುದ್ದಾಗಿ ಅಥವಾ ದೂ.ಸಂ.: 08182-255293/ 9108235132 ಗಳನ್ನು ಸಂಪರ್ಕಿಸುವುದು.

ಉದ್ಯಮಶೀಲತಾ ತರಬೇತಿ ಶಿಬಿರ

ಶಿವಮೊಗ್ಗ: ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಸಿಡಾಕ್(ಕರ್ನಾಟಕ ಉದ್ಯಮಶೀಲತಾಭಿವೃದ್ದಿ ಕೇಂದ್ರ, ಧಾರವಾಡ) ಸಂಸ್ಥೆಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಇಚ್ಚಿಸುವ ಅಭ್ಯರ್ಥಿಗಳಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ತರಬೇತಿ ಶಿಬಿರವನ್ನು ಜುಲೈ ತಿಂಗಳ ಕೊನೆಯ ವಾರದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಕನಿಷ್ಟ 18 ವರ್ಷ ವಯಸ್ಸಿನವರು ಹಾಗೂ ಓದಲು/ಬರೆಯಲು ಬರುವ ಅಭ್ಯರ್ಥಿಗಳು ಭಾಗವಹಿಸಬಹುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಚೇರಿ, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ, 3ನೇ ಮಹಡಿ, ಶಿವಪ್ಪನಾಯಕ ಕಾಂಪ್ಲೆಕ್ಸ್, ನೆಹರು ರಸ್ತೆ, ಶಿವಮೊಗ್ಗ, ಅವಿನಾಶ್ ಎ, ತರಬೇತುದಾರರು ಮೊ.ಸಂ: 9164811887 ಸಂಪರ್ಕಿಸಹುದು. ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು 2 ಪಾಸ್‌ಪೋರ್ಟ್ ಅಳತೆಯ ಪೋಟೊ ಹಾಗೂ ಆಧಾರ್ ಕಾರ್ಡನ ಪ್ರತಿಯೊಂದಿಗೆ ಸಂಪರ್ಕಿಸಬಹುದೆಂದು ಸಿಡಾಕ್ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಶಿವಮೊಗ್ಗ: ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯು 2023-24ನೇ ಸಾಲಿನಲ್ಲಿ ಒಂದನೇ ತರಗತಿಯಿಂದ ಅಂತಿಮ ಪದವಿ ಡಿಪ್ಲೊಮಾ ಮತ್ತು ವೃತ್ತಿಪರ ಪದವಿಯವರೆಗೆ ಕರ್ನಾಟಕದಲ್ಲಿರುವ ಹಾಗೂ ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ಮೂಲ ನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಆಸಕ್ತರು ನಿಗದಿತ ನಮೂನೆ ಅರ್ಜಿಯನ್ನು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯೊಂದಿಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ಒಂದನೇ ತರಗತಿಯಿಂದ ಅಂತಿಮ ಪದವಿ ಡಿಪ್ಲೊಮಾ, ವೃತ್ತಿಪರ ಪದವಿವರೆಗಿನ ವಿದ್ಯಾರ್ಥಿಗಳು ಸೆ .30 ರೊಳಗಾಗಿ ಹಾಗೂ ವೃತ್ತಿಪರ ಪದವಿ ವಿದ್ಯಾರ್ಥಿಗಳು ಅ .31ರೊಳಗಾಗಿ ಸಲ್ಲಿಸುವಂತೆ ಇಲಾಖೆಯ ಉಪ ನಿರ್ದೇಶಕ ಡಾ. ಸಿ.ಎ.ಹಿರೇಮಠರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಎನ್. ಚಲುವರಾಯಸ್ವಾಮಿ } ಸಚಿವ
ಸಾಮಾನ್ಯವಾಗಿ ಪ್ರತಿವರ್ಷ ಕೆಆರ್‌ಎಸ್ ಅಣೆಕಟ್ಟಿನಿಂದ ಜುಲೈ ಎರಡನೇ ವಾರದಲ್ಲಿ ವಿ.ಸಿ ನಾಲೆಗೆ ನೀರು ಹರಿಸಲಾಗುತ್ತಿತ್ತು. ಆದರೆ ಈ ಬಾರಿ ಮಾರ್ಚ್‌ನಲ್ಲಿ ನೀರು ಹರಿಸದ ಕಾರಣ ಜುಲೈ 8 ರಿಂದ 15 ದಿನಗಳ ಕಾಲ ವಿ.ಸಿ ನಾಲೆಗೆ ನೀರು ಹರಿಸಲಾಗುವುದು. ಈಗ ಕೆರೆಕಟ್ಟೆ ತುಂಬಿಸಲು ಹಾಗೂ ಜಾನುವಾರುಗಳಿಗಾಗಿ ಮಾತ್ರ ನಾಲೆಗೆ ನೀರು ಬಿಡಲು ನಿರ್ಧರಿಸಲಾಗಿದೆ.

ತಮ್ಮ ಹಗರಣಗಳ ಮುಚ್ಚಿ ಹಾಕಲು ಬಿಜೆಪಿ ನಾಯಕರಿಂದ ಹೋರಾಟ: ಆಯನೂರು ವಾಗ್ದಾಳಿ

ಬಿಜೆಪಿಯಿಂದ ಸೋಗಲಾಡಿ ರಾಜಕಾರಣ

ಆಯನೂರು ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ವಿರುದ್ಧ ಮಾತನಾಡಿದರು.

ಶಿವಮೊಗ್ಗ: ಭ್ರಷ್ಟಚಾರದ ಕಾರಣಕ್ಕಾಗಿ ಅಧಿಕಾರ ಕಳೆದುಕೊಂಡ ಬಿಜೆಪಿ ನಾಯಕರು ತಮ್ಮ ಸರಕಾರದ ಅವಧಿಯಲ್ಲಿ ನಡೆದ ಹಗರಣಗಳನ್ನು ಮುಚ್ಚಿಹಾಕಲು ಹಾಗು ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಈಗಿನ ಸರಕಾರದ ವಿರುದ್ಧ ಹೋರಾಟ ಮಾಡುತ್ತಿರುವುದು ಸೋಗಲಾಡಿತನ ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೂಡ ಹಗರಣಕ್ಕೆ ಸಂಬಂಧಿಸಿದಂತೆ ಹಗರಣ ಮಾಡಿದವರು ಬಿಜೆಪಿಯವರು. ಅವರ ಕಾಲದಲ್ಲಿಯೇ ಮಂಜೂರಾತಿ ನೀಡಿದ್ದರು. ಈಗ ಅದರ ವಿರುದ್ಧವೇ ಹೋರಾಟ ಮಾಡುತ್ತಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರ ಎಲ್ಲೆಲ್ಲಿ ಇದೆಯೂ ಅಲ್ಲೆಲ್ಲ ಈ ಬಿಜೆಪಿಗರು ಭ್ರಷ್ಟಚಾರ ಮಾಡಿದವರೇ. ಶಿವಮೊಗ್ಗದಲ್ಲಿ ವಾಜಪೇಯಿ ಹೆಸರಿನಲ್ಲಿ ಮಾಡಿರುವ ಬಡಾವಣೆಯಲ್ಲಿ ಭ್ರಷ್ಟಚಾರವಾಗಿದೆ. ಅರ್ಜಿಹಾಕಿದವರಿಗೆ ನಿವೇಶನ ನೀಡದೇ ವಂಚಿಸಲಾಗಿದೆ. ಈ ಸಂಬಂಧ ಲೋಕಾಯುಕ್ತ ವರದಿ ನೀಡಿದ್ದರೂ ಕೂಡ ಅದನ್ನು ಜಾರಿ ಮಾಡಿಲ್ಲ ಎಂದು ಆರೋಪಿಸಿದರು.

ಸಜ್ಜನರಂತೆ ಹೋರಾಟ ಮಾಡಲು ಹೊರಟಿರುವ ಬಿಜೆಪಿಗರಿಗೆ ನಾಚಿಕೆಯಾಗಬೇಕು. ಶೇ.40%ರ ಭ್ರಷ್ಟಚಾರಕ್ಕಾಗಿ ಅಧಿಕಾರ ಕಳೆದುಕೊಂಡವರು ಅವರು. ಕೋವಿಡ್ ಸಂದರ್ಭದಲ್ಲಿ 40 ಸಾವಿರ ಕೋಟಿ ಹಗರಣವಾಗಿದೆ ಎಂದು ಅವರದೇ ಪಕ್ಷದವರಾದ ಬಸವನಗೌಡ ಪಾಟೀಲ್ ಯತ್ನಾಳ್, ಯಡಿಯೂರಪ್ಪ ಸರಕಾರದ ವಿರುದ್ಧ ಹೇಳಿಕೆ ನೀಡಿದ್ದರು. ಅವರ ವಿರುದ್ಧ ಮೊದಲು ಈ ವಿಜಯೇಂದ್ರ ಹೋರಾಡಲಿ ಎಂದು ಕಟುಕಿದರು.

ಬೆಂಗಳೂರು ಬಿಡಿಎಗೆ ಸಂಬಂಧಿಸಿದಂತೆ ಕಡತಗಳಿಗೆ ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರ ಮಗನೇ ಪೋರ್ಜರಿ ಸಹಿ ಮಾಡಿದ್ದರು. ಈ ಬಗ್ಗೆ ದಾಖಲೆಯೂ ಇದೆ. ಇದರ ವಿರುದ್ಧ ಹೋರಾಡಬೇಕಲ್ಲವೆ ಎಂದು ಪ್ರಶ್ನಿಸಿದ ಅವರು, ಈಗಿನ ಕೇಂದ್ರ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರು ಸಹ ಅಂದು ಈ ಡಿ.ನೋಟಿಫಿಕೇಷನ್ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸಿದ್ದರು. ಈಗೇಕೆ ಅವರ ಮೌನ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್.ಪ್ರಸನ್ನಕುಮಾರ್ ಮಾತನಾಡಿ, ಮೂಡ ವಿಚಾರದಲ್ಲಿ ಮುಖ್ಯಮಂತ್ರಿಗಳ ರಾಜೀನಾಮೆ ಕೇಳುವ ಬಿಜೆಪಿ ನಾಯಕರಿಗೆ ನೈತಿಕ ಹಕ್ಕು ಇಲ್ಲ. ಆ ಭೂಮಿಯನ್ನು ಸಿದ್ದರಾಮಯ್ಯ ಪತ್ನಿ ಕುಟುಂಬದವರು ನೀಡಿದ್ದರು. ಇದಕ್ಕಾಗಿ ಹಣ ಕೂಡ ಕೇಳಿದ್ದರು. ಸುಮಾರು 65 ಕೋಟಿ ಹಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಕುಟುಂಬಕ್ಕೆ ನೀಡಬೇಕಿತ್ತು. ಆದರೆ ಹಣ ನೀಡದೇ ಅವರು ನಿವೇಶನ ನೀಡಿದ್ದಾರೆ ಅಷ್ಟೇ. ಇದರಲ್ಲಿ ರಾಜೀನಾಮೆ ಕೊಡುವ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮ ಸೇರಿದಂತೆ ಎಲ್ಲಾ ನಿಗಮದಲ್ಲೂ ಬಿಜೆಪಿ ಸರಕಾರದಲ್ಲಿ ಭಾರಿ ಭ್ರಷ್ಟಚಾರ ನಡೆದಿದೆ. ಈ ಭ್ರಷ್ಟಚಾರವನ್ನು ಕಾಂಗ್ರೆಸ್ ಸರಕಾರದ ಮೇಲೆ ಗೂಬೆ ಕೂರಿಸಲು ಪ್ರಯತ್ನ ಮಾಡುತ್ತಾ ಪ್ರತಿದಿನ ಹೋರಾಟವನ್ನು ಬಿಜೆಪಿ ನಾಯಕರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಕಲಗೋಡು ರತ್ನಾಕರ್, ವೈ.ಹೆಚ್.ನಾಗರಾಜ್, ಎಸ್.ಟಿ.ಹಾಲಪ್ಪ, ರಮೇಶ್ ಹೆಗ್ಡೆ, ಅನಿತಾಕುಮಾರಿ, ಈಕ್ಕೇರಿ ರಮೇಶ್, ಯು.ಶಿವಾನಂದ್, ಅಡ್ಡು, ದೀನರಾಜ್ ಹೊನ್ನಾವಿಲೆ, ಹಿರಣ್ಣಯ್ಯ, ವಿಜಯ ಲಕ್ಷ್ಮೀ ಪಾಟೀಲ್, ಶಿವಣ್ಣ, ಹೆಚ್.ಎಂ.ಮಧು ಉಪಸ್ಥಿತರಿದ್ದರು.

> ಆರ್.ಅಶೋಕ್ ಶಾಸಕರಾಗಿದ್ದಾಗ ಕೆಂಗೇರಿ ಹೋಬಳಿಯ 2500 ಎಕರೆ ಭೂಮಿಗೆ ಮಂಜೂರಾತಿ ನೀಡಿದ್ದರು. ಇದು ಮಾಧ್ಯಮಗಳಲ್ಲಿ ಭಾರದಂತೆ ತಡೆಯಾಜ್ಞೆ ತಂದಿದ್ದಾರೆ. ಈಗ ಇವರು ಆ ಪಕ್ಷದ ಪ್ರಾಮಾಣಿಕ ವಿರೋಧ ಪಕ್ಷದ ನಾಯಕ. ಇವರು ಈಗ ಯಾರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಪ್ರಶ್ನೆ ಮಾಡಿದರು.
>
> -ಆಯನೂರು ಮಂಜುನಾಥ್, ಕೆಪಿಸಿಸಿ ವಕ್ತಾರ

ಬಿಜೆಪಿ ಆಡಳಿತದಲ್ಲಿ ಹಗರಣಗಳ ದಾಖಲೆ:

ಅವರು ಹೋರಾಡಲಿ ನಾವು ಕೂಡ ಬಿಜೆಪಿ ಕಾಲದಲ್ಲಿ ನಡೆದ ಎಲ್ಲಾ ಹಗರಣಗಳನ್ನು ದಾಖಲೆ ಸಮೇತ ಹೊರಗಿಡುತ್ತೇವೆ. ಶಿವಮೊಗ್ಗದ ಸ್ಮಾರ್ಟ್ ಸಿಟಿಗೆ ಸಂಬಂಧಿಸಿದಂತೆ ಹಿಡಿದು ಎಲ್ಲಾ ಹಗರಣಗಳನ್ನು ತನಿಖೆಗೆ ಒತ್ತಾಯಿಸುತ್ತೇವೆ ಎಂದು ಅವರು, ಬಿಜೆಪಿ ನಾಯಕರು ಸೋಗಲಾಡಿತನ ಹೋರಾಟವನ್ನು ಕೈಬಿಟ್ಟು ಜನರ ಕ್ಷಮೆಯನ್ನು ಕೇಳಬೇಕೆಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಆಗ್ರಹಿಸಿದರು.

ಡೆಂಘೀ ಹಾವಳಿ: ಸಚಿವರ ರಾಜೀನಾಮೆಗೆ ಆಗ್ರಹ

ಬಿಜೆಪಿ ಪ್ರಕೋಷ್ಠಗಳ ಸಂಯೋಜಕ ಎಸ್.ದತ್ತಾತ್ರಿ ಡೆಂಘೀ ಪ್ರಕರಣ ಹೆಚ್ಚಳದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಶಿವಮೊಗ್ಗ: ಡೆಂಘೀ ನಿಯಂತ್ರಿಸುವಲ್ಲಿ ವಿಫಲರಾದ ರಾಜ್ಯ ಸರಕಾರದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಪೌರಾಡಳಿತ ಸಚಿವ ರಹೀಂ ಖಾನ್ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಬಿಜೆಪಿ ಪ್ರಕೋಷ್ಠಗಳ ಸಂಯೋಜಕ ಎಸ್.ದತ್ತಾತ್ರಿ ಆಗ್ರಹಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಡೆಂಘೀ ಮಹಾಮಾರಿ ರಾಜ್ಯದಲ್ಲಿ ಕಾಡುತ್ತಿದೆ. ಪೂರ್ವ ತಯಾರಿ ಮಾಡದ ಪರಿಣಾಮ ಹೆಚ್ಚಳವಾಗಿದ್ದು, 1,05 ಲಕ್ಷ ಶಂಕಿತ ಪ್ರಕರಣಗಳಿವೆ. 4827 ಪಾಸಿಟಿವ್, 07 ಮಂದಿ ಮೃತಪಟ್ಟಿದ್ದಾರೆ. ಸಾಗರದ ಆರೋಗ್ಯ ಇಲಾಖೆ ಡಿ.ದರ್ಜೆ ನೌಕರ ನಾಗರಾಜ್ ಕೂಡ ಡೆಂಘೀಗೆ ಬಲಿಯಾಗಿದ್ದಾರೆ. ಹಾಸನ ಐದು ಡೆಂಘೀ ಪೀಡಿತರು ಮೃತಪಟ್ಟಿದ್ದಾರೆ. ರಾಜ್ಯ ಸರಕಾರ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೆ ಆಂತರಿಕ ಕಚ್ಚಾಟದಲ್ಲಿ ತೊಡಗಿದೆ ಎಂದರು.

ಡೆಂಘೀ ಬಂದರೆ ಎಲಿಸಾ ಪರೀಕ್ಷೆ ಮಾಡಬೇಕು. ಜಿಲ್ಲೆಯಲ್ಲಿ 592 ಶಂಕಿತ ಪ್ರಕರಣಗಳಿದ್ದು, ಝೀಕಾ ವೈರಸ್‌ಗೆ ಒಂದು ಬಲಿಯಾಗಿದ್ದು, ಎರಡು ಪ್ರಕರಣಗಳು ಪಾಸಿಟಿವ್ ಬಂದಿರುವುದಾಗಿ, ಪ್ರತಿ ಜಿಲ್ಲೆಗ ಓರ್ವ ಐಎಎಸ್ ಅಧಿಕಾರಿ ನೋಡಲ್ ಅಧಿಕಾರಿ ಆಗಿ ನೇಮಕ ಮಾಡಬೇಕು. ಬಿಪಿಎಲ್ ಕಾರ್ಡ್ ದಾರರಿಗೆ ಖಾಸಗಿ ಲ್ಯಾಬ್‌ಗಳಲ್ಲಿಯೂ ಉಚಿತ ಪರೀಕ್ಷೆ ಮಾಡಬೇಕು ಎಂದು ಒತ್ತಾಯಿಸಿದರು.

ಮೂಡಾ ಹಗರಣ, ವಾಲ್ಮೀಕಿ ನಿಗಮ ಹಗರಣ ಇನ್ನಿತರ ಹಗರಣಗಳಲ್ಲಿ ಭಾಗಿಯಾಗಿರುವ ಸರಕಾರ ಅದನ್ನು ಮುಚ್ಚಿ ಹಾಕುವ ಕಡೆ ಗಮನಹರಿಸುತ್ತಿದೆ. ನಾಗರೀಕರ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ. ಸೊಳ್ಳೆ ಉತ್ಪತ್ತಿ ಕೇಂದ್ರ ನಾಶ ಮಾಡಬೇಕು. ಫಾಗಿಂಗ್ ಮಾಡಬೇಕು. ನಾಗರಿಕರು ಕೂಡ ಯಾವುದೇ ಜ್ವರಕ್ಕೆ ನಿರ್ಲಕ್ಷ್ಯ ಮಾಡಬಾರದು. ಮತತು ತಮ್ಮ ಪರಿಸರ ಸ್ವಚ್ಛವಾಗಿಡಬೇಕು ಎಂದರು.

ಪ್ರಮುಖರಾದ ಕೆ.ವಿ.ಅಣ್ಣಪ್ಪ, ಚಂದ್ರಶೇಖರ್, ಶಿವರಾಜ್, ಡಾ.ಸುರೇಶ್, ಡಾ.ಹೇಮಂತ್, ಹೃಷಿಕೇಶ್ ಪೈ, ವಿನ್ಸೆಂಟ್, ಶ್ರೀನಿವಾಸ ರೆಡ್ಡಿ ಇದ್ದರು.

ಉಚಿತ ಚಿಕಿತ್ಸೆಗೆ ಸರಕಾರ ಅವಕಾಶ ಕಲ್ಪಿಸಿ

ಸರಕಾರಿ ಆಸ್ಪತ್ರೆಯಲ್ಲೂ 500 ರೂ. ಪರೀಕ್ಷೆ ಆಗುತ್ತಿದೆ. ಸರಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಪರೀಕ್ಷೆ ಮಾಡಬೇಕು. ಬಿಳಿ ರಕ್ತಕಣಗಳ ಪ್ರತ್ಯೇಕ ಮಾಡುವ ವ್ಯವಸ್ಥೆ ತಾಲೂಕು ಕೇಂದ್ರದಲ್ಲಿ ಇಲ್ಲ. ಮೆಗ್ಗಾನ್ ಆಸ್ಪತ್ರೆ 600 ರು. ಹಣ ಕೊಡಬೇಕು. ಪುನಃ ರಕ್ತ ಕೊಡಬೇಕು. ಖಾಸಗಿ ಆಸ್ಪತ್ರೆ 1000 ರೂ. ಶುಲ್ಕ ಕೊಡಬೇಕು. ಬಿಪಿಎಲ್ ಕಾರ್ಡ್ ಇದ್ದವರಿಗೆ ಖಾಸಗಿ ಆಸ್ಪತ್ರೆಗಳಲ್ಲೂ ಉಚಿತ ಪರೀಕ್ಷೆಗೆ ಸರಕಾರ ಅವಕಾಶ ಮಾಡಿಕೊಡಬೇಕು ಎಂದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಜಿ.ಎನ್ ಸುಧೀರ್‌ಗೆ ಸನ್ಮಾನ

ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾಗಿರುವ ಜಿ.ಎನ್ ಸುಧೀರ್ ರವರಿಗೆ ಸನ್ಮಾನಿಸುತ್ತಿರುವುದು.

ಹೊಸನಗರ: ನಾನು ಸುಮಾರು 20ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ದುಡಿದಿದ್ದೇನೆ ಸಹಕಾರಿ ಕ್ಷೇತ್ರದ ಸದಸ್ಯರ ಸಹಕಾರದಿಂದ ರೈತರ ಸೇವೆ ಸಲ್ಲಿಸುವುದೇ ನನ್ನ ಮುಖ್ಯ ಗುರಿಯಾಗಿದ್ದು ಅಭಿವೃದ್ಧಿಗಾಗಿ ಪ್ರಯತ್ನಿಸುತ್ತೇನೆ ಎಂದು ನೂತನವಾಗಿ ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಸಾಗರದ ಜಿ.ಎನ್.ಸುಧೀರ್ ಹೇಳಿದರು.

ಹೊಸನಗರ ತಾಲೂಕು ಬಹ್ಮೇಶ್ವರ ವೀರಭದ್ರೇಶ್ವರ ದೇವಸ್ತಾನದ ಆವರಣದಲ್ಲಿ ವೀರಭದ್ರೇಶ್ವರ ಸೇವಾ ಸಮಿತಿಯಿಂದ ನೂತನ ನಿರ್ದೇಶಕರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದ್ದು ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸಹಕಾರಿ ದುರೀಣ ಮಂಜುನಾಥ ಗೌಡರವರ ಸಹಕಾರದೊಂದಿಗೆ ನಾನು ಸಾಕಷ್ಟು ರೀತಿಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಬೆಳೆದು ಸಹಕಾರಿ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಲು ಸಹಕಾರಿಯಾಗಿದೆ ಮುಂದಿನ ದಿನಗಳಲ್ಲಿಯೂ ಅವರ ಸಹಕಾರದೊಂದಿಗೆ ರೈತರಿಗೆ ಸಹಕಾರಿ ಕ್ಷೇತ್ರದ ಸದಸ್ಯರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಕರಿಸುತ್ತೇವೆ ಎಂದರು.

ವೀರಭದ್ರೇಶ್ವರ ಸೇವಾ ಸಮಿತಿಯ ಅಧ್ಯಕ್ಷ ಜಬಗೋಡು ಹಾಲಪ್ಪಗೌಡ, ಹಿಲಗೋಡು ಹೆಚ್.ವಿ.ಯತೀಶ್, ಚಿಕ್ಕಮಣತಿ ಬಿ.ಯುವರಾಜ್, ಹರತಾಳು ಜಯಶೀಲಪ್ಪ ಗೌಡ, ಶಿವಮೊಗ್ಗ ರವಿ ಶಂಕರ್, ಸಾಗರ ಚಂದ್ರಶೇಖರ್ ಇನ್ನೂ ಮುಂತಾದವರು ಇದ್ದರು.

ವಿದ್ಯಾರ್ಥಿ ಜೀವನದಲ್ಲಿ ಕೌಶಲ ಬೆಳೆಸಿಕೊಂಡಾಗ ಬದುಕು ಉಜ್ವಲ

ಕುಮದ್ವತಿ ಕೇಂದ್ರೀಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶಿಕಾರಿಪುರ: ವಿದ್ಯಾರ್ಥಿ ಜೀವನದಲ್ಲಿಯೇ ಕೌಶಲಗಳನ್ನು ಬೆಳೆಸಿಕೊಂಡಾಗ ಭವಿಷ್ಯದಲ್ಲಿ ಬದುಕು ಉಜ್ವಲವಾಗಲಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು.

ಶುಕ್ರವಾರ ಪಟ್ಟಣದ ಕುಮದ್ವತಿ ಕೇಂದ್ರೀಯ ಸಭಾಂಗಣದಲ್ಲಿ ಕುಮದ್ವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಸಂಘದ ''ಉದ್ಘಾಟನಾ'' ಸಮಾರಂಭ ಮತ್ತು ರಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಪುನಶ್ಚೇತನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಭಾರತದಲ್ಲಿ ಉದ್ಯೋಗದ ಸಮಸ್ಯೆ ತೀವ್ರವಾಗಿದ್ದು, ಸಮಸ್ಯೆ ಮೆಟ್ಟಿ ನಿಲ್ಲಲು ವಿದ್ಯಾರ್ಥಿಗಳು ಕೌಶಲಗಳನ್ನು ಬೆಳೆಸಿಕೊಂಡಾಗ ಮಾತ್ರ ಪರಿಹಾರ ಕಾಣಲು ಸಾಧ್ಯ ಎಂದ ಅವರು ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಸರ್ವತೋಮುಖ ಬೆಳವಣಿಗೆಯ ಕಡೆಗೆ ಗಮನಹರಿಸಬೇಕು.

ಮುಖ್ಯ ಅತಿಥಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಿ.ಕೃಷ್ಣಪ್ಪ ಮಾತನಾಡಿ,ವಿದ್ಯಾರ್ಥಿ ಜೀವನದಲ್ಲಿ ಪ್ರತಿಭಾ ಪುರಸ್ಕಾರ ಯಶಸ್ಸಿನ ಹೆಜ್ಜೆ ಗುರುತಾಗಿದೆ. ವಿದ್ಯಾರ್ಥಿಗಳು ಓದಿನ ಜತೆಗೆ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು ಸಮಾಜಮುಖಿಗಳಾಗಿ ಬೆಳೆಯಬೇಕೆಂದು ಶುಭ ಹಾರೈಸಿದರು.

ಸಂಪನ್ಮೂಲ ಅತಿಥಿ ಶೆಟ್ಟಿಹಳ್ಳಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ನಾಗೇಶ್ ಬಿದರಗೋಡ ಮಾತನಾಡಿ,ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳು ಸೋಷಿಯಲ್ ಮೀಡಿಯಾಗಳಲ್ಲಿ ಕಾಲ ಹರಣ ಮಾಡದೆ ಸನಾತನ ಭಾರತೀಯ ಸಂಸ್ಕೃತಿ ಪರಂಪರೆಯ ಸಂಕೇತವಾದ ರಾಮಾಯಣ, ಮಹಾ ಭಾರತ ಗ್ರಂಥಗಳ ಅಧ್ಯಯನ ಮೂಲಕ ಶ್ರೇಷ್ಠ ವ್ಯಕ್ತಿತ್ವ ರೂಪಿ ಸಿಕೊಳ್ಳಲು ಯತ್ನಿಸಬೇಕು,ಅಂಕಗಳಿಗೆ ಮಾತ್ರ ಸೀಮಿತವಾಗದೆ ಜ್ಞಾನಾರ್ಜನೆ ಹಾಗೂ ಕೌಶಲ್ಯಾಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ತಿಳಿಸಿದರು.

2023 ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಪ್ರಥಮ ರ‍್ಯಾಂಕ್ ಗಳಿಸಿದ ಪವನ್ ಎಂ.ಎಸ್.ಹಾಗೂ ಸೃಜನಾ ಆರ್. ಮತ್ತು ವಿಜ್ಞಾನ ವಿಭಾಗದಲ್ಲಿ ಕು.ದೀಕ್ಷಿತಾ ಹಾಗೂ ಜೆಇಇ ನೀಟ್ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಎಂ.ಬಿ.ಶಿವಕುಮಾರ್, ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಪ್ರಾಚಾರ್ಯ ಡಾ.ಜಿ.ಎಸ್. ಶಿವಕುಮಾರ್, ಕುಬೇರಪ್ಪ.ಡಾ.ರವೀಂದ್ರ, ವಿಶ್ವನಾಥ್, ವಿದ್ಯಾಶಂಕರ್ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಕು.ವಿದ್ಯಾ ಸಂಗಡಿಗರು ಪ್ರಾರ್ಥಿಸಿ,ಗುರುಶಾಂತ್ ಸ್ವಾಗತಿಸಿ,ಕು.ಅಕ್ಷತಾ ಮತ್ತು ಶ್ರೇಯಾಸಿರಸಂಗಿ ನಿರೂಪಿಸಿ ದಿಗಂತ್ ವಂದಿಸಿದರು.

> ವಿದ್ಯಾರ್ಥಿಗಳು ವಿವೇಕಾನಂದರ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಪೋಷಕರ ಗೌರವ ಹೆಚ್ಚಿಸಿ ಗುರಿಯನ್ನು ತಲುಪುವ ಪ್ರತಿಭಾನ್ವಿತರಾಗಬೇಕು,ಅತ್ಯುತ್ತಮ ಶಿಕ್ಷಣಕ್ಕೆ ಅಗತ್ಯವಾದ ಎಲ್ಲ ರೀತಿಯ ಸೌಲಭ್ಯವನ್ನು ಸಂಸ್ಥೆಯಲ್ಲಿ ಕಲ್ಪಿಸಲಾಗಿದ್ದು ಸದುಪಯೋಗದ ಮೂಲಕ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸುವಂತೆ ಕರೆ ನೀಡಿದರು.
>
> -ಬಿ.ವೈ.ರಾಘವೇಂದ್ರ, ಸಂಸದ

ಸುಸಜ್ಜಿತ ಸ್ಕೇಟಿಂಗ್ ಕ್ರೀಡಾಂಗಣ ನಿರ್ಮಾಣ

ರೂಲರ್ ಸ್ಕೇಟಿಂಗ್ ಅಸೋಸಿಯೇಷನ್ ಸಹ ಪ್ರಾಯೋಜಕತ್ವದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ರೋಡ್ ರೇಸ್ ಸ್ಕೇಟಿಂಗ್ ಪಂದ್ಯಾವಳಿಗೆ ಸಂಸದ ಬಿ.ವೈ. ರಾಘವೇಂದ್ರ ಚಾಲನೆ ನೀಡಿದರು.

ಶಿವಮೊಗ್ಗ: ನಗರದಲ್ಲಿ ವ್ಯವಸ್ಥಿತವಾದ ಸ್ಕೇಟಿಂಗ್ ಕ್ರೀಡಾಂಗಣ ಇಲ್ಲ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಸ್ಕೇಟಿಂಗ್ ಪಂದ್ಯಾವಳಿಯನ್ನು ನಡೆಸಲು ಕನಿಷ್ಠ 200 ಮೀಟರ್ ವಿಸ್ತೀರ್ಣದ ಅತ್ಯಂತ ವ್ಯವಸ್ಥಿತ ಸ್ಕೇಟಿಂಗ್ ಕ್ರೀಡಾಂಗಣ ಅಗತ್ಯ ಎಂದು ಕೇಳಿದ ಬೇಡಿಕೆಗೆ ಆ ಕ್ಷಣದಲ್ಲೇ ಸಂಸದ ಬಿ.ವೈ. ರಾಘವೇಂದ್ರ ಅಸ್ತು ಎಂದರು.

ಶಿವಮೊಗ್ಗ ದೇವಕಾತಿಕೊಪ್ಪ ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಶಿವಮೊಗ್ಗದ ನಮ್ ರೂಲರ್ ಸ್ಕೇಟಿಂಗ್ ಅಸೋಸಿಯೇಷನ್ ಸಹ ಪ್ರಾಯೋಜಕತ್ವದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ರೋಡ್ ರೇಸ್ ಸ್ಕೇಟಿಂಗ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ವಿಧಾನ ಪರಿಷತ್ ಶಾಸಕ ಡಿಎಸ್ ಅರುಣ್ ಅವರು ಸದ್ಯದಲ್ಲೇ ನಡೆಯಲಿರುವ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಜಾಗದ ವ್ಯವಸ್ಥೆಯನ್ನು ಮಾಡುವ ನಿಟ್ಟಿನಲ್ಲಿ ಚರ್ಚಿಸಲಿದ್ದಾರೆ. ನಾನು ಕೇಂದ್ರ ಸರಕಾರದಿಂದ ಕ್ರೀಡಾಂಗಣ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಅಗತ್ಯವಿರುವ ಅನುದಾನವನ್ನು ತರುತ್ತೇನೆ. ನನಗೆ ಈ ಬಗ್ಗೆ ವಿಶ್ವಾಸವಿದೆ. ಶಿವಮೊಗ್ಗ ಜಿಲ್ಲೆಯ ಎಲ್ಲ ಬಗೆಯ ಅಭಿವೃದ್ಧಿಗಳಿಗೆ ನಾನು ಸದಾ ಸಕ್ರಿಯನಾಗಿರುತ್ತೇನೆ ಎಂದರು.

ವಿಧಾನ ಪರಿಷತ್ ಶಾಸಕ ಡಿ.ಎಸ್. ಅರುಣ್ ಮಾತನಾಡಿ, ಏನು ಇಲ್ಲದ ಶಿವಮೊಗ್ಗ ಇಂದು ಇಡೀ ದೇಶದಲ್ಲಿ ಗುರುತಿಸಿಕೊಳ್ಳುವಂತಾಗಿದೆ. ಮೊದಲು ಕೇವಲ ನಾಲ್ಕು ರೈಲುಗಳು ಶಿವಮೊಗ್ಗಕ್ಕೆ ಬರುತ್ತಿದ್ದವು. ಈಗ ಅವುಗಳ ಸಂಖ್ಯೆ 38ಕ್ಕೆ ಏರಿದೆ. ವಿಮಾನ ನಿಲ್ದಾಣ ಆಗಿದೆ ಶಿವಮೊಗ್ಗಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ರೂಪಿಸಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿವಮೊಗ್ಗ ನಮ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಮೋಹನ್ ಕುಮಾರ್ ಪ್ರಧಾನ ಕಾರ್ಯದರ್ಶಿ ಎಂ ರವಿ ಹಾಗೂ ಕರ್ನಾಟಕ ರಾಜ್ಯ ರೋರಲ್ ಕೇಟಿಂಗ್ ಅಸೋಸಿಯೇಷನ್ ಪ್ರಮುಖರು ಮತ್ತು ಅಂತರಾಷ್ಟ್ರೀಯ ಮಟ್ಟದ ತರಬೇತಿ ಪಡೆದ ಅಂಪೈರ್‌ಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಪ್ರತಿಭಾನ್ವಿತ ಸ್ಕೇಟಿಂಗ್ ಪಟುಗಳನ್ನು ಸನ್ಮಾನಿಸಲಾಯಿತು. ವಕೀಲ ಪ್ರವೀಣ್ ಅವರು ಸ್ವಾಗತಿಸಿದರು ಸಮನ್ವಯ ಕಾಶಿ ಕಾರ್ಯಕ್ರಮ ನಿರೂಪಿಸಿದರು. ನಾಳೆಯೂ ಸಹ ಪಂದ್ಯಾವಳಿ ಮುಂದುವರೆಯಲಿದೆ.

> ಕ್ರೀಡೆ ಅತ್ಯಂತ ಅಗತ್ಯದ ಚಟುವಟಿಕೆ. ಈಗಾಗಲೇ ಭೂ ಸಾರಿಗೆ ರೈಲ್ವೆ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಶಿವಮೊಗ್ಗಕ್ಕೆ ಅಗತ್ಯವಿರುವಂತಹ ಎಲ್ಲಾ ಸೌಕರ್ಯಗಳನ್ನು ಪಡೆಯಲು ಹಾಗೂ ಇಂದಿನಿಂದಲೇ ಸುಸಜ್ಜಿತವಾದ ಸ್ಕೇಟಿಂಗ್ ಅಂಕಣವನ್ನು ನಿರ್ಮಿಸಲು ಅಗತ್ಯವಾದ ವ್ಯವಸ್ಥೆಗಳನ್ನು ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.
>
> -ಬಿ.ವೈ. ರಾಘವೇಂದ್ರ, ಸಂಸದ

ರೋಟರಿ ಸಂಸ್ಥೆಯಿಂದ ಸಮಾಜಮುಖಿ ಕಾರ್ಯ

ಶಿವಮೊಗ್ಗ: ರೋಟರಿ ಸಂಸ್ಥೆಯು ನಿರಂತರವಾಗಿ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತ ಬಂದಿದ್ದು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿದೆ ಎಂದು ರೋಟರಿ ಕ್ಲಬ್ ಮಲೆನಾಡು ಅಧ್ಯಕ್ಷ ಸಿ.ರಾಜು ಅಭಿಪ್ರಾಯಪಟ್ಟರು. ರೋಟರಿ ಕ್ಲಬ್ ಮಲೆನಾಡು ವತಿಯಿಂದ ಗೋಪಾಲಗೌಡ ಬಡಾವಣೆಯಲ್ಲಿ ಆಯೋಜಿಸಿದ್ದ 2ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಹೆಚ್ಚಿನ ಸೇವಾ ಕಾರ್ಯಕ್ರಮಗಳನ್ನು ನಡೆಸಿದ್ದು, ಉತ್ತಮ ಕೆಲಸಗಳನ್ನು ಮಾಡಿದ ಸಾರ್ಥಕ ಭಾವವಿದೆ ಎಂದು ತಿಳಿಸಿದರು. ಸರಕಾರಿ ಶಾಲೆಗಳ ಅಭಿವೃದ್ಧಿ, ಮಕ್ಕಳ ಶಿಕ್ಷಣಕ್ಕೆ ಅನುಕೂಲ ವ್ಯವಸ್ಥೆ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸಲು ಮಲೆನಾಡು ಕ್ಲಬ್ ಶ್ರಮಿಸಿದೆ. ಆರೋಗ್ಯ ಶಿಬಿರಗಳನ್ನು ನಡೆಸುವ ಮೂಲಕ ಸಾರ್ವಜನಿಕರಿಗೆ ಆರೋಗ್ಯ ಜಾಗೃತಿ ಮೂಡಿಸಿದೆ ಎಂದರು.ರೋಟರಿ ಮಂಜುಳಾ ರಾಜು ಮಾತನಾಡಿ, ಸಂಸ್ಥಾಪನಾ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಅನೇಕ ಸವಾಲುಗಳನ್ನು ಎದುರಿಸಿದ್ದು, ಎಲ್ಲರ ಸಹಕಾರದಿಂದ ಹೆಚ್ಚಿನ ಸೇವೆ ಮಾಡಲು ಸಾಧ್ಯವಾಯಿತು. ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸಾಧ್ಯವಾಯಿತು ಎಂದು ತಿಳಿಸಿದರು. ರಾಜು ಅವರ ಅಧ್ಯಕ್ಷ ಅವಧಿಯಲ್ಲಿ ಸಭೆಗಳನ್ನು ನಡೆಸಲು ಉತ್ತಮವಾದ ಹಾಲ್ ನಿರ್ಮಿಸಿಕೊಟ್ಟರು. ಸದಸ್ಯರನ್ನು ಸೇರ್ಪಡೆಗೊಳಿಸಿ ಸಂಸ್ಥೆ ಬಲಪಡಿಸುವಲ್ಲಿ ರಾಜು ಅವರ ಕಾರ್ಯ ಶ್ಲಾಘನೀಯ.

ರಕ್ತದಾನದಿಂದ ಸದೃಢ ಆರೋಗ್ಯ ಕಾಪಾಡಿಕೊಳ್ಳಿ

ಶಿವಮೊಗ್ಗ: ಸದೃಢ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ರಕ್ತದಾನ ಮಹತ್ತರ ಪಾತ್ರ ವಹಿಸುತ್ತದೆ. ಆರೋಗ್ಯವಂತ ಯುವಜನರು ರಕ್ತದಾನ ಮಾಡಲು ಮುಂದಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಸ್.ನಟರಾಜ್ ಹೇಳಿದರು. ದೇಶಿಯ ವಿದ್ಯಾ ಶಾಲಾ ಸಮಿತಿಯ ಡಿವಿಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವತಿಯಿಂದ ಸಿಂಗಾರ ಸಭಾಂಗಣದಲ್ಲಿ ಆಯೋಜಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿದರು. ಒಮ್ಮೆ ರಕ್ತದಾನ ಮಾಡುವುದರಿಂದ ಮೂರ್ನಾಲ್ಕು ಜೀವ ಉಳಿಸಲು ಸಾಧ್ಯವಿದೆ ಎಂದು ತಿಳಿಸಿದರು.ರಕ್ತದ ಕೊರತೆಯು ಎಲ್ಲ ಕಡೆಗಳಲ್ಲಿ ಕಂಡು ಬಂದಿದ್ದು, ಹೆಚ್ಚು ರಕ್ತದಾನದ ಕ್ಯಾಂಪಗಳನ್ನು ಆಯೋಜಿಸುವುದರಿಂದ ರಕ್ತದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದು. ಕೆಲ ಸಂದರ್ಭಗಳಲ್ಲಿ ರಕ್ತ ಸಿಗದೇ ಜೀವ ಉಳಿಸಲು ಕಷ್ಟದ ಸನ್ನಿವೇಶ ಎದುರಾಗುತ್ತವೆ. ರಕ್ತದ ಲಭ್ಯತೆ ಇರುವಂತೆ ನೋಡಿಕೊಳ್ಳಬೇಕು ಎಂದರು. ದೇಶಿಯ ವಿದ್ಯಾಶಾಲಾ ಸಮಿತಿ ಕಾರ್ಯದರ್ಶಿ ಎಸ್.ರಾಜಶೇಖರ್ ಮಾತನಾಡಿ, ರಕ್ತದಾನ ಮಾಡುವ ಬಗ್ಗೆ ಭಯ ಪಡುವ ಅಗತ್ಯವಿಲ್ಲ, ತಪ್ಪು ಕಲ್ಪನೆ ಹೊಂದಬಾರದು. ಆರೋಗ್ಯವಂತ ಯುವಜನರು ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ದೇಶಿಯ ವಿದ್ಯಾಶಾಲಾ ಸಮಿತಿ ಉಪಾಧ್ಯಕ್ಷ ಎಸ್.ಪಿ.ದಿನೇಶ್ ಮಾತನಾಡಿ, ರಕ್ತದಾನ ಮಾಡುವುದರಿಂದ ಸದೃಢ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಪಿಎಸ್‌ಐ ಪಕ್ಷಪಾತ ವಜಾಗೊಳಿಸಲು ಆಗ್ರಹ

ಶಿಕಾರಿಪುರ: ಗೋಹತ್ಯೆ ಸಂಬಂಧ ಶಿರಾಳಕೊಪ್ಪ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಕಾನೂನೂ ರೀತಿಯಲ್ಲಿ ಕ್ರಮ ಕೈಗೊಳ್ಳದೆ ಪಕ್ಷಪಾತ ಧೋರಣೆಯನ್ನು ಅನುಸರಿಸುತ್ತಿದ್ದು ಹಿರಿಯ ಅಧಿಕಾರಿಗಳು ತನಿಖೆ ಕೈಗೊಂಡು ಸೇವೆಯಿಂದ ವಜಾಗೊಳಿಸುವಂತೆ ಆಗ್ರಹಿಸಿ ವಿವಿಧ ಹಿಂದೂಪರ ಸಂಘಟನೆಗಳ ವತಿಯಿಂದ ಇಲ್ಲಿನ ಗ್ರಾಮಾಂತರ ಠಾಣೆ ಮುಂಭಾಗ ಪ್ರತಿಭಟಿಸಿ ಸಿಪಿಐಗೆ ಮನವಿ ಸಲ್ಲಿಸಲಾಯಿತು.ಇತ್ತೀಚೆಗೆ ನಡೆದ ಬಕ್ರೀದ್ ಹಬ್ಬದಲ್ಲಿ ಶಿರಾಳಕೊಪ್ಪ ಸುತ್ತಮುತ್ತ ಸಾವಿರಾರು ಗೋವುಗಳ ಹತ್ಯೆ ಮಾಡಿ ತಂದು ಹಾಕಿರುವ ಖಲೀಜಗಳು ಮತ್ತು ಅವಶೇಷಗಳು ಕಂಡು ಬಂದಿದ್ದು,ಕಾನೂನು ವಿರೋಧಿ ಕೃತ್ಯವಾಗಿದೆ. ಜೂ.17 ರಂದು ಸಾಮಾಜಿಕ ಕಾರ್ಯಕರ್ತ ದೇವರಾಜ್ ಸ್ಥಳಕ್ಕೆ ಭೇಟಿ ನೀಡಿ ಪೊಲೀಸ್ ಇನ್ಸ್ಪೆಕ್ಟರ್ ರುದ್ರೇಶ್ ರವರಿಗೆ ಕರೆ ಮಾಡಿ ಹಳ್ಳೂರ್ ಕೇರಿ ಸರ್ಕಲ್ ಮುಂಭಾಗದ ಜಮೀನಿನಲ್ಲಿ ಹಲವಾರು ಗೋವುಗಳನ್ನು ಹತ್ಯೆ ಮಾಡಿ ಖಲೀಜಗಳನ್ನು ತಂದು ಹಾಕಿದ್ದಾರೆ ಎಂಬ ಮಾಹಿತಿಯನ್ನು ನೀಡಿದಾಗ ಕೂಡಲೇ ಪಿಎಸ್ಐ ಸ್ಥಳಕ್ಕೆ ಕಳುಹಿಸುವುದಾಗಿ ತಿಳಿಸಿದ್ದರು. 8-10 ದಿನಗಳ ಮುಂಚೆ ಸಾವಿರಾರು ಗೋವುಗಳು ಹತ್ಯೆ ಮಾಡಿ ತಂದು ಹಾಕಿರುವುದು ಏಕೆ ಇವರ ಗಮನಕ್ಕೆ ಬಂದಿಲ್ಲ ಸುಮಾರು ಸಾವಿರಾರು ಗೋವುಗಳು ಹತ್ಯೆ ಆದರೂ ಸಹ ಮೂರು ನಾಲ್ಕು ತಿಂಗಳಿನಲ್ಲಿ ಸಬ್ ಇನ್ಸ್ಪೆಕ್ಟರ್ ಮೇಲ್ನೋಟಕ್ಕೆ ನಾವು ನೀಡಿರುವ ಮಾಹಿತಿ ಆದಾರದಡಿ ಕೆಲ ಪ್ರಕರಣಗಳನ್ನು ದಾಖಲಿಸಿಕೊಂಡು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಾಣುತ್ತದೆ.

ಲೇಔಟ್‌ನ ನಿವೇಶನ ಹಂಚಿಕೆಗೆ ಕ್ರಮ

ಶಿವಮೊಗ್ಗ: ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರವು 2009-10ನೇ ಸಾಲಿನಲ್ಲಿ ನಗರದ ಹೊರವಲಯ ಮಲ್ಲಿಗೇನಹಳ್ಳಿಯಲ್ಲಿ ಸಾರ್ವಜನಿಕ ವಿತರಣೆಗಾಗಿ ಸುಮಾರು 172ಎಕರೆ ಪ್ರದೇಶದಲ್ಲಿ ಸೃಜಿಸಲಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯ ನಿವೇಶನ ಹಂಚಿಕೆಯಲ್ಲಿ ಆಗಿರಬಹುದಾದ ಸಮಸ್ಯೆಯ ಪರಿಹಾರಕ್ಕಾಗಿ 2023ರ ಆಗಸ್ಟ್ ಮಾಹೆಯಲ್ಲಿ ನ್ಯಾಯಾಲಯ ನೀಡಿದ ಆದೇಶದಂತೆ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಲು ಕ್ರಮ ವಹಿಸಲಾಗುವುದು ಎಂದು ಸೂಡಾ ಅಧ್ಯಕ್ಷ ಹೆಚ್.ಎನ್.ಸುಂದರೇಶ್ ಹೇಳಿದರು. ಕಚೇರಿ ಸಭಾಂಗಣದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಶನಿವಾರ ಮಾತನಾಡಿ, ನ್ಯಾಯಾಲಯದ ತೀರ್ಪಿನಂತೆ ಸೂಡಾದಲ್ಲಿ ಸೇವೆ ಸಲ್ಲಿಸುತ್ತಿರುವ 17 ಸಿಬ್ಬಂದಿಗಳು ಸೇರಿದಂತೆ ಅಧ್ಯಕ್ಷರ ವಿವೇಚನಾ ಕೋಟಾದಡಿ ಹಂಚಿಕೆ ಮಾಡಲಾಗಿದ್ದ 142 ಜನರು ಮತ್ತು ಪತಿ-ಪತ್ನಿ ಪ್ರಕರಣಗಳಲ್ಲಿ ಆಯ್ಕೆಗೊಂಡಿದ್ದ 16 ಫಲಾನುಭವಿಗಳನ್ನು ಹೊರತುಪಡಿಸಿ, ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈವರೆಗೆ ಪರಿಶೀಲಿಸಲಾಗಿರುವ 318 ಅರ್ಜಿಗಳ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು. ಲೋಕಾಯುಕ್ತರ ತನಿಖಾ ವರದಿಯ ನಂತರ, ಪ್ರಾಧಿಕಾರದ ಸಭೆಯ ನಿರ್ಣಯದಂತೆ ನಿವೃತ್ತ ನ್ಯಾಯಾಧೀಶರ ಸಮಿತಿಯಲ್ಲಿ ವಿಸ್ತತವಾಗಿ ಸಮಾಲೋಚನೆ ನಡೆಸಿ, ಅರ್ಹರನ್ನು ಆಯ್ಕೆ ಮಾಡಲಾಗಿತ್ತು.

ಸಮಾಚಾರ ಸಣ್ಣದಲ್ಲ

ಅಪರಿಚಿತ ವಾಹನ ಡಿಕ್ಕಿ ಹೊಡೆದು ಇಬ್ಬರ ಮೃತ್ಯು

ಗುಂಡ್ಲುಪೇಟೆ: ಬೈಕ್‌ಗೆ ಅಪರಿಚಿತ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟಿರುವ ಘಟನೆ ತಾಲೂಕಿನ ಬೇಗೂರು ಗ್ರಾಮದಲ್ಲಿ ನಡೆದಿದೆ. ತಾಲೂಕಿನ ಸೋಮಹಳ್ಳಿ ಗ್ರಾಮದ ನಾಗೇಂದ್ರ(45) ಹಾಗೂ ಮಹದೇವಸ್ವಾಮಿ(48) ಮೃತ ದುರ್ದೈವಿಗಳು. ಇವರು ಬೇಗೂರು ಹೊರ ವಲಯದ ಪೆಟ್ರೋಲ್ ಬಂಕ್‌ವೊಂದರಲ್ಲಿ ಪೆಟ್ರೋಲ್ ತುಂಬಿಸಿಕೊಂಡು ಸೋಮಹಳ್ಳಿ ಗ್ರಾಮಕ್ಕೆ ತೆರಳುವ ವೇಳೆ ಗುಂಡ್ಲುಪೇಟೆ ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ನಾಗೇಂದ್ರ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮಹದೇವಸ್ವಾಮಿ ಎಂಬುವವರನ್ನು ಮೈಸೂರಿಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಮೃತದೇಹವನ್ನು ಬೇಗೂರು ಠಾಣೆ ಪೊಲೀಸರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ. ಅಪಘಾತದ ದೃಶ್ಯ ಪೆಟ್ರೋಲ್ ಬಂಕ್‌ನ ಸಿಸಿ ಟಿವಿಯಲ್ಲಿ ಸೆರೆಯಾಗಿದ್ದು, ಕಾರಿನ ನಂಬರ್ ಆಧರಿಸಿ ಪೊಲೀಸರು ಪರಾರಿಯಾದ ವಾಹನ ಪತ್ತೆಗೆ ಮುಂದಾಗಿದ್ದಾರೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೈಂಗಿಕ ಕಿರುಕುಳ: ನಿವೃತ್ತ ಶಿಕ್ಷಕನ ಬಂಧನ

ಎನ್.ಆರ್.ಪುರ: ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ನಿವೃತ್ತ ಶಿಕ್ಷಕನನ್ನು ಬಂಧಿಸಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನಲ್ಲಿ ನಡೆದಿದೆ. ರಾಮಕೃಷ್ಣ ಬಂಧಿತ ನಿವೃತ್ತ ಶಿಕ್ಷಕ. ವಸತಿ ಶಾಲೆಯೊಂದರ 8ನೇ ತರಗತಿಯ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಎನ್.ಆರ್.ಪುರ ಪೊಲೀಸರು ಬಂಧಿಸಿ ಚಿಕ್ಕಮಗಳೂರು ಪೋಕ್ಸೊ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಆರೋಪಿಯನ್ನು ನ್ಯಾಯಾಧೀಶರು ಜು.18 ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ರಾಜ್ಯದ ಎಲೆಕ್ಟ್ರಾನಿಕ್ಸ್ ತಯಾರಿಕಾ ಉದ್ಯಮದ ಬೆಳವಣಿಗೆಗೆ ನೆರವು

ಹೈವಿಷನ್ ಜತೆಗೆ ಒಪ್ಪಂದಕ್ಕೆ ಅಂಕಿತ

ಬೆಂಗಳೂರು: ಸೋಲ್‌ನಲ್ಲಿ ರಾಜ್ಯದಲ್ಲಿ ಸ್ಮಾರ್ಟ್‌ಫೋನ್‌ಗಳ ಕ್ಯಾಮೆರಾ ಪರೀಕ್ಷಿಸುವ ಯಂತ್ರಗಳನ್ನು ತಯಾರಿಸುವ ಘಟಕ ಆರಂಭಿಸುವ ಯೋಜನೆಯ ಒಪ್ಪಂದಕ್ಕೆ ದಕ್ಷಿಣ ಕೊರಿಯಾದ ಹೈವಿಷನ್ ಕಂಪನಿಯು ಕರ್ನಾಟಕ ಸರಕಾರದ ಜತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ನೇತೃತ್ವದ ಉನ್ನತಮಟ್ಟದ ನಿಯೋಗ ಹೈವಿಷನ್ ಸಿಇಒ ಚೋಯಿ ಡೂ-ವನ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಈ ಕ್ಯಾಮರಾ ಇನ್ಸ್ ಪೆಕ್ಷನ್ ಮಷಿನ್ಸ್ ತಯಾರಿಕಾ ಘಟಕವು ಫಾಕ್ಸ್‌ಕಾನ್ ತಯಾರಿಕಾ ಘಟಕದ ಸಮೀಪ ಕಾರ್ಯಾರಂಭ ಮಾಡಲಿದೆ. ಇದರಿಂದ ರಾಜ್ಯದ ಎಲೆಕ್ಟ್ರಾನಿಕ್ಸ್ ತಯಾರಿಕಾ ಉದ್ಯಮದ ಬೆಳವಣಿಗೆಗೆ ನೆರವಾಗಲಿದೆ.

ಎಲೆಕ್ಟ್ರಾನಿಕ್ಸ್ ವಲಯಕ್ಕೆ ದೇಶದಲ್ಲಿಯೇ ಗರಿಷ್ಠ ಮಟ್ಟವಾಗಿರುವ ಶೇ 30-35ರಷ್ಟು ಸಬ್ಸಿಡಿಯನ್ನು ಕರ್ನಾಟಕ ಸರಕಾರ ನೀಡುತ್ತಿರುವುದನ್ನು ಸಚಿವ ಪಾಟೀಲ ಅವರ ಹೈವಿಷನ್ ಕಂಪನಿಯ ಮುಖ್ಯಸ್ಥರ ಗಮನಕ್ಕೆ ತಂದರು. ರಾಜ್ಯದ ಉನ್ನತ ಮಟ್ಟದ ನಿಯೋಗವು ಎಲ್‌ಎಕ್ಸ್ ಇಂಟರ್‌ನ್ಯಾಷನಲ್ ಕಾಪರ್, ಸ್ಯಾಮ್‌ಸಂಗ್ ಎಲೆಕ್ಟ್ರಾನಿಕ್ಸ್ ಮುಖ್ಯಸ್ಥರನ್ನೂ ಭೇಟಿಯಾಗಿ ಮಾತುಕತೆ ನಡೆಸಿತು. ಎಲ್ ಎಕ್ಸ್ ಇಂಟರ್‌ನ್ಯಾಷನಲ್ ಕಾರ್ಪ್ ಮುಖ್ಯಸ್ಥರ ಭೇಟಿ ಸಂದರ್ಭದಲ್ಲಿ ವಿದ್ಯುತ್‌ಚಾಲಿತ ವಾಹನ, ಬ್ಯಾಟರಿ ತಯಾರಿಕೆ ಸಾಧ್ಯತೆ ಮತ್ತು ವಹಿವಾಟು ವಿಸ್ತರಣೆ ಅವಕಾಶಗಳ ಬಗ್ಗೆ ಸಚಿವ ಪಾಟೀಲ ಅವರು ಚರ್ಚೆ ನಡೆಸಿದರು.

ಸ್ಯಾಮ್‌ಸಂಗ್ ಅಧಿಕಾರಿಗಳ ಸಭೆ ನಡೆಸಿದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್.

ಸ್ಯಾಮ್‌ಸಾಂಗ್ ಎಲೆಕ್ಟ್ರಾನಿಕ್ಸ್ ಮುಖ್ಯಸ್ಥರ ಜತೆಗಿನ ಭೇಟಿ ಸಂದರ್ಭದಲ್ಲಿ ಸ್ಮಾರ್ಟ್‌ಫೋನ್, ಎಲೆಕ್ಟ್ರಾನಿಕ್ಸ್, ಬ್ಯಾಟರಿ ಸೆಲ್ ತಯಾರಿಕೆಗೆ ಕರ್ನಾಟಕದಲ್ಲಿ ಇರುವ ಅನುಕೂಲಗಳನ್ನು ನಿಯೋಗವು ಮನವರಿಕೆ ಮಾಡಿಕೊಟ್ಟಿತು. ಸೆಮಿಕಂಡಕ್ಟರ್, ವಿದ್ಯುತ್‌ಚಾಲಿತ ವಾಹನ, ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ಕರ್ನಾಟಕವು ಉತ್ಕೃಷ್ಟ ಮೂಲಸೌಲಭ್ಯ, ಪರಿಣತ ತಂತ್ರಜ್ಞರು, ಪೂರಕ ಪರಿಸರದ ನೆರವಿನಿಂದ ಜಾಗತಿಕ ಆವಿಷ್ಕಾರದಲ್ಲಿ ಮುನ್ನಡೆ ಸಾಧಿಸುತ್ತಿರುವುದನ್ನು ವಿವರಿಸಲಾಗಿದೆ.

ತಜ್ಞ ವೈದ್ಯರ ಹುದ್ದೆ ಭರ್ತಿಗೆ ಕ್ರಮ; ದಿನೇಶ್ ಗುಂಡೂರಾವ್

ಸುಳ್ಯ: ಆಸ್ಪತ್ರೆಯಲ್ಲಿ ವಿಶೇಷ ತಜ್ಞ ವೈದ್ಯರ ನೇಮಕಕ್ಕೆ ಸರಕಾರ ಅನುಮತಿ ನೀಡಿದೆ. ಆದರೆ ದೂರ ಇರುವ

ತಾಲೂಕುಗಳಿಗೆ ಬರಲು ಹಲವು ಮಂದಿ ಹಿಂಜರಿಯುತ್ತಿರುವುದರಿಂದ ನೇಮಕಕ್ಕೆ ಹಿನ್ನಡೆಯಾಗಿದೆ.ಮುಂದಿನ ತಿಂಗಳು ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಪೋಸ್ಟ್ ಗ್ರಾಜುಯೇಷನ್ ಪೂರ್ಣಗೊಳ್ಳಲಿರುವವರಿಗೆ, ಅವರನ್ನು ಬಳಸಿಕೊಂಡು ಕಡ್ಡಾಯವಾಗಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಅವರು ಸುಳ್ಯದಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದರು. ಈ ಹಿಂದಿನ ಸರಕಾರ ಕೂಡ ಆರೋಗ್ಯ ಇಲಾಖೆಯಲ್ಲಿ ಯಾವುದೇ ನೇಮಕಾತಿ ನಡೆಸಿಲ್ಲ. ನಾವು ಈಗಾಗಲೇ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಹುದ್ದೆ ಭರ್ತಿ ಆಗುವವರೆಗೆ ಪರ್ಯಾಯ ವ್ಯವಸ್ಥೆಗೆ ಸೂಚಿಸಲಾಗುವುದು ಎಂದರು..

ಜು.12 ರಿಂದ 45 ದಿನ ಸಂಸದ ಬೊಮ್ಮಾಯಿ ಪರ್ಯಟನೆ

ಶಿಗ್ಗಾವಿ ಉಪಚುನಾವಣೆಗೆ ಬಿಜೆಪಿ ಸಿದ್ಧತೆ

ಹಾವೇರಿ: ನಾನು ರಾಜಕೀಯವಾಗಿ ಬೆಳೆಯಲು ಶಿಗ್ಗಾವಿ ಜನರ ಆಶೀರ್ವಾದ ಕಾರಣ, ಜುಲೈ 12 ರಿಂದ ಒಂದುವರೆ ತಿಂಗಳುಗಳ ಕಾಲ ಕ್ಷೇತ್ರದಲ್ಲಿ ಧನ್ಯವಾದ ಯಾತ್ರೆ ಮಾಡುತ್ತೇನೆ ಎಂದು ಸಂಸದ ಬಸವರಾಜ್ ಬೊಮ್ಮಾಯಿ ಹೇಳಿದರು.

ಶನಿವಾರ ಶಿಗ್ಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಬೊಮ್ಮಾಯಿ, ಶಿಗ್ಗಾವಿ ಉಪಚುನಾವಣೆ ವಿಚಾರವಾಗಿ ಅಶೋಕ ಅವರ ನೇತೃತ್ವದಲ್ಲಿ ಸಮಿತಿ ಮಾಡಿದ್ದೇವೆ. ಪಕ್ಷದಿಂದ ಸಮೀಕ್ಷೆ ಮಾಡಿಸುತ್ತಿದ್ದೇವೆ. ಶಿಗ್ಗಾವಿಯಲ್ಲಿ ಪೋಸ್ಟರ್ ಭರಾಟೆ ನಡೆಯುವುದಿಲ್ಲ ಎಂದರು.

ಪರಿಶಿಷ್ಟರ ಹಣಕ್ಕೆ ಕೈಹಾಕಿದ ರಾಜ್ಯ ಸರಕಾರ : ರಾಜ್ಯ ಸರಕಾರ ದಿವಾಳಿ ಆಗಿರೋದು ಪ್ರತಿಯೊಂದು ಹೆಜ್ಜೆಯಲ್ಲಿ ಪ್ರದರ್ಶನ ಮಾಡುತ್ತಿದೆ. ಸರಕಾರಕ್ಕೆ ಜನಹಿತ ಮುಖ್ಯವಲ್ಲ. ಎಸ್‌ಸಿ, ಎಸ್‌ಟಿಯವರ ಹಣ ಗ್ಯಾರಂಟಿ ಯೋಜನೆಗಳಿಗೆ 14 ಸಾವಿರ ಕೋಟಿ ವರ್ಗಾವಣೆ ಮಾಡಿದ್ದಾರೆ.ಈ ಸಮುದಾಯಗಳಿಗೆ ಸರಕಾರ ಮೋಸ ಮಾಡುತ್ತಿದೆ. ಈ ಹಣ ಎಸ್‌ಸಿ -ಎಸ್‌ಟಿ ಜನಾಂಗದ ಅಭಿವೃದ್ಧಿಗೆ ಬಳಕೆ ಆಗಬೇಕಿತ್ತು. ಆ ಎಲ್ಲ ಹಣ ಗ್ಯಾರಂಟಿಗೆ ಹೋಗುತ್ತಿದೆ. ಇದು ಕಾನೂನು ಉಲ್ಲಂಘನೆ ಆಗಿದೆ.ರಾಜಕಾರಣಕ್ಕಾಗಿ, ವೋಟಿಗಾಗಿ ದುರ್ಬಳಕೆ ಆಗುತ್ತಿದೆ.

ಡೆಂಗ್ಯೂ ಪ್ರಕರಣದಲ್ಲಿ ಹಾವೇರಿ ಜಿಲ್ಲಾಡಳಿತ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿಲ್ಲ. ಮಂತ್ರಿಗಳು ಕೇವಲ ಸಭೆ ಮಾಡುತ್ತಿದ್ದಾರೆ. ಚಿಕಿತ್ಸೆ ಸಿಗದಿದ್ದರೆ ಸಾವು -ನೋವುಗಳಾಗುತ್ತದೆ, ಜನ ಪರದಾಡುತ್ತಿದ್ದಾರೆ. ಆರೋಗ್ಯ ಇಲಾಖೆ ಸಂಪೂರ್ಣ ವಿಫಲವಾಗಿದ್ದು, ಡಿಎಚ್ ಓ ವರ್ಗಾವಣೆ ಮಾಡಬೇಕು.
-ಬಸವರಾಜ ಬೊಮ್ಮಾಯಿ, ಹಾವೇರಿ ಸಂಸದ

25 ಸಾವಿರ ಕೋಟಿ ಹಣ ಬಳಕೆ ಮಾಡಿಕೊಂಡಿದ್ದಾರೆ. ಹಿಂದುಳಿದ ವರ್ಗಗಳ ಚಾಂಪಿಯನ್ ಅಂತಾ ಹೇಳುವವರು ಆ ವರ್ಗಗಳಿಗೆ ಕಡಿಮೆ ಹಣ ಇಟ್ಟಿದ್ದಾರೆ. ಖಜಾನೆ ಸುಭದ್ರವಾಗಿದೆ ಅನ್ನುತ್ತೀರಿ ಆದರೆ ಪರಿಶಿಷ್ಟ ಜೇಬಿಗೆ ಯಾಕೆ ಕೈ ಹಾಕಿದ್ದೀರಿ ಎಂದು ಬಸವರಾಜ ಬೊಮ್ಮಾಯಿ ಕಿಡಿಕಾರಿದರು.

ತುಂಗಭದ್ರಾ ತಟದಲ್ಲಿ ಅಪರೂಪದ ನೀರುನಾಯಿ

ದಾವಣಗೆರೆ: ಹರಿಹರದ ಬಳಿ ಇರುವ ರಾಜನಹಳ್ಳಿ ಜಾಕ್ ವೆಲ್ ಬಳಿ ಜಿಲ್ಲೆಯ ಜೀವನದಿ ತುಂಗಭದ್ರೆಯ ತಟದಲ್ಲಿ ಅಪರೂಪದ ನೀರು ನಾಯಿಗಳು ಕಾಣಿಸಿಕೊಂಡಿವೆ.

ದಾವಣಗೆರೆಯ ಹರಿಹರದ ಬಳಿ ಇರುವ ರಾಜನಹಳ್ಳಿ ಜಾಕ್‌ವೆಲ್ ಬಳಿ ಕಾಣಿಸಿಕೊಂಡ ನೀರು ನಾಯಿಗಳ ಹಿಂಡು ಕಂಡು ಜನರು ಅಚ್ಚರಿಗೊಳಗಾಗಿದ್ದಾರೆ. ಸಾಮಾನ್ಯವಾಗಿ ಕಾಣಿಸದ ನೀರುನಾಯಿ ತುಂಗಭದ್ರಾ ನದಿ ದಂಡೆಯಲ್ಲಿ ಆಟವಾಡುವ ದೃಶ್ಯಗಳನ್ನು ಮೊಬೈಲ್ ನಲ್ಲಿ ಸೆರೆ ಹಿಡಿಯುತ್ತಿರುವುದು ಕಂಡುಬ ರುತ್ತಿದೆ. ಕೇವಲ ಆಣೆಕಟ್ಟು ಭಾಗದಲ್ಲಿ ಕಾಣಿಸುವ ನೀರು ನಾಯಿಗಳು ನದಿಯ ತಟದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷ.

ತಿಂಗಳೊಳಗಾಗಿ ವರದಿ ನೀಡುವಂತೆ ಸೂಚನೆ

← ಮೊದಲಪುಟದಿಂದ

ಆದರೆ ವಿವಿಧ ರೈತ ಸಂಘಟನೆಗಳು ಜನಪ್ರತಿನಿಧಿಗಳ ನೇತೃತ್ವದಲ್ಲಿ ಪ್ರತಿಭಟನೆ ಹಾಗೂ ಧರಣಿಗಳು ನಡೆಯುತ್ತಿವೆ ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸರಕಾರಕ್ಕೆ ಪತ್ರ ಬರೆದಿದ್ದಾರೆ.

ಈ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತುಮಕೂರು ಜಿಲ್ಲಾ ಸಚಿವರು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘಟನೆಗಳೊಂದಿಗೆ ಸಭೆ ನಡೆಸಿದ್ದರು. ಸಭೆಯಲ್ಲಿ ಕೇಳಿಬಂದ ಸಲಹೆಯಂತೆ ತುಮಕೂರು ಶಾಖಾ ಕಾಲುವೆ ಜಾಲದ ಪ್ರಾರಂಭದಲ್ಲಿ ನಿಗದಿಪಡಿಸಿದ ನೀರು ಹರಿಸಲು ಉಂಟಾಗಬಹುದಾದ ತೊಂದರೆಗಳನ್ನು ಪರಿಹರಿಸಲು ಹಾಗೂ ತುಮಕೂರು ಶಾಖಾ ಕಾಲುವೆಯ ವಿವಿಧ ಭಾಗಗಳಿಗೆ ನಿಗದಿಯಾಗಿರುವ ನೀರನ್ನು ಹರಿಸಲು ಕೈಗೊಳ್ಳಬಹುದಾದ ನೀರು ನಿರ್ವಹಣಾ ಕ್ರಮಗಳಾದ ಹಾಗೂ ನಿಯಮಗಳ ಬಗ್ಗೆ ಅಧ್ಯಯನ ನಡೆಸಲು ತಾಂತ್ರಿಕ ಸಮಿತಿ ರಚಿಸಲಾಗಿದೆ.

ಸಮಿತಿಯಲ್ಲಿ ಯಾರ‍್ಯಾರು?: ನಿವೃತ್ತ ಮುಖ್ಯ ಎಂಜಿನಿಯರ್ ಅರವಿಂದ ಡಿ. ಕಣಗಿಲೆ ಸಮಿತಿ ಅಧ್ಯಕ್ಷರಾಗಿದ್ದು, ನಿವೃತ್ತ ಪ್ರಧಾನ ಎಂಜಿನಿಯರ್ ಕೆ.ಬಾಲಕೃಷ್ಣ, ನಿವೃತ್ತ ಮುಖ್ಯ ಎಂಜಿನಿಯರ್ ಶಂಕರೇಗೌಡ, ಎಂ.ಜಿ.ಶಿವಕುಮಾರ್ ಸದಸ್ಯರಾಗಿದ್ದು, ಹೇಮಾವತಿ ನಾಲಾ ವೃತ್ತದ ಅಧೀಕ್ಷಕ ಎಂಜಿನಿಯರ್ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ರಾಜ್ಯದಲ್ಲಿ ಡ್ರಗ್ಸ್ ದಂಧೆಗೆ ಕಡಿವಾಣ ಬಿದ್ದಿಲ್ಲವೇಕೆ?

← ಮೊದಲಪುಟದಿಂದ

ಇವರೆಲ್ಲರೂ ಜಾಗೃತರಾಗಲು ಪೊಲೀಸ್ ಅಧಿಕಾರಿಗಳು ಮೇಲಿಂದ ಮೇಲೆ ಭೇಟಿ ನೀಡಬೇಕು. ಕನಿಷ್ಠ ಒಂದು ತಿಂಗಳಲ್ಲಿ ಮೂರು ಠಾಣೆಗಳಿಗೆ ಭೇಟಿ ನೀಡಿ ಜನಸಂಪರ್ಕ ಮಾಡಿದರೆ ವಿಷಯ ತಿಳಿಯುತ್ತದೆ ಎಂದು ಅಭಿಪ್ರಾಯಪಟ್ಟರು.

ರಿಯಲ್ ಎಸ್ಟೇಟ್ ಮಾಡುವವರೊಂದಿಗೆ ಪೊಲೀಸರು ಯಾವುದೇ ಕಾರಣಕ್ಕೂ ಶಾಮೀಲಾಗಬಾರದು. ಇವರೇ ಸ್ವತಃ ರಿಯಲ್ ಎಸ್ಟೇಟ್ ಮಾಡುವುದು ತಿಳಿದರೆ ಕಠಿಣ ಕ್ರಮ ಜರುಗಿಸಲಾಗುವುದು. ಎಸ್‌ಪಿ, ಡಿಸಿಪಿ, ಐಜಿ, ಪೊಲೀಸ್ ಆಯುಕ್ತರು ಪ್ರತಿ ದಿನ ಒಂದು ಪೊಲೀಸ್ ಠಾಣೆಗೆ ಭೇಟಿ ನೀಡಲೇಬೇಕು. ಸ್ಥಳೀಯ ಜನರನ್ನು ಭೇಟಿ ಮಾಡಿ ಇಲ್ಲಿನ ಸಮಸ್ಯೆಗಳೇನು ಎಂದು ಅರಿಯಬೇಕು ಎಂದು ಸೂಚನೆ ನೀಡಿದರು.

ಸ್ಥಳೀಯ ಸಂಸ್ಥೆ ಚುನಾವಣೆಯೇ ಬಿಜೆಪಿಯ ಮುಂದಿನ ಟಾರ್ಗೆಟ್

← ಮೊದಲಪುಟದಿಂದ

ಈ ಚುನಾವಣೆಗಳಿಗೆ ಈಗಿನಿಂದಲೇ ಸಿದ್ಧತೆ ಆರಂಭಿಸಲು ತೀರ್ಮಾನಿಸಿದ್ದು, ವಿಶೇಷ ಕಾರ್ಯಕಾರಿಣಿಯಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ಮುಂದಿನ ಐದಾರು ತಿಂಗಳಲ್ಲಿ, ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಲು ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

ಇದಕ್ಕೆ ಪೂರಕವಾಗಿ ರಾಜ್ಯ ಬಿಜೆಪಿ ಪ್ರಭಾರಿಯಾಗಿ ರಾಧಾಮೋಹನ್ ದಾಸ್ ಹಾಗೂ ಸಹ ಪ್ರಭಾರಿಯಾಗಿ ತೆಲಂಗಾಣದ ಶಾಸಕ ಸುಧಾಕರ್ ರೆಡ್ಡಿ ಅವರನ್ನು ನೇಮಿಸಲಾಗಿದೆ. ಪ್ರಭಾರಿಗಳ ಬದಲಾವಣೆಯೊಂದಿಗೆ, ಸಂಘಟನೆಯಲ್ಲಿ ಹೊಸ ಉತ್ಸಾಹ ತರುವ ಪ್ರಯತ್ನಕ್ಕೆ ನಾಯಕರು ಮುಂದಾಗಿದ್ದಾರೆ ಎನ್ನಲಾಗಿದೆ.

ವಿವಿಧ ಗುಂಪುಗಳಾಗಿ ಹೋರಾಟ: ಸರಕಾರದ ವಿರುದ್ಧದ ಹೋರಾಟಗಳು ರಾಜ್ಯಾದ್ಯಂತ ನಡೆಸಲು ಬಿಜೆಪಿ ತೀರ್ಮಾನಿಸಿದೆ. ಇಷ್ಟು ದಿನ ಬೆಂಗಳೂರಿನಲ್ಲಿ ರಾಜ್ಯಮಟ್ಟದ ನಾಯಕರು ಪ್ರತಿಭಟನೆ ನಡೆಸುವುದು, ಜಿಲ್ಲಾ ಕೇಂದ್ರಗಳಲ್ಲಿ ಸ್ಥಳೀಯ ನಾಯಕರು ಹೋರಾಡುವುದು ಎನ್ನುವ ನಿಯಮವಿತ್ತು. ಬೆಂಗಳೂರು ಕೇಂದ್ರಿತವಾಗಿ ಹೋರಾಟ ನಡೆಯುವುದರಿಂದ ಪಕ್ಷಕ್ಕೆ ಬೆಂಗಳೂರಿನ ಆಚೆ ಹೋರಾಟಗಳಿಗೆ ಹೆಚ್ಚಿನ ಪ್ರಚಾರ ಹಾಗೂ ಪ್ರತಿಕ್ರಿಯೆ ಸಿಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ ಸೇರಿದಂತೆ ಪ್ರಮುಖ ನಾಯಕರ ನೇತೃತ್ವದಲ್ಲಿ ಐದಾರು ತಂಡಗಳನ್ನು ರಚಿಸಿ, ಒಂದೊಂದು ತಂಡ ಒಂದೊಂದು ಪ್ರಾಂತ್ಯದಲ್ಲಿ ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಶಾಸಕಾಂಗ ನಾಯಕ ಆಯ್ಕೆ ಹೊಣೆ ಎಚ್ಡಿಡಿ ಹೆಗಲಿಗೆ

← ಮೊದಲಪುಟದಿಂದ

ಕುಮಾರಸ್ವಾಮಿ ಅವರು ಲೋಕಸಭೆಗೆ ಚುನಾಯಿತರಾದ ಮೇಲೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ ಶಾಸಕಾಂಗ ಪಕ್ಷದ ಸ್ಥಾನ ತೆರವಾಗಿದೆ. ಆ ಸ್ಥಾನಕ್ಕೆ ಹಿರಿಯ ಶಾಸಕ ಜಿ.ಟಿ.ದೇವೇಗೌಡರು, ಎಚ್.ಡಿ. ರೇವಣ್ಣ ಸೇರಿದಂತೆ ಹಲವರ ಹೆಸರುಗಳು ಕೇಳಿಬಂದಿವೆ. ದೇವೇಗೌಡರು ಮತ್ತು ಕುಮಾರಸ್ವಾಮಿಯವರು ನೇಮಕ ಮಾಡುವವರು ಶಾಸಕಾಂಗ ಪಕ್ಷದ ನಾಯಕರಾಗಲಿದ್ದಾರೆ.

- ಎಚ್‌ಡಿಕೆ, ದೇವೇಗೌಡರಿಗೆ ಅಧಿಕಾರ ನೀಡಿದ ನಾಯಕರು
- ಜು.16ರಿಂದ ಆರಂಭವಾಗಲಿರುವ ವಿಧಾನಸಭಾ ಕಲಾಪದ ವೇಳೆಗೆ ಹೆಸರನ್ನು ಪ್ರಕಟಿಸುವ ಸಾಧ್ಯತೆ

ಮಳೆಗಾಲದ ಅಧಿವೇಶನದಲ್ಲಿ ಯಾವ ರೀತಿ ಹೋರಾಟ ನಡೆಸಬೇಕು, ಜನರ ಸಮಸ್ಯೆಗಳನ್ನು ಹೇಗೆ ಪ್ರಸ್ತಾಪಿಸಬೇಕು ಎಂಬ ಬಗ್ಗೆ ಕುಮಾರಸ್ವಾಮಿ ಅವರು ಶಾಸಕರೊಂದಿಗೆ ಚರ್ಚಿಸಿದ್ದಾರೆ. ಪೂರ್ವ ಸಿದ್ಧತೆ ಮಾಡಿಕೊಂಡು ಅಧಿವೇಶನದಲ್ಲಿ ಭಾಗಿಯಾಗಬೇಕು, ಜನರು ಅಧಿವೇಶನದಲ್ಲಿ ನಾವು ನಡೆಸುವ ಹೋರಾಟ ಬೆಳಕು ಚೆಲ್ಲುವ ವಿಚಾರವನ್ನು ಗಮನಿಸುತ್ತಾರೆ ಎಂದು ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಸಭೆಯಲ್ಲಿ ಶಾಸಕ ಸುರೇಶ್ ಬಾಬು, ವೆಂಕಟಶಿವಾರೆಡ್ಡಿ, ಸಮೃದ್ಧಿ ಮಂಜುನಾಥ್, ಸ್ವರೂಪ್, ಎಂ.ಪಿ.ಕೃಷ್ಣಪ್ಪ, ಶಾರದಾ ಪುರ್ಯಾ ನಾಯ್ಕ್, ಹರೀಶ್‌ಗೌಡ, ನೇಮಿರಾಜ ನಾಯಕ್, ಜವರಾಯಿಗೌಡ ಸೇರಿದಂತೆ ಅನೇಕರಿದ್ದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಅಧಿಕಾರ ನೀಡಿದ್ದು, ಈ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡರ ಜತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು. ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಬಗ್ಗೆ ಶಾಸಕರ ಜತೆ ಸುದೀರ್ಘ ಚರ್ಚೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಗಿದ್ದು, ದೇವೇಗೌಡರ ಜತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.
-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ
ಜಿಲ್ಲಾ ಆಡಳಿತ ಆವರಣ, ಕೊಪ್ಪಳ
ದೂರವಾಣಿ ಸಂಖ್ಯೆ: 08539-221660 E-Mail : dhokoppal@gmail.com
ಕ್ರ.ಸಂ/ಜಿ.ಆ.ಕು.ಕ.ಇ/ಕೊಪ್ಪಳ/ಎನ್.ಕ್ಯೂ.ಎ.ಎಸ್./ಉಪ/15ನೇಹ2024-25 ದಿನಾಂಕ: 05-07-2024
ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ) ದ್ವಿಲಕೋಟೆ ಪದ್ಧತಿ.
ವಿಷಯ:- 2024-25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿನ ಎನ್.ಕ್ಯೂ.ಎ.ಎಸ್. ಕಾರ್ಯಕ್ರಮದಡಿಯಲ್ಲಿ ರೋಗನಿರ್ಣಯ ಉಪಕರಣಗಳನ್ನು ಆಯ್ದ 35 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು 3 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಖರೀದಿಸಲು ಟೆಂಡರ ಪ್ರಕಟಣೆ ನೀಡಲು ಕೋರಿ.
ಕೊಪ್ಪಳ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ 2024-25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಎನ್.ಕ್ಯೂ.ಎ.ಎಸ್. ಕಾರ್ಯಕ್ರಮದಡಿಯಲ್ಲಿ ರೋಗನಿರ್ಣಯ ಉಪಕರಣಗಳನ್ನು ಆಯ್ದ 35 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು 3 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಖರೀದಿಸಲು ಟೆಂಡರ ಕರೆಯಲಾಗಿದ್ದು. (**ಇಂಡೆಂಟ್ ಸಂಖ್ಯೆ:** DHFWS/2024-25/IND0715) ಸದರಿ ಟೆಂಡರನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000 ರ ಮೇರೆಗೆ ದ್ವಿ-ಲಕೋಟೆ ಪದ್ಧತಿಯಲ್ಲಿಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. **ಟೆಂಡರ್ ಅಂದಾಜು ಮೊತ್ತ ರೂ.1,13,28,700/-** ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು. ವಿವರ ಈ ಕೆಳಕಂಡಂಡತೆ ಇರುತ್ತದೆ.
(1) ಟೆಂಡರ ಎನ್.ಐ.ಟಿ. ಪಬ್ಲಿಷನ್ ದಿನಾಂಕ: 08/07/2024 ಬೆಳಿಗ್ಗೆ 11:00 (2) ಟೆಂಡರ ಕುರಿತು ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ 06/08/2024 ಸಂಜೆ 17:00 (3) ದ್ವಿ ಲಕೋಟೆ ಪದ್ಧತಿಯಂತೆ ಇ- ಪೋರ್ಟಲ್‌ನಲ್ಲಿ ಟೆಂಡರನ್ನು ಸಲ್ಲಿಸುವ ಕಡೆಯ ದಿನಾಂಕ 08/08/2024 ಸಂಜೆ 17:00 (4) ಸದರಿ ಉಪಕರಣಗಳ ಡೆಮೋ ನೀಡುವ ದಿನಾಂಕ 09/08/2024 ಬೆಳಿಗ್ಗೆ 11:00 (5) ಸದರಿ ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 12/08/2024 ಬೆಳಿಗ್ಗೆ 11:00 (6) ಸದರಿ ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ 14/08/2024 ಬೆಳಿಗ್ಗೆ 11:00
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು, ಕೊಪ್ಪಳ
ವಾ.ಸಾ.ಇ/ಕೊಪ್ಪಳ/133/ ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ-4, ಚಿಕ್ಕೋಡಿ
ಫೋನ ನಂ:08338 - 272485 ಫ್ಯಾಕ್ಸ ನಂ: 08338 - 275186
ಟೆಂಡರ ಪ್ರಕಟಣೆ
(ಕೆಪಿಪಿ ಪೋರ್ಟಾಲ್ ಮುಖಾಂತರ ಮಾತ್ರ)
ಟೆಂಡರ ಪ್ರಕಟಣೆ ಸಂಖ್ಯೆ :KNNL/GRBCC -4/Tender/2024-25/04 Date:- 04-07-2024
ವ್ಯವಸ್ಥಾಪಕ ನಿರ್ದೇಶಕರು,ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಾಲ್‌ನಲ್ಲಿ (https://kppp.karnataka.gov.in)4701 ಅಡಿಯಲ್ಲಿನ ಕರಗಾಂವ ಏತ ನೀರಾವರಿ ಯೋಜನೆ ಕಾಮಗಾರಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಗೆ Turn Key basis ಟೆಂಡರನ್ನು ಕರೆಯಲಾಗಿರುತ್ತದೆ. ದಿನಾಂಕ 04-07-2024 ರಿಂದ ಕೆಳಗೆ ತಿಳಿಸಿರುವ ದಿನಾಂಕದವರೆಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಾಲ್ ಮುಖಾಂತರ ಅರ್ಹ ಗುತ್ತಿಗೆದಾರರು Turn Key basis ಟೆಂಡರನ್ನು ಸಲ್ಲಿಸಬಹುದಾಗಿದೆ. **ವಿವರ :**
ಕೆ.ಪಿ.ಪಿ ಪೋರ್ಟಾಲ್ ಇಂಡೆಂಟ ಸಂಖ್ಯೆ:Two Cover System: Indent No: 1213, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ: 97.59 Crores. ಇಎಂಡಿ ಮೊತ್ತ ರೂ:98,00,000/-,ಟೆಂಡರ ಕುರಿತು ಪ್ರಶ್ನೆಗಳಿಗಾಗಿ /ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ:30-07-2024, Up to 17.00 hrs. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಕಚೇರಿಯಲ್ಲಿ ಪೂರ್ವ ಬಿಡ್ ಸಭೆ ದಿನಾಂಕ:30-07-2024, at 11.30 hrs. ಭರ್ತಿ ಮಾಡಿದ ಟೆಂಡರಗಳನ್ನು ಕೆ.ಪಿ.ಪಿ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ:05-08-2024 Up to 16.00 hrs. ತಾಂತ್ರಿಕ ಬಿಡ್‌ನ್ನು (ಲಕೋಟೆ-1) ತೆರೆಯುವ ದಿನಾಂಕ:Technical Bid: 07-08-2024 at 11.30 hrs. ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ನ್ನು (ಲಕೋಟೆ-2) ತೆರೆಯುವ ದಿನಾಂಕ:Financial Bid: 09-08-2024 at 11.30 hrs.
ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ
DIPR/BGM/RO-NO-319/KSMCA/2024-25

ಕರ್ನಾಟಕ ಸರ್ಕಾರ
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು-ಮೈಸೂರು
ಕಾರ್ಯಪಾಲಕ ಅಭಿಯಂತರವರ ಕಛೇರಿ, ನಂ-2 ವಿಭಾಗ, ಕಾಡಾ, ಕಾಜಯೋ ವಿಜಯನಗರ 1 ನೇ ಹಂತ, ಮೈಸೂರು-17
ದೂರವಾಣಿ ಸಂಖ್ಯೆ:0821-2414090 email-eecada2mysore@gmail.com
ಸಂಖ್ಯೆ:04/2024-25 ದಿನಾಂಕ:05.07.2024
ಟೆಂಡರ್ ಪ್ರಕಟಣೆ
(Through e-procurement only)
ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಯಲ್ಲಿ 01 ಆಯಕಟ್ಟು ರಸ್ತೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ KPPP portal ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ (KW-4) ಟೆಂಡರ್ ಡಾಕ್ಯೂಮೆಂಟ್ ರನ್ವಯ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಗುತ್ತಿಗೆದಾರರು ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:10/07/2024 ರಿಂದ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25/07/2024 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:26/07/2024 ಸಂಜೆ 4.30 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 02/08/2024 ಸಂಜೆ 5.00 ಗಂಟೆಯ ನಂತರ ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.
ಸಹಿ/- ಕಾರ್ಯಪಾಲಕ ಅಭಿಯಂತರರು, ನಂ.2 ವಿಭಾಗ, ಕಾಡಾ, ಕಾಜಯೋ, ಮೈಸೂರು.
ಸಂ:ವಾಸಾಸಂಇ:ಚಾನಗರ:79:2024-25

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ-577401.
Ph: 08183-226071 Emai.: Sagardcf123@gmail.com
ಕ್ರ:ಬಿ5/ಎಸ್‌ಎಎಸ್/ಇ-ಹರಾಜು/ಸಿಆರ್-11/2024-25 ದಿ: 01.07.2024
ನಾಟಾ/ಸೌದೆ/ಬಿಲ್ಲೇಟ್ಸ್/ಪೋಲ್ಸ್ ಮುಂತಾದ ಅರಣ್ಯ ಉತ್ಪನ್ನಗಳನ್ನು ಇ-ಹರಾಜು ಮೂಲಕ ವಿಲೇ ಮಾಡುವ ಬಗ್ಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಸಾಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ನಾಟಾ/ಸೌದೆ/ಬಿಲ್ಲೇಟ್ಸ್/ಪೋಲ್ಸ್ ಮುಂತಾದ ಅರಣ್ಯ ಉತ್ಪನ್ನಗಳನ್ನು ಇ-ಹರಾಜು ಮೂಲಕ ವಿಲೇಗೊಳಿಸಲು ದಿನಾಂಕ:18.07.2024 ರಿಂದ 20.07.2024, ವರೆಗೆ ದಿನಾಂಕ ನಿಗದಿಗೊಳಿಸಿದ್ದು, ಸದರಿ ಇ-ಹರಾಜು ಮಾರಾಟ ಪ್ರಕಟಣೆಯನ್ನು ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:01.07.2024ರಲ್ಲಿ ಪ್ರಕಟಿಸಿದ್ದು, ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಎಲ್ಲಾ ಷರತ್ತಿಗೊಳಪಟ್ಟು ಆಸಕ್ತ ಖರೀದಿದಾರರು ಇ-ಹರಾಜಿನಲ್ಲಿ ಭಾಗವಹಿಸಿ, ಹರಾಜಿಗಿಟ್ಟಿರುವ ಲಾಟುಗಳನ್ನು ಖರೀದಿಸಬಹುದಾಗಿರುತ್ತದೆ. ಇ-ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ ಸಂಖ್ಯೆ:www.mstcecommrce.com ಮತ್ತು www.etimber.in ಮೂಲಕ ಪಡೆದು ಕೊಳ್ಳಬಹುದಾಗಿದೆ.
ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/43/07/24-25/233

ಕರ್ನಾಟಕ ಸರ್ಕಾರ (ವಾಣಿಜ್ಯ ತೆರಿಗೆ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ವಾಣಿಜ್ಯ ತೆರಿಗೆ ಭವನ, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
ಫೋನ್ ನಂಬರ್ 08192-231359, 08192-254838
ಸಂಖ್ಯೆ: ಸಿಬ್ಬಂದಿ.8/ಡಿ ದರ್ಜೆ/2024-25/ಟಿ.ನಂ.1445 ದಿನಾಂಕ: 06.07.2024
ಟೆಂಡರ್ ಪ್ರಕಟಣೆ
ವಾಣಿಜ್ಯ ತೆರಿಗೆ ಇಲಾಖೆಯ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿ.ಸ&ಸೇ.ತೆ. ಕಛೇರಿ, ದಾವಣಗೆರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ದಾವಣಗೆರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ ಹಾಗೂ ಈ ವಿಭಾಗದ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ 43 'ಡಿ' ದರ್ಜೆ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸುವ ಸಲುವಾಗಿ ದ್ವಿ-ಲಕೋಟಿ/ದ್ವಿ-ಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರಿನ ನಿಬಂಧನೆಗಳು, ಷರತ್ತುಗಳು, ನಮೂನೆ ಮತ್ತು ಇತರೆ ವಿವರಗಳು ಜಾಲತಾಣ www.kppp.karnataka.gov.in ನಲ್ಲಿ ಲಭ್ಯವಿರುತ್ತವೆ.
ಸಹಿ/- ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗೆ, ದಾವಣಗೆರೆ.
ವಾಸಾಇ/ದಾವಣಗೆರೆ/117/ ಕೆಎಸ್‌ಎಂಸಿಎ/2024-25

(ಕರ್ನಾಟಕ ಸರ್ಕಾರ)
ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ.
ಸಂಖ್ಯೆ:ಸಾಆಹೊನಪು/ಸರಬ/ಪಥ್ಯಾಹಾರ/03/2024-25 ದಿನಾಂಕ:08/07/2024
ಪಥ್ಯಾಹಾರ ಟೆಂಡರ್ ಅಧಿಸೂಚನೆ
ಸಾರ್ವಜನಿಕ ಆಸ್ಪತ್ರೆ 250 ಹಾಸಿಗೆಗಳು ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆ 30 ಹಾಸಿಗೆಗಳು ಒಟ್ಟು 280 ಹಾಸಿಗೆಗಳ ಈ ಎರಡು ಆಸ್ಪತ್ರೆಗಳಿಗೆ 2024-25ನೇ ಸಾಲಿಗೆ ಒಳರೋಗಿಗಳಿಗೆ ಸಿದ್ಧಪಡಿಸಿದ ಊಟ (ಸಸ್ಯಹಾರ) ಮತ್ತು ಬ್ರೆಡ್ ಸರಬರಾಜಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಹ್ವಾನಿಸಲಾಗಿದೆ. ದಿನಾಂಕ:09/07/2024 ರಿಂದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲಾತಿಗಳ ಸ್ವೀಕೃತಿಗೆ ಅಂತಿಮ ದಿನಾಂಕ:24/07/2024ರ ಸಂಜೆ 04:00 ಗಂಟೆಯಾಗಿರುತ್ತದೆ. ಹೆಚ್ಚಿನವಿವರಗಳು Website: https://kppp.karnataka.gov.in. ನಲ್ಲಿ ಲಭ್ಯವಿರುತ್ತದೆ.
ಸಹಿ/- ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ. ಹಾಸನ ಜಿಲ್ಲೆ-573211
ವಾಸಾಸಂಇ/ಹಿಸನಿ/ಹಾಸನ/164/ಕೆಎಸ್‌ಎಂಸಿಎ/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ ಮುಖ್ಯ ರಸ್ತೆ, ಕಲಬುರಗಿ-585102
(ಯಾಂತ್ರಿಕ ಇಲಾಖೆ)
:: ಟೆಂಡರ ಆಹ್ವಾನ ಸೂಚನಾ ಪತ್ರ ::
ಅಲ್ಪಾವಧಿ ಟೆಂಡರ್ ಸಂಖ್ಯೆ ಟಿ-69_Call2
ದಿನಾಂಕ 06/07/2024
(KPP Portal Ref No KKRTC/2023-24/SE1798_Call2)
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರ ಯಾದಗಿರಿಯಲ್ಲಿ On Labor Job Contract Basis ಅಡಿಯಲ್ಲಿ 300 ಹಳೆ ಬಸ್‌ಗಳ ರೀಫರ್ಬಿಷಿಂಗ್ ಕಾರ್ಯ ಕೈಗೊಳ್ಳಲು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ **http://kppp.karanataka.gov.in** ನಲ್ಲಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಸದರಿ ಪೋರ್ಟಲ್ ನಲ್ಲಿ ದಿನಾಂಕ: **22/07/2024** ರಂದು ಸಮಯ-15.00 ಗಂಟೆಯವರೆಗೆ ಬಿಡ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 2.72 ಕೋಟಿಗಳಾಗಿರುತ್ತದೆ.**
ಕ.ಕ.ರ.ಸಾ. ನಿಗಮದ ವತಿಯಿಂದ ಮಾಹಿತಿ ಅಗತ್ಯವಿದ್ದಲ್ಲಿ cme.kkrtc@gmail.com ಇ-ಮೇಲ್ ಮಾಡಬಹುದಾಗಿರುತ್ತದೆ. (ಮೊಬೈಲ್ ಸಂಖ್ಯೆ: 7760992001)
ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)
ವಾ.ಸಾ.ಸಂ.ಇ/ಕಲಬುರಗಿ/178/ಕೆ.ಎಸ್.ಎಂ.ಸಿ.&ಎ/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ, ಎಫ್.ಐ.ಸಿ ವಿಭಾಗ ನಂ-2 ಹೊರ್ತಿ. ತಾ॥ ಇಂಡಿ ಜಿ॥ ವಿಜಯಪುರ.
ಸಂ/ಕೃಭಾಜನಿನಿ/ರೆಏನೀ/ಎಫ್.ಐ.ಸಿ/ವಿಭಾಗ-2/ಯೋ.ಶಾ/ಹಂತ-3/ಕೋಟೇಶನ/2024-25/124 ದಿನಾಂಕ: 05.07.2024
ಶಾರ್ಟ ಟರ್ಮ ಕೋಟೇಶನ್
ರೇವಣಸಿದ್ದೇಶ್ವರ ಏತ ನೀರಾವರಿ ಪೈಪ ವಿತರಣಾ ವ್ಯವಸ್ಥೆಯ ಹಂತ-3 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿ ಜಲಾಶಯದ ಫೋರಶೋರ್‌ನಿಂದ ನೀರನ್ನು ಎತ್ತುವ ಮೂಲಕ ಇಂಡಿ ತಾಲ್ಲೂಕಿನಲ್ಲಿ (ನಾಗಠಾಣ ವಿಧಾನಸಭಾ ಸೇರಿದಂತೆ 28000.00 ಹೆಕ್ಟೇರ) ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಂಬಂಧಿಸಿದ ಅಂದಾಜು ಪತ್ರಿಕೆ ತಯಾರಿಸಲು ಕೆಲವೊಂದು ಐಟಂಗಳ (Electro-Mechanical) ದರಗಳು ಇಲಾಖಾ ಏಕರೂಪ ದರಪಟ್ಟಿಯಲ್ಲಿ ಲಭ್ಯವಿಲ್ಲದ ಕಾರಣ ಅಂದಾಜು ಪತ್ರಿಕೆಯಲ್ಲಿ ಅಳವಡಿಸಲು, ಅಧಿಕೃತ ಡೀಲರ್‌ಗಳು/ಅಧಿಕೃತ ಸೇವಾ ಕಾರ್ಯಕರ್ತರಿಂದ ಸದರಿ ಐಟಂಗಳಿಗೆ ದರ ನೀಡಲು ಕೋಟೇಶನ ಕರೆಯಲಾಗಿದೆ. ಸದರಿ ಐಟಂಗಳ ವಿವರಗಳನ್ನು ಈ ಕಛೇರಿಗೆ ಸಂಪರ್ಕಿಸಿ ಮಾಹಿತಿ ಪಡೆದು ದಿನಾಂಕ: 15.07.2024 ಸಾಯಂಕಾಲ 5.00 ಗಂಟೆಯೊಳಗೆ ಸಲ್ಲಿಸಲು ಕೋರಲಾಗಿದೆ.
ಈ ಕಛೇರಿಯ ಇ-ಮೇಲ್ ವಿಳಾಸ: kbjnlhortidivision@gmail.com ಸಂಪರ್ಕಿಸುವ ದೂರವಾಣಿ ಸಂಖ್ಯೆ: 8073753443 ಶ್ರೀ ಮಾಯಪ್ಪ ಎಲ್.ಪಡಗನೂರ, ಕಾರ್ಯನಿರ್ವಾಹಕ ಅಭಿಯಂತರರು
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎಫ್.ಐ.ಸಿ ವಿಭಾಗ ನಂ-2, ಹೊರ್ತಿ
ವಾಸಾಸಂಇ/ವಿಜಯಪುರ/87/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್, ಬಿ.ಎಂ. ರಸ್ತೆ, ಹಾಸನ-573201
ದೂರವಾಣಿ & ಫ್ಯಾಕ್ಸ್08172-268296 ಈಮೈಲ್ : dcfhassan@yahoo.in
ಸಂಖ್ಯೆ:ಎ4/ಸಿಟ್ರಿಯಾಡೋರಾ/ಹರಾಜು/ಸಿಆರ್-60/2023-24 ದಿನಾಂಕ : 01.07.2024
ಇ-ಹರಾಜು ಪ್ರಕಟಣೆ(ಎಂಎಸ್‌ಟಿಸಿ ಪೋರ್ಟಲ್ ಮುಖಾಂತರ)
2024-25ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ವಲಯಗಳ ನೆಡುತೋಪುಗಳಲ್ಲಿ ನೀಲಗಿರಿ/ಸಿಟ್ರಿಯಾಡೋರಾ ಎಲೆಗಳ ಸಂಗ್ರಹಣಾ ಗುತ್ತಿಗೆಯನ್ನು ದ್ವೈವಾರ್ಷಿಕವಾಗಿ ದಿನಾಂಕ 01.04.2024 ರಿಂದ 31.03.2026 ರವರೆಗೆ ಮೆ॥ ಎಂ.ಎಸ್.ಟಿ.ಸಿ., ಬೆಂಗಳೂರು, ಸಂಸ್ಥೆಯ ಮುಖಾಂತರ ಇ-ಹರಾಜನ್ನು ದಿನಾಂಕಃ 29.07.2024 ರಂದು ನಡೆಸಲಿದ್ದು, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ www.mstcecommerce.com ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- (ಸೌರಬ್ ಕುಮಾರ್,ಭಾ.ಅ.ಸೇ.), ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/158/2024-25

ಟ್ವೀಟೂ-ಖಾರಾ

ಬಿಜೆಪಿ
ಕರ್ನಾಟಕ

ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರಕಾರಕ್ಕೆ ದಿಕ್ಕುತಪ್ಪಿದ ಆಡಳಿತದಿಂದಾಗಿ ಲಕ್ಷಾಂತರ ಸರಕಾರಿ ಹುದ್ದೆಗಳು ಖಾಲಿಯಿದ್ದರೂ ಭರ್ತಿ ಮಾಡಿಕೊಳ್ಳುವುದಕ್ಕೆ ಇಚ್ಛಾಶಕ್ತಿಯ ಕೊರತೆಯೋ ಅಥವಾ ಖಜಾನೆಯಲ್ಲಿ ಕಾಸಿಲ್ಲವೋ ತಿಳಿಯುತ್ತಿಲ್ಲ..!

ಚನ್ನವೀರ
ಮೈಸೂರು

ಖಾಸಗೀಕರಣದ ಸಮರ್ಥನೆ ಮಾಡಿದವರು ನೇಮಕಾತಿ ಬಗ್ಗೆ ಮಾತನಾಡುವುದು ವಿಪರ್ಯಾಸ..! ಅಂದಹಾಗೆ ಕೇಂದ್ರ ಸರಕಾರ ರೈಲ್ವೆ ಇಲಾಖೆಯಲ್ಲಿ ಡಿ ಗ್ರೂಪ್ ನೇಮಕಾತಿ ಪ್ರಕ್ರಿಯೆಗೆ ತಿಲಾಂಜಲಿ ಇಟ್ಟು ಎಷ್ಟು ವರ್ಷಗಳು ಆಗಿವೆ..?

ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಆರೋಗ್ಯ ವಿಚಾರಿಸಿದ ಸಂಸದ ತೇಜಸ್ವಿ ಸೂರ್ಯ.

ದಾಖಲಾದ ದಿನದಿಂದ ಆಸ್ಪತ್ರೆ ಬಳಿಯೇ ಇರುವ ಅಭಿಮಾನಿ
ಶನಿವಾರ ಮಾಜಿ ಸಿಎಂ ಯಡಿಯೂರಪ್ಪ, ಸಂಸದ ತೇಜಸ್ವಿ ಸೂರ್ಯ ಸೇರಿ ಹಲವರ ಭೇಟಿ

ಭಟ್ಟರ ಆರೋಗ್ಯ ವಿಚಾರಿಸಲು ಸಾಹಿತ್ಯಾಭಿಮಾನಿಗಳ ದಂಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎದೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ವಿಶ್ರಾಂತಿಯಲ್ಲಿದ್ದಾರೆ. ಆದರೆ ದಿನದಿಂದ ದಿನಕ್ಕೆ ಭಟ್ಟರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ.

ವೈದ್ಯರ ಸೂಚನೆ ಮೇರೆಗೆ ವಿಶ್ರಾಂತಿಯಲ್ಲಿದ್ದರೂ, ಸಾಹಿತ್ಯಾಭಿಮಾನಿಗಳು, ಸಾಹಿತಿಗಳು, ಚಲನಚಿತ್ರ ನಟ-ನಟಿಯರು, ರಾಜಕಾರಣಿಗಳು, ಉದ್ಯಮ ಕ್ಷೇತ್ರದ ಪ್ರಮುಖ ಸೇರಿದಂತೆ ಅನೇಕ ಗಣ್ಯರು ಆಸ್ಪತ್ರೆಗೆ ಆಗಮಿಸುತ್ತಿದ್ದಾರೆ. ಇವರೊಂದಿಗೆ ವಿಶ್ವೇಶ್ವರ ಭಟ್ಟರ ಓದುಗ, ಪತ್ರಿಕೋದ್ಯಮದ ಸ್ನೇಹಿತರು ಸೇರಿದಂತೆ ನಿತ್ಯ ನೂರಾರು ಮಂದಿ ಆಗಮಿಸುತ್ತಿದ್ದಾರೆ. ಶನಿವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ತೇಜಸ್ವಿಸೂರ್ಯ ಸೇರಿದಂತೆ ಅನೇಕ ಗಣ್ಯರು ಆಗಮಿಸಿ ಆರೋಗ್ಯ ವಿಚಾರಿಸಿದರು. ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ತೇಜಸ್ವಿಸೂರ್ಯ ಅವರು, ಜಿಮ್ ಹಾಗೂ ವಾಕಿಂಗ್ ಮಹತ್ವವನ್ನು ವಿಶ್ವೇಶ್ವರ ಭಟ್ ಅವರಿಂದಲೇ ನೋಡಿ ಕಲಿತು ನಾನು ಆರಂಭಿಸಿದೆ. ಕೇವಲ ಪತ್ರಿಕೋದ್ಯಮ, ಸಾಹಿತ್ಯ ಅಥವಾ ಅಂಕಣ ಅಭಿಮಾನಿಯಲ್ಲ. ಬದಲಿಗೆ ನಿಮ್ಮ ನಡೆ-ನುಡಿಯನ್ನು ನೋಡಿ ಕಲಿತಿದ್ದೇನೆ ಎಂದು ನೆನಪಿಸಿಕೊಂಡರು. ಮಾಜಿ ಸಿಎಂ ಯಡಿಯೂರಪ್ಪ ಅವರು, ಶೀಘ್ರವೇ ಚೇತರಿಸಿಕೊಳ್ಳುವಂತೆ ಹಾರೈಸಿದರು.

ಆಸ್ಪತ್ರೆ ಮುಂದಿರುವ ಅಭಿಮಾನಿ: ವಿಶ್ವೇಶ್ವರ ಭಟ್ ಆಸ್ಪತ್ರೆಗೆ ದಾಖಲಾದ ಸುದ್ದಿ ತಿಳಿಯುತ್ತಿದ್ದಂತೆ ಆಸ್ಪತ್ರೆಗೆ ಧಾವಿಸಿರುವ ಭಟ್ಟರ ಅಭಿಮಾನಿ ರವಿಕುಮಾರ್ ಅವರು, ಈವರೆಗೂ ಆಸ್ಪತ್ರೆ ಬಳಿಯೇ ಇದ್ದಾರೆ. ಭೇಟಿಯಾಗಿ ಆರೋಗ್ಯ ವಿಚಾರಿಸಿದರೂ, ಅಲ್ಲಿಯೇ ಉಳಿದುಕೊಂಡಿದ್ದಾರೆ. ಇನ್ನೂ ಅನೇಕರು, ಆಸ್ಪತ್ರೆಯೊಳಗೆ ಪ್ರವೇಶ ನೀಡುತ್ತಿಲ್ಲ ಎನ್ನುವುದು ಅರಿತಿದ್ದರೂ, ಆಸ್ಪತ್ರೆ ಮುಂಭಾಗ ಬಂದು ನಿಂತು ವಾಪಸಾಗುತ್ತಿದ್ದಾರೆ.

ಅಪರಾಧ ಚಟುವಟಿಕೆ ನಿಲ್ಲಿಸದಿದ್ದರೆ ಎಸ್‌ಪಿ ಮತ್ತು ಡಿಜಿ ನೇರ ಹೊಣೆ | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಮ್ಮೇಳನ, ಇಲಾಖೆ ಪರಿಶೀಲನಾ ಸಭೆ

ಪೊಲೀಸರಿಗೆ ದೂರದೃಷ್ಟಿ ಇರಬೇಕು: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೊಲೀಸರಿಗೆ ದೂರದೃಷ್ಟಿ ಇರಬೇಕು. ಪೊಲೀಸರ ನಡುವೆ ಸಮನ್ವಯತೆ ಇದ್ದಾಗ ಮಾತ್ರ ಅಪರಾಧಿಗಳನ್ನು ಮಟ್ಟಹಾಕಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ ಪಟ್ಟರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ 2024ರ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಪೊಲೀಸರ ಮಧ್ಯೆ ಸಮನ್ವಯದ ಕೊರತೆಯಿದೆ. ಪೊಲೀಸರಿಗೆ ದೂರದೃಷ್ಟಿ ಇರಬೇಕು. ಒಂದು ಮಾಹಿತಿ ಬಂದರೆ ಅದರ ಬಗ್ಗೆ ಫಾಲೋಅಪ್ ಕ್ರಮ ವಹಿಸಬೇಕು. ಹುಬ್ಬಳ್ಳಿಯಲ್ಲಿ ನೇಹಾ ಕೊಲೆಯ ನಂತರ ಆದ ಮತ್ತೊಂದು ಕೊಲೆ ಪ್ರಕರಣದಲ್ಲಿ ಆರೋಪಿ ಬೆದರಿಕೆ ಹಾಕಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದಾಗಲೇ ಕ್ರಮಕೈಗೊಂಡಿದ್ದರೆ ಕೊಲೆ ತಡೆಯಲು ಸಾಧ್ಯವಾಗುತ್ತಿತ್ತು ಎಂದರು.

ಮಾದಕವಸ್ತುಗಳ ದಂಧೆ ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ ಬೆಳಗಾವಿ ಮುಂತಾದೆಡೆ ಹೆಚ್ಚಾಗುತ್ತಿದೆ. ಮಕ್ಕಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಈ ವ್ಯವಹಾರದಲ್ಲಿ ಭಾಗಿಯಾಗಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಇ-ಬೀಟ್ ಎಂದರೇನು ಎಂದು ಬಹಳ ಪೊಲೀಸರಿಗೆ ತಿಳಿದಿಲ್ಲ. ಜನಸಂದಣಿ ಇರುವಲ್ಲಿ ಹಾಗೂ ನಿರ್ಜನ ಪ್ರದೇಶದಲ್ಲಿ ಇ - ಬೀಟ್ ಹೆಚ್ಚು ಮಾಡಲಾಗುವುದು. ಪೊಲೀಸರ ಹಾಜರಿ ಸಮವಸ್ತ್ರದಲ್ಲಿರಬೇಕು. ಆಗ ಜನರಲ್ಲಿ ಭಯ ಮೂಡುತ್ತದೆ. ಇದರಿಂದ ಅಪರಾಧಗಳನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಎಂದರು.

ಪೊಲೀಸರು ಕಾನೂನು ವ್ಯವಸ್ಥೆ ಸುಧಾರಿಸಬೇಕು: ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳಿಗೆ ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಬಾರದು. ಪೇದೆಗಳೊಂದಿಗೆ ಉನ್ನತ ಅಧಿಕಾರಿಗಳು ಕೂಡ ಸಂಚಾರ ನಿಯಂತ್ರಣ ಮಾಡಲು ಸೂಚಿಸಲಾಗಿದೆ. ಪೊಲೀಸರು ಕಾನೂನು ವ್ಯವಸ್ಥೆ ಸುಧಾರಿಸಬೇಕು ಎಂಬುದು ನಮ್ಮ ಉದ್ದೇಶ, ಇದಕ್ಕೆ ಪೊಲೀಸರು ಸಹಕರಿಸುತ್ತಾರೆ ಎಂಬ ನಂಬಿಕೆ, ವಿಶ್ವಾಸವಿದೆ. ಪೊಲೀಸರು ಮನಸ್ಸು ಮಾಡಿದರೆ ಅಪರಾಧಗಳನ್ನು ತಡೆಗಟ್ಟುವುದು ಅಸಾಧ್ಯವೇನಲ್ಲ. ಗುಪ್ತಚರ ಬಲಪಡಿಸಲು ಎಲ್ಲಾ ಪ್ರಯತ್ನ ಮಾಡಲಾಗುವುದು ಎಂದರು. ಕ್ಲಬ್, ಇಸ್ಪೀಟ್, ಬೆಟ್ಟಿಂಗ್, ಡ್ರಗ್ಸ್‌ಗಳನ್ನು ನಿಲ್ಲಿಸದಿದ್ದರೆ ಎಸ್‌ಪಿ ಮತ್ತು ಡಿಜಿ ಮಟ್ಟದ ಹಿರಿಯ ಅಧಿಕಾರಿಗಳನ್ನೇ ನೇರ ಹೊಣೆಮಾಡಿ ಕ್ರಮ ತೆಗೆದುಕೊಳ್ಳಲಾಗುವುದು. ಪ್ರತಿ ಠಾಣೆಗೆ ಹೋಗಿ ಪರಿಶೀಲನೆ ನಡೆಸಿ ಇವನ್ನೆಲ್ಲಾ ತಪ್ಪಿಸಬೇಕು, ರಿಯಲ್ ಎಸ್ಟೇಟ್ ಮಾಡುವವರೊಂದಿಗೆ ಶಾಮೀಲಾದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ಕೊಟ್ಟರು.

ಫೇಕ್‌ನ್ಯೂಸ್ ಬಿಸಿ ಮುಟ್ಟಿಸಿ : ಸಭೆಯಲ್ಲಿ ಮಾತನಾಡಿದ ಗೃಹಸಚಿವ ಡಾ.ಜಿ. ಪರಮೇಶ್ವರ್, ಸುಳ್ಳು ಸುದ್ದಿ ಹಬ್ಬಿಸುವುದು ಹಚ್ಚಾಗುತ್ತಿದೆ. ಸರ್ಕಾರ, ಸಿಎಂ, ಡಿಸಿಎಂ ವಿರುದ್ಧ ಅವಾಚ್ಯವಾಗಿ, ತಿರುಚಿದ ಹೇಳಿಕೆಗಳನ್ನು ಜಾಲತಾಣ ಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಸಾಮಾನ್ಯ ಜನರ ವಿರುದ್ಧವು ಆಗುತ್ತಿದೆ. ಅಂತವರನ್ನು ಕೂಡಲೇ ಪತ್ತೆಹಚ್ಚಿ, ಬಿಸಿ ಮುಟ್ಟಿಸುವ ಕೆಲಸವಾಗಬೇಕು. ಇಂತಹ ತಪ್ಪುಗಳನ್ನು ಮತ್ತೊಬ್ಬರು ಮಾಡಲು ಮುಂದಾಗಬಾರದು. ತ್ವರಿತಗತಿಯಲ್ಲಿ ಕಾನೂನು ಪ್ರಕಾರ ಕ್ರಮ ಜರುಗಿಸುವ ಕೆಲಸವಾಗಬೇಕು ಎಂದು ತಾಕೀತು ಮಾಡಿದರು.

ಕೊಲೆಗಾರರನ್ನು ತ್ವರಿತಗತಿಯಲ್ಲಿ ಹಿಡಿಯಲಾಗುತ್ತಿದೆ. ಇಂತಹ ಅಪರಾಧ ಚಟುವಟಿಕೆಗಳು ಮರುಕಳಿಸಬಾರದು. ಯಾವುದೇ ಕಾರಣಕ್ಕೂ ಠಾಣೆಗೆ ಬರುವ ಜನರ ದೂರುಗಳನ್ನು ನಿರ್ಲಕ್ಷಿಸಬಾರದು. ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಇದರಿಂದ ಮುಂದಾಗುವ ಅನಾಹುತ ತಪ್ಪಿಸಬಹುದು ಎಂದರು. ಸಾಮಾಜಿಕ, ಕೌಟುಂಬಿಕ, ಮಕ್ಕಳ, ಮಹಿಳೆಯರಿಗೆ ಸಂಬಂಧಿಸಿದ ಪ್ರಕರಣಗಳು ಬರುತ್ತವೆ. ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಜೊತೆಗೂಡಿ ಕೆಲಸ ಮಾಡಬೇಕು ಎಂದು ಸೂಚಿಸಿದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ 2024ರ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶ ಉದ್ಘಾಟಿಸಿ, ನೂತನ ತಂತ್ರಾಂಶಗಳನ್ನು ಬಿಡುಗಡೆಗೊಳಿಸಿದರು. ಈ ವೇಳೆ ಗೃಹ ಸಚಿವ ಜಿ.ಪರಮೇಶ್ವರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಗೃಹ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್, ಡಿಜಿ-ಐಜಿ ಡಾ.ಅಲೋಕ್‌ಮೋಹನ್, ಸರಕಾರದ ಕಾರ್ಯದರ್ಶಿ ಕೆ.ವಿ.ತ್ರಿಲೋಕ್‌ಚಂದ್ರ ಉಪಸ್ಥಿತರಿದ್ದರು.

ನೂತನ ಕ್ರಿಮಿನಲ್ ಕಾನೂನುಗಳ ಕೈಪಿಡಿ ಬಿಡುಗಡೆ

ಈ ವೇಳೆ ವಿವಿಧ ಕೈಪಿಡಿ ಆಪ್‌ಗಳನ್ನು ಬಿಡುಗಡೆಗೊಳಿಸಲಾಯಿತು. ವಿಧಿವಿಜ್ಞಾನ ಇಲಾಖೆಯಿಂದ ಸೀನ್ ಆಫ್ ಕ್ರೈಂ ಕೈಪಿಡಿ, ಹೊಯ್ಸಳ ವಾಹನಗಳ ರಿಯಲ್‌ಟೈಮ್ ಟ್ರ್ಯಾಕಿಂಗ್ ಪ್ರಾತ್ಯಕ್ಷಿಕೆ, ಸೇಫ್ ಕನೆಕ್ಟ್ ತಂತ್ರಾಂಶ ಬಿಡುಗಡೆ, ಆಡಿಯೊ-ವಿಡಿಯೊ ಸಂಪರ್ಕ ಮಾಡುವ ಟೆಕ್ನಾಲಜಿ, ಡಿಜಿಟಲ್ ಅರೆಸ್ಟ್ ಸ್ಕ್ಯಾಮ್ ತನಿಖಾ ಕೈಪಿಡಿ, ಆನ್‌ಲೈನ್ ವಂಚನೆ ಪ್ರಕರಣಗಳ ತನಿಖೆ ಮಾಡುವ ಕೈಪಿಡಿ ಹಾಗೂ ತೊಂದರೆ ಯಲ್ಲಿರುವ ವ್ಯಕ್ತಿ ಕಮಾಂಡ್ ಸೆಂಟರ್ ಸಿಬ್ಬಂದಿ ಯೊಂದಿಗೆ ಸಂಪರ್ಕಿಸುವ ತಂತ್ರಜ್ಞಾನವನ್ನು ಬಿಡುಗಡೆ ಮಾಡಲಾಯಿತು. ಹೊಸದಾಗಿ ಜಾರಿಗೆ ಬಂದಿರುವ ಮೂರು ಕ್ರಿಮಿನಲ್ ಕಾನೂನುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒಂದೇ ಸ್ಥಳದಲ್ಲಿ ಸಮಗ್ರ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಲು ಮೊಬೈಲ್ ಅಪ್ಲಿಕೇಷನ್ ಸಂಚಯವನ್ನು ಅಭಿವೃದ್ಧಿ ಪಡಿಸಿದೆ. ಈ ಅಪ್ಲಿಕೇಶನ್ ಹೊಸ ಕ್ರಿಮಿನಲ್ ಕಾನೂನುಗಳಾದ ಭಾರತೀಯ ನ್ಯಾಯಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯಾ ಅಧಿನಿಯಮಗಳ ಸಂಕಲನವಾಗಿದೆ.

ಸಮಾಚಾರ ಸಣ್ಣದಲ್ಲ

ನಗರಪಾಲಿಕೆ ಅಧಿಕಾರಿ ಲೋಕಾಯುಕ್ತ ಬಲೆಗೆ

ಬಳ್ಳಾರಿ: ಬಳ್ಳಾರಿ ಪಾಲಿಕೆ ಅಧಿಕಾರಿಗಳ ಮೇಲೆ ಲೋಕಾಯುಕ್ತ ಪೊಲೀಸರ ದಾಳಿಯಾಗಿದ್ದು, ಲಂಚದ ಆರೋಪದ ಮೇಲೆ ಹಲವರನ್ನು ವಶಕ್ಕೆ ಪಡೆಯಲಾಗಿದೆ. ಲೇಔಟ್ ನಿರ್ಮಾಣಕ್ಕೆ ಅನುಮತಿ ನೀಡಲು 14 ಲಕ್ಷ ರು. ಕೊಡುವಂತೆ ಪಾಲಿಕೆ ಇಂಜಿನಿಯರ್ ಮಹಾದೇವ, ಜೆಇ ವಿರುಪಾಕ್ಷ ಹಾಗೂ ಕೇಸ್ ವರ್ಕರ್ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಪ್ರಕಾಶರಾವ್ ಎನ್ನುವವರು ವಿರುದ್ಧ ದೂರು ನೀಡಿದ್ದರು. ದೂರಿನ ಜೊತೆ ಅಧಿಕಾರಿಗಳು ಬೇಡಿಕೆ ಇಟ್ಟಿದ್ದ ಧ್ವನಿ ಮುದ್ರಿಕೆಯ ಲೋಕಾಯುಕ್ತ ಪೊಲೀಸರಿಗೆ ನೀಡಿದ್ದರು. ಈ ದೂರಿನ ಹಿನ್ನೆಲೆ ಪಾಲಿಕೆ ಕಚೇರಿಗೆ ದಾಳಿ ಮಾಡಿ ಅಧಿಕಾಗಳನ್ನು ವಶಕ್ಕೆ ಪಡೆದು ಲೋಕಾಯುಕ್ತ ಪೊಲೀರು ವಿಚಾರಣೆ ನಡೆಸಿದ್ದಾರೆ.

2ಎ ಮೀಸಲಾತಿಗೆ 2ನೇ ಹಂತದ ಹೋರಾಟ

ಹುಬ್ಬಳ್ಳಿ: ಮುಂಗಾರು ಅಧಿವೇಶನದಲ್ಲಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹಾಗೂ ಲಿಂಗಾಯತ ಉಪ ಸಮಾಜಗಳಿಗೆ ಕೇಂದ್ರ ಸರಕಾರದ ಒಬಿಸಿ ಮೀಸಲಾತಿ ನೀಡುವಂತೆ ಶಿಫಾರಸಿಗೆ ಒತ್ತಾಯಿಸಿ ಪಂಚಮಸಾಲಿ ಸಮಾಜದ ಪ್ರಮುಖರು ಶಾಸಕರಿಗೆ ಹಕ್ಕೊತ್ತಾಯ ಪತ್ರ ಸಲ್ಲಿಸಿದರು. ಶನಿವಾರ ಕುಂದಗೋಳ ಶಾಸಕ ಎಂ.ಆರ್. ಪಾಟೀಲ ಅವರಿಗೆ ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹಕ್ಕೊತ್ತಾಯ ಪತ್ರ ಸಲ್ಲಿಸಲಾಯಿತು. ಮುಂಬರುವ ಅಧಿವೇಶನದಲ್ಲಿ ಸಮಾಜದ ಶಾಸಕರು ಧ್ವನಿ ಎತ್ತಬೇಕು ಎಂದು ಮನವಿ ಮಾಡಿದರು. ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ಕಾಂಗ್ರೆಸ್ ಸರಕಾರ ಬಂದ ನಂತರ ಹಿಂದಿನ ಬಿಜೆಪಿ ಆಡಳಿತ ನೀಡಿದ್ದ 2ಎ ಮೀಸಲಾತಿ ಕೂಡ ಅನುಷ್ಠಾನಕ್ಕೆ ಬಂದಿಲ್ಲ. ಇಷ್ಟೆಲ್ಲಾ ಹೋರಾಟ ಮಾಡಿದರೂ ಬೇಡಿಕೆ ಈಡೇರಿಲ್ಲ. ಹೀಗಾಗಿ ಎರಡನೇ ಹಂತದ ಹೋರಾಟ ಆರಂಭಿಸಲಾಗಿದೆ. ವಿಧಾನಸಭೆ ಮುತ್ತಿಗೆ ಸಂದರ್ಭದಲ್ಲಿ ಒಂದು ತಿಂಗಳ ಗಡುವು ಕೊಟ್ಟಿದ್ದನ್ನು ಸಿಎಂ ಮರೆತಿದ್ದಾರೆ. ಸರಕಾರ ಈ ಅಧಿವೇಶನದಲ್ಲಿ ಸ್ಪಂದಿಸದಿದ್ದರೆ ಬೆಳಗಾವಿ ಸುವರ್ಣಸೌಧದಲ್ಲಿ ನಡೆಯುವ ಅಧಿವೇಶನಕ್ಕೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ಕೊಟ್ಟರು.

ಮಾರಕಾಸ್ತ್ರ: ಹುಬ್ಬಳ್ಳಿ ಯುವಕನ ಬಂಧನ

ಹುಬ್ಬಳ್ಳಿ: ಅಮರಗೋಳ ಎಪಿಎಂಸಿ ಯಾರ್ಡ್‌ನಲ್ಲಿ ಟಾಟಾ ಇಂಟ್ರಾ ಗೂಡ್ಸ್ ವಾಹನದಲ್ಲಿ ಮಾರಕಾಸ್ತ್ರ ಇಟ್ಟುಕೊಂಡು ಸಂಚರಿಸುತ್ತಿದ್ದ ಯುವಕನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ರಾಯಾಪುರದ ತಿಪ್ಪಣ್ಣ ಶಿಶನಳ್ಳಿ (25) ಬಂಧಿತ. ಖಚಿತ ಮಾಹಿತಿ ಮೇರೆಗೆ ಎಪಿಎಂಸಿ ನವನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕೆ. ಸಮೀವುಲ್ಲಾ ನೇತೃತ್ವದ ತಂಡ ದಾಳಿ ನಡೆಸಿ, ಪರಿಶೀಲನೆ ವೇಳೆ ವಾಹನದಲ್ಲಿ ತಲ್ವಾರ್ ಕಂಡುಬಂದಿದೆ. ಮಾರಕಾಸ್ತ್ರವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮಹದಾಯಿ ಯೋಜನೆಗೆ ಗೋವಾ ಸರಕಾರ ಮತ್ತೆ ತಗಾದೆ | ಕಣಕುಂಬಿಯಲ್ಲಿ ಸ್ಥಳ ಪರಿಶೀಲನೆ

ಮಹದಾಯಿ: ಇಂದು ಕೇಂದ್ರ ತಂಡ ಭೇಟಿ

ಬೆಳಗಾವಿ: ಕರ್ನಾಟಕ, ಗೋವಾ, ಮಹಾರಾಷ್ಟ್ರ ಮಧ್ಯೆ ಇರುವ ಜಲವಿವಾದ ಇದೀಗ ಮತ್ತೆ ಶುರುವಾಗಿದೆ. ಮಹದಾಯಿ ಯೋಜನೆಗೆ ಗೋವಾ ಸರಕಾರ ಮತ್ತೆ ತಗಾದೆ ಆರಂಭಿಸಿದೆ. ಹೀಗಾಗಿ ಯೋಜನೆ ಸಂಬಂಧ ಕೇಂದ್ರದ ಮೇಲೆ ಗೋವಾ ಸಿಎಂ ಒತ್ತಡ ಹಾಕಿದ್ದಾರೆ. ಇದರಿಂದಾಗಿ ಕೇಂದ್ರದ ಮಹದಾಯಿ ಪ್ರವಾಹ್ ತಂಡ ಕಣಕುಂಬಿಗೆ ಭೇಟಿ ಕೊಡುತ್ತಿದೆ ಎಂದು ಸಿಎಂ ಪ್ರಮೋದ್ ಸಾವಂತ್ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ಹಾಕಿದ್ದಾರೆ.

ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ಕಣಕುಂಬಿಯ ಮಹದಾಯಿ ಜಲಾನಯನ ಪ್ರದೇಶಕ್ಕೆ ಕೇಂದ್ರದ ಅಧಿಕಾರಿಗಳ ತಂಡ ಭಾನುವಾರ ಭೇಟಿ ನೀಡಲಿದೆ. ಸದ್ಯದ ವಸ್ತು ಸ್ಥಿತಿ, ನೀರು ಹರಿದು ಎಲ್ಲಿಗೆ ಹೋಗುತ್ತಿದೆ ಎಂದು ಪರಿಶೀಲನೆ ಮಾಡಲಿದ್ದಾರೆ. ಮಹದಾಯಿ ಯೋಜನೆ ಅನುಷ್ಠಾನಕ್ಕಾಗಿ ಸಿಎಂ ಸಿದ್ದರಾಮಯ್ಯ, ಸಚಿವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದ್ದರು. ಶೀಘ್ರವೇ ಪರಿಸರ ಇಲಾಖೆಯಿಂದ ಅನುಮತಿ ಕೊಡಿಸುವಂತೆ ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಕೇಂದ್ರದಿಂದ ಮಹದಾಯಿ ಪ್ರವಾಹ ತಂಡ ಭೇಟಿ ಕೊಡುತ್ತಿರುವುದು ಗಮನಾರ್ಹ. ಸೋಮವಾರ ಬೆಂಗಳೂರಿನಲ್ಲಿ ಕೆಎನ್‌ಎಲ್ಎಲ್ ಅಧಿಕಾರಿಗಳ ಜೊತೆಗೆ ಸಭೆ ನಡೆಸಲಿದೆ. ಆ ಬಳಿಕ ತನ್ನದೇ ವರದಿಯನ್ನು ಕೇಂದ್ರ ಸರ್ಕಾರಕ್ಕೆ ತಂಡ ಸಲ್ಲಿಕೆ ಮಾಡಲಿದೆ. ಆ ಮೂಲಕ ಕರ್ನಾಟಕಕ್ಕೆ ಪರಿಸರ ಇಲಾಖೆ ಅನುಮತಿ ಸಿಗದಂತೆ ತಡೆಯಲು ಗೋವಾ ಹುನ್ನಾರ ನಡೆಸಿದೆ ಎನ್ನಲಾಗುತ್ತಿದೆ. ಪಶ್ಚಿಮಘಟ್ಟ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಕಳಸಾ, ಬಂಡೂರಿ ನಾಲೆ ತುಂಬಿ ಹರಿಯುತ್ತಿದೆ. 2018 ರಲ್ಲಿಯೇ ಮಹದಾಯಿ ನ್ಯಾಯಾಧೀಕರಣದಿಂದ ತೀರ್ಪು ನೀಡಲಾಗಿದೆ. ಕರ್ನಾಟಕಕ್ಕೆ 13 ಟಿಎಂಸಿ ನೀರು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಕಳಸಾ ದಿಂದ 1.72 ಟಿಎಂಸಿ, ಬಂಡೂರಿ ಯಿಂದ 2.18 ಟಿಎಂಸಿ ನೀರು ಹಂಚಿಕೆ ಮಾಡಲಾಗಿತ್ತು.

ಮಹದಾಯಿ ಸಮಿತಿ ಭೇಟಿಗೆ ಬೇರೆ ಅರ್ಥಬೇಡ

ಹುಬ್ಬಳ್ಳಿ: ಮಹದಾಯಿ ಪ್ರವಾಹ್ ಸಮಿತಿ ಭೇಟಿ ಬಗ್ಗೆ ಬೇರೆ ಅರ್ಥ ಕೊಡಬಾರದು. ನ್ಯಾಯಾಧೀಕರಣದ ಆದೇಶದ ನಂತರ ಯೋಜನೆಗೆ ಸಮಿತಿಯನ್ನು ನೇಮಕ ಮಾಡಲಾಗುತ್ತದೆ. ಅದೇ ರೀತಿ ಮಹದಾಯಿ ಯೋಜನೆಗೂ ಸಮಿತಿ ನೇಮಿಸಲಾಗಿದೆ ವಿನಾ ಗೋವಾ ಸಿಎಂ ಮನವಿ ಮೇರೆಗೆ ಈ ಸಮಿತಿ ಬರುತ್ತಿಲ್ಲ ಎಂದು ಪ್ರಹ್ಲಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹದಾಯಿ ಪ್ರವಾಹ್ ಸಮಿತಿ ಯೋಜನಾ ಪ್ರದೇಶಕ್ಕೆ ಭೇಟಿ ನೀಡಲಿದೆ. ಮಹದಾಯಿ ವ್ಯಾಪ್ತಿಯಲ್ಲಿ ಏನೆಲ್ಲಾ ಚಟುವಟಿಕೆ ನಡೆದಿವೆ ಅನ್ನೋದರ ಅಧ್ಯಯನ ಮಾಡುತ್ತದೆ. ಹಾಗೆಂದು ಈ ಸಮಿತಿ ಕೇಂದ್ರಕ್ಕೆ ವರದಿ ನೀಡುವುದಿಲ್ಲ, ಗೋವಾ ಮುಖ್ಯ ಮಂತ್ರಿ ಮನವಿ ಮೇರೆಗೆ ಈ ಸಮಿತಿ ಬರುತ್ತಿಲ್ಲ. ಇದೊಂದು ಸಹಜ ಪ್ರಕ್ರಿಯೆ ಭಾಗವಾಗಿ ಈ ಸಮಿತಿ ಭೇಟಿ ಕೊಡುತ್ತಿದೆ ಎಂದರು.

ಟೈಗರ್ ಕಾರಿಡಾರ್‌ಗೆ ಅನುಮತಿ ಸಿಕ್ಕರೆ ಮಹದಾಯಿ ಕಾಮಗಾರಿ: ಈಗಾಗಲೇ ಮಹದಾಯಿ ಯೋಜನೆಯ ಡಿಪಿಎಆರ್‌ಗೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದೆ. 52 ಹೆಕ್ಟೇರ್ ಪ್ರದೇಶದ ದಟ್ಟ ಅರಣ್ಯದಲ್ಲಿ ಯೋಜನೆ ಕೈಗೊಳ್ಳಲು ಅನುಮತಿ ಬೇಕಿದೆ. ಟೈಗರ್ ಕಾರಿಡಾರ್‌ನಲ್ಲಿ ಅನುಮತಿ ಅಗತ್ಯವಿದೆ. ವನ್ಯಜೀವಿ ಮಂಡಳಿ ಅನುಮತಿ ಸಿಕ್ಕರೆ ಯೋಜನೆ ಕಾಮಗಾರಿ ಆರಂಭವಾಗುತ್ತದೆ. ಪ್ರವಾಹ ಸಮಿತಿ ಭೇಟಿಯಿಂದ ಕರ್ನಾಟಕಕ್ಕೆ ಯಾವುದೇ ರೀತಿಯ ಧಕ್ಕೆಯಿಲ್ಲ. ಈಗಾಗಲೇ ಕೇಂದ್ರ ಕೊಟ್ಟಿರುವ ಡಿಪಿಎಆರ್ ಅನುಮತಿಗೂ ತೊಂದರೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಡಾ ಹಗರಣ ಸಿಬಿಐಗೆ ವಹಿಸಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣ ವನ್ನು ಸಿಬಿಐಗೆ ವಹಿಸಿದರೆ ಮಾತ್ರ ನಿಷ್ಪಕ್ಷಪಾತ ತನಿಖೆ ಸಾಧ್ಯ. ಇದು ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ಅವರ ಪುತ್ರನ ಹಗರಣ ವಾಗಿದೆ. ತರಾತುರಿಯಲ್ಲಿ ಜಿಲ್ಲಾಧಿಕಾರಿ ಅವರನ್ನು ವರ್ಗಾವಣೆ ಮಾಡಿರುವುದು ಭ್ರಷ್ಟಾಚಾರದಲ್ಲಿ ತಾವು ಭಾಗಿ ಎಂಬುದನ್ನು ಸಾಬೀತುಪಡಿಸಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಆರೋಪಿಸಿದರು.

ಮುಡಾದಲ್ಲಿ ಬಹುದೊಡ್ಡ ಭ್ರಷ್ಟಾಚಾರವಾಗಿದೆ. 2014 ರಿಂದ 2018ರಲ್ಲಿ ಇದರ ಪ್ರಮುಖ ಬೆಳವಣಿಗೆ ನಡೆದಿದೆ. ಸಿಎಂ ಸಿದ್ದರಾಮಯ್ಯ ಮತ್ತು ಅವರ ಪುತ್ರನ ಅನುಮತಿಯಿಲ್ಲದೆ ಇದು ನಡೆಯಲು ಸಾಧ್ಯವಿಲ್ಲ. ಸ್ವಂತ ಲಾಭ ಮಾಡಿಕೊಳ್ಳಲು ದೊಡ್ಡಪ್ರಮಾಣದಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ. ಏನೂ ಮಾಡಿಲ್ಲ ಅಂದರೆ ತರಾತುರಿಯಲ್ಲಿ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಿದ್ದು ಏಕೆ ಎಂದು ಪ್ರಶ್ನಿಸಿದರು.

ಕಾರು ಅಪಘಾತ ಮೂವರ ಸಾವು

ಶಿವಮೊಗ್ಗ: ತಾಲ್ಲೂಕಿನ ಮುದ್ದಿನಕೊಪ್ಪ ಟ್ರೀ ಪಾರ್ಕ್ ಬಳಿ ಶನಿವಾರ ಎರಡು ಕಾರುಗಳ ನಡುವೆ ಭೀಕರ ಡಿಕ್ಕಿಯಾಗಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬರ ಸ್ಥಿತಿ ಗಂಭೀರವಾಗಿದ್ದು, ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಹೊಸ ದೊಡ್ಡೇರಿ ಗ್ರಾಮದ ಇಮಾಮ್ ಸಾಬ್, ಚಂದ್ರಶೇಖರ ಹಾಗೂ ಸಿದ್ದಪ್ಪ ಮೃತಪಟ್ಟವರು.

ಆಯನೂರಿನಿಂದ ಶಿವಮೊಗ್ಗದತ್ತ ಬರುತ್ತಿದ್ದ ಸ್ವಿಫ್ಟ್ ಕಾರು ಶಿವಮೊಗ್ಗದ ಕಿಮ್ಮನೆ ಗಾಲ್ಫ್ ರೆಸಾರ್ಟ್‌ನಿಂದ ಜೋಗದತ್ತ ತೆರಳುತ್ತಿದ್ದ ಇನ್ನೋವಾ ನಡುವೆ ಡಿಕ್ಕಿ ಸಂಭವಿಸಿದೆ. ಮೃತಪಟ್ಟ ಮೂವರೂ ಸ್ವಿಫ್ಟ್ ಕಾರಿನ ಪ್ರಯಾಣಿಕರು. ಇನ್ನೋವಾ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವಿದೇಶಿಯರು ಸೇರಿದಂತೆ ಐವರಿಗೆ ಗಾಯಗಳಾಗಿವೆ. ಪಘಾತದಿಂದ ಕಾರುಗಳು ನುಜ್ಜುಗುಜ್ಜಾಗಿದೆ.

ಅಂತ್ಯಕ್ರಿಯೆ ವೇಳೆ ಹೆಜ್ಜೇನು ದಾಳಿ: 19 ಮಂದಿ ಆಸ್ಪತ್ರೆಗೆ

ಗುಂಡ್ಲುಪೇಟೆ: ಅಂತ್ಯಕ್ರಿಯೆಗೆ ತೆರಳಿದ ವೇಳೆ ಹೆಜ್ಜೇನು ದಾಳಿ ನಡೆಸಿ 42 ಮಂದಿಗೆ ಕಚ್ಚಿದ್ದು, ಈ ಪೈಕಿ 19 ಮಂದಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ತಾಲೂಕಿನ ಬಸವಾಪುರ ಗ್ರಾಮದಲ್ಲಿ ನಡೆದಿದೆ. ಬಸವಾಪುರ ಗ್ರಾಮದ ವೃದ್ಧರೊಬ್ಬರು ನಿಧನ ಹೊಂದಿದ ಹಿನ್ನೆಲೆ ಅಂತ್ಯಕ್ರಿಯೆ ನಡೆಸಲು ಸ್ಮಶಾನಕ್ಕೆ ಮೃತದೇಹವನ್ನು ಗ್ರಾಮಸ್ಥರು ಕೊಂಡೊಯ್ದಿದ್ದಾರೆ. ಚಿತೆಗೆ ಬೆಂಕಿ ಹಚ್ಚುವ ವೇಳೆ ಹೊಗೆ ಎದ್ದ ಪರಿಣಾಮ ಮರದಲ್ಲಿದ್ದ ಹೆಜ್ಜೇನುಗಳು ಮೇಲೆದ್ದು, ಶವ ಸಂಸ್ಕಾರಕ್ಕೆ ತೆರಳಿದ ಸುಮಾರು 42 ಮಂದಿಗೆ ಕಚ್ಚಿದೆ.

{ ಎನ್. ಚಲುವರಾಯಸ್ವಾಮಿ } ಸಚಿವರು

ಸಾಮಾನ್ಯವಾಗಿ ಪ್ರತಿವರ್ಷ ಕೆಆರ್‌ಎಸ್ ಅಣೆಕಟ್ಟಿನಿಂದ ಜುಲೈ ಎರಡನೇ ವಾರದಲ್ಲಿ ವಿ.ಸಿ ನಾಲೆಗೆ ನೀರು ಹರಿಸಲಾಗುತ್ತಿತ್ತು. ಆದರೆ ಈ ಬಾರಿ ಮಾರ್ಚ್‌ನಲ್ಲಿ ನೀರು ಹರಿಸದ ಕಾರಣ ಜುಲೈ 8 ರಿಂದ 15 ದಿನಗಳ ಕಾಲ ವಿ.ಸಿ ನಾಲೆಗೆ ನೀರು ಹರಿಸಲಾಗುವುದು. ಈಗ ಕೆರೆಕಟ್ಟೆ ತುಂಬಿಸಲು ಹಾಗೂ ಜಾನುವಾರುಗಳಿಗಾಗಿ ಮಾತ್ರ ನಾಲೆಗೆ ನೀರು ಬಿಡಲು ನಿರ್ಧರಿಸಲಾಗಿದೆ.

ಬೇರೆ ವಿಚಾರದ ಬಗ್ಗೆ ಕೇಳಿ: ನಾನು ಪಕ್ಷದ ಶಿಸ್ತಿನ ಸಿಪಾಯಿ

ಡಿಸಿಎಂ ವಿಚಾರ: ಪ್ರತಿಕ್ರಿಯೆಗೆ ಹೆಬ್ಬಾಳ್ಕರ್ ನಕಾರ

ಬಳ್ಳಾರಿ: ಸಿಎಂ ಬದಲಾವಣೆ ಮತ್ತು ಹೆಚ್ಚುವರಿ ಡಿಸಿಎಂ ಚರ್ಚೆಯಲ್ಲಿ ನಾನಿಲ್ಲ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಶನಿವಾರ ಹೇಳಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಒಂದು ಶಿಸ್ತಿನ ಪಕ್ಷ, ನಾನು ಶಿಸ್ತಿನ ಸಿಪಾಯಿ. ಸಿಎಂ ಬದಲಾವಣೆ ಮತ್ತು ಹೆಚ್ಚುವರಿ ಡಿಸಿಎಂ ಚರ್ಚೆ ವಿಚಾರ ಬಿಟ್ಟು ಬೇರೆ ವಿಚಾರ ಕೇಳಿ ಎಂದು ಜಾರಿಕೊಂಡರು.

ಅಂಗನವಾಡಿ ಹೆಸರು ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿ ಹೆಸರು ಬದಲಾಯಿಸಲು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಅಂಗನವಾಡಿ ಕೇಂದ್ರ ಮೇಲ್ದರ್ಜೆಗೇರಿಸುವ ಮೂಲಕ ಹೆಸರು ಬದಲಾವಣೆ ಮಾಡುತ್ತೇವೆ. ಅಂಗನವಾಡಿಗಳಲ್ಲಿ ಡಿಗ್ರಿಯಾದವರು, ಮಾಸ್ಟರ್ ಡಿಗ್ರಿ ಆದವರು ಇದ್ದಾರೆ. ಸರಕಾರಿ ಮಾಂಟೇಸೊರಿ ಮಾಡಬೇಕು ಎಂದು ತೀರ್ಮಾನಿಸಲಾಗಿದ್ದು, ಸಿಎಂ ಕೂಡ ಬಹಳಷ್ಟು ಸಹಕಾರ ನೀಡುತ್ತಿದ್ದಾರೆ ಎಂದು ಸಚಿವೆ ಹೆಬ್ಬಾಳ್ಕರ್ ತಿಳಿಸಿದರು.

ಡಿಬಿಟಿ ಮೂಲಕ ಗೃಹಲಕ್ಷ್ಮಿ ಹಣ

ಚುನಾವಣೆ ಬಳಿಕ ಗೃಹಲಕ್ಷ್ಮೀ ಹಣ ಬಾರದಿರುವ ಬಗ್ಗೆ ಕೇಳಿದಾಗ, ಮೇ 5ನೇ ತಾರೀಖು ಕೊನೆಯದಾಗಿ ಗೃಹಲಕ್ಷ್ಮಿ ಹಣ ಹಾಕಲಾಗಿದೆ. ಜೂನ್ , ಜುಲೈ ಮಾತ್ರ ಗೃಹಲಕ್ಷ್ಮಿ ಹಣ ಬಂದಿಲ್ಲ. ಅದರೆ ಎಸ್‌ಸಿ-ಎಸ್‌ಟಿಗಳಿಗೆ ಬಂದಿದೆ. ಉಳಿದವರಿಗೆ ಶೀಘ್ರ ಡಿಬಿಟಿ ಮೂಲಕ ಅದನ್ನು ಹಾಕುತ್ತೇವೆ ಎಂದರು.

ಹಗರಣ ಮುಚ್ಚಿಕೊಳ್ಳಲು ತಂತ್ರ: ಸಚಿವ ಚಲುವರಾಯಸ್ವಾಮಿ

ಬಿಜೆಪಿಯಿಂದ ಸಿಎಂ ಹೆಸರು ದುರ್ಬಳಕೆ

ಮಂಡ್ಯ: ಬಿಜೆಪಿ ಸರ್ಕಾರದಲ್ಲಿ ಗೋಲ್‌ಮಾಲ್ ನಡೆದಿತ್ತು. ಬಿಜೆಪಿ ಸರ್ಕಾರವೇ ಜಾಗ ಕೊಟ್ಟಿತ್ತು. ಇದನ್ನು ಮುಚ್ಚಿಕೊಳ್ಳಲು ಮೈಸೂರಿನ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಹೆಸರನ್ನು ಎಳೆದುತಂದಿದ್ದಾರೆ. ಡಿ.ಕೆ.ಶಿವಕುಮಾರ್ ಅವರಿಗೆ ಸಂಚು ಮಾಡಿ ಡಿಸಿಎಂ ಆಗುವ ಅವಶ್ಯಕತೆಯಿಲ್ಲ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟವಾಗಿ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಡಾ ಪ್ರಕರಣದ ಬಗ್ಗೆ ಮಾತನಾಡುವ ಎಚ್.ಡಿ. ಕುಮಾರಸ್ವಾಮಿ ತಮ್ಮ ಬೆನ್ನನ್ನು ತಿರುಗಿ ನೋಡಿಕೊಳ್ಳಬೇಕು. ಜಿಲ್ಲೆ ಮತ್ತು ರಾಜ್ಯದ ಅಭಿವೃದ್ಧಿಯತ್ತ ಗಮನಹರಿಸಲಿ ಎಂದು ತಿರುಗೇಟು ನೀಡಿದರು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಪ್ರಧಾನಿ, ಸಂಸದರು, ಕೇಂದ್ರ ಸಚಿವರ ಬಗ್ಗೆ ಲಘುವಾಗಿ ಮಾತನಾಡಿದ್ದರು. ಅವರು ಯಾರು ನಮಗೆ ಹೇಳೋಕೆ ಎಂಬಂತೆ ವರ್ತಿಸಿದ್ದರು. ಎರಡು ಬಾರಿ ಸಿ.ಎಂ ಆಗಿರುವ ಕುಮಾರಸ್ವಾಮಿಗೆ ಕಾನೂನು ಜ್ಞಾನ ಇಲ್ಲವೇ ಅಂತ ನಾನು ಕೇಳೋಕೆ ಹೋಗಲ್ಲ. ಅವರನ್ನು ನೋಯಿಸುವ ಉದ್ದೇಶ ನನಗಿಲ್ಲ.
-ಚಲುವರಾಯಸ್ವಾಮಿ, ಕೃಷಿ ಸಚಿವ

ಜನತಾದರ್ಶನ: ಎಚ್‌ಡಿಕೆ ಆರೋಪಕ್ಕೆ ಮಾರುತ್ತರ: ಸರ್ಕಾರದ ಜನಸಂಪರ್ಕ ಸಭೆಗಳಿಂದ ಜನರಿಗೆ ಪ್ರಯೋಜನವಾಗುತ್ತಿಲ್ಲ ಎಂಬ ಎಚ್.ಡಿ.ಕೆ ಆರೋಪಕ್ಕೆ ಪ್ರತಿಕ್ರಿಯಿಸಿ, ಕುಮಾರ ಸ್ವಾಮಿಯವರ ಜನತಾ ದರ್ಶನಕ್ಕೆ ಜನರನ್ನು ಲಾರಿ ಮತ್ತು ಟ್ರ್ಯಾಕ್ಟರ್‌ನಲ್ಲಿ ಕರೆದುಕೊಂಡು ಬಂದರೋ ಗೊತ್ತಿಲ್ಲ ಎಂದರು.

ಜೀವನದಲ್ಲಿ ಸಿಕ್ಕಿಲ್ಲ ಅನ್ನೋಕ್ಕಿಂತ, ಪಡೆಯಬಲ್ಲೆ ಎಂಬ ವಿಶ್ವಾಸ ಮುಖ್ಯ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಒಂದೊಂದು ಜನ್ಮದಿನಾಚರಣೆ ಬಂದಾಗಲೂ ವಯಸ್ಸಿಗೆ ಇನ್ನೊಂದು ವರ್ಷ ಸೇರಿಸಲ್ಪಡುತ್ತದೆ!

ಆದರೆ ವರ್ಷ ಹೆಚ್ಚಾಗುವುದು ದೇಹಕ್ಕೆ, ಮನಸ್ಸಿಗಲ್ಲ; ಡೇಟ್ ಆಫ್ ಬರ್ತ್‌ನ ಸರ್ಟಿಫಿಕೇಟ್‌ಗೇ ಹೊರತು ಹುರುಪು, ಲವಲವಿಕೆಗಲ್ಲ. ಆದರೂ ಒಪ್ಪಿಕೊಳ್ಳಲೇಬೇಕಲ್ಲ? ಅದು ಹಾಗಿರಲಿ, ನಮಗೆ ಐವತ್ತೂ ಚಿಲ್ಲರೆ ವರ್ಷವಾಯಿತು ಎಂಬುದಕ್ಕಿಂತ ಈ ವರ್ಷಗಳಲ್ಲಿ ಏನು ಮಾಡಿದೆವು ಎಂಬುದು ಮುಖ್ಯ. ಕಳೆದುಹೋದ ದಿನಗಳನ್ನು ನೆನಪಿಸಿಕೊಂಡರೆ ಏನೆಲ್ಲ ಮಾಡಬಹುದಿತ್ತು ಎಂಬ ವಿಷಾದವೂ ಉಂಟಾಗುತ್ತದೆ. ಅದು ಯಾವತ್ತೂ ಇದ್ದಿದ್ದೇ.

ಆದರೆ ಜೀವನ ಮಾತ್ರ ಅದ್ಭುತ. ಅದು ಪ್ರತಿ ಕ್ಷಣವೂ ಹೊಸ ಹೊಸ ಅನುಭವವನ್ನು ಮಾಡಿಸುತ್ತಾ ಹೋಗುತ್ತದೆ. ಎಂಥ ಬುದ್ಧಿವಂತನನ್ನೂ ಪೆಕರನನ್ನಾಗಿ ಮಾಡುತ್ತದೆ. ಮಹಾದಡ್ಡನೂ ಮೇಧಾವಿಯಂತೆ ಕಾಣಿಸಿಕೊಳ್ಳುತ್ತಾನೆ. ಅಪಾತ್ರನೂ ಪ್ರೀತಿ ಪಾತ್ರನಾಗುತ್ತಾನೆ. ಎಲ್ಲ ಬುದ್ಧಿವಂತರನ್ನು ಅಯೋಗ್ಯನಾದವನು ಆಳುತ್ತಾನೆ. ಸಾಮಾನ್ಯರಲ್ಲಿ ಸಾಮಾನ್ಯನೂ ಅಸಾಮಾನ್ಯ ಎತ್ತರಕ್ಕೆ ಏರುತ್ತಾನೆ. ಶ್ರೀಮಂತನಾದವನು ಹೇಳ ಹೆಸರಿಲ್ಲದಂತಾಗುತ್ತಾನೆ. ದಟ್ಟದರಿದ್ರನು ಧನವಂತನಾಗುತ್ತಾನೆ. ನಮ್ಮ ಮುಂದೆ ಹಿಮಾಲಯದೆತ್ತರಕ್ಕೆ ಏರಿದವರು ತಿಪ್ಪೆ ಗುಂಡಿಗೆ ಬಿದ್ದಿರುತ್ತಾರೆ. ಜೀವನ ನಮ್ಮನ್ನು ಎಲ್ಲೆಡೆಗೂ ಕೈಹಿಡಿದು ಕರೆದುಕೊಂಡು ಹೋಗುತ್ತದೆ. ನಡುನೀರಿನಲ್ಲಿ ಕೈಬಿಡುತ್ತದೆ. ಮುಳುಗುತ್ತಿರುವವರನ್ನು ಕೈ ಹಿಡಿದು ಎತ್ತುತ್ತದೆ.

ಈ ಎಲ್ಲವುಗಳ ಮಧ್ಯೆ, ನಾವು ಮಾಡಬಹುದಾದದ್ದು ಏನು? ಸ್ಟೀವ್ ಜಾಬ್ಸ್ ಹೇಳಿದಂತೆ The Only Way to do great work is to love what you do. ಅಷ್ಟೆ. ಇದಕ್ಕಿಂತ ದೊಡ್ಡ ಕರ್ಮಸಿದ್ಧಾಂತವಾಗಲಿ, ಜೀವನಧರ್ಮವಾಗಲಿ ಇಲ್ಲ. ಜೀವನ ಹೇಗೆ ಬರುತ್ತದೋ ಹಾಗೆ ಸ್ವೀಕರಿಸುವುದು ಬಿಟ್ಟು ಬೇರೆ ಮಾರ್ಗ ಇಲ್ಲ. ಆದರೆ ಅದು ಹೇಗೆಯೇ ಬರಲಿ, ನಮ್ಮ ಸಂತಸ, ನೆಮ್ಮದಿ, ಸಮಾಧಾನವನ್ನು ಬಿಡಬಾರದು. I have never met a person with an easy past. ಎಲ್ಲರ ಜೀವನದಲ್ಲೂ ಒಂದು ಗುಪ್ತಗಾಮಿನಿ ಹರಿಯುತ್ತಿರುತ್ತದೆ. ಕಂಪ್ಯೂಟರ್, ಮೊಬೈಲ್‌ನ ಮೆಮರಿ ತುಂಬಿದಾಗ ಬೇಡದ ಫೈಲ್‌ಗಳನ್ನು ಡಿಲೀಟ್ ಮಾಡುವಂತೆ, ನಮ್ಮ ತಲೆಯೊಳಗಿನ ಚಿಂತೆ, ಕೆಟ್ಟ ಆಲೋಚನೆ, ದುಗುಡಗಳೆಂಬ ಫೈಲ್‌ಗಳನ್ನು ಆಗಾಗ ಡಿಲೀಟ್ ಮಾಡುತ್ತಲೇ ಇರಬೇಕು.

ಈ ಜಗತ್ತಿನಲ್ಲಿ ಕಂಡಿದ್ದೆಲ್ಲ ಬೇಕು. ಎಲ್ಲವನ್ನೂ ನನ್ನದಾಗಿಸಿಕೊಳ್ಳಬೇಕು ಎಂಬ ಹಪಾಹಪಿಗೆ ಬಿದ್ದರೆ, ಅಲ್ಲಿಗೆ ಜೀವನದಲ್ಲಿ ಸಮಾಧಾನ ಎಂಬುದು ಸಿಗುವುದಿಲ್ಲ. ಇಲ್ಲಿನ ಯಾವುದೂ ನನ್ನದಲ್ಲ. ಎಲ್ಲವೂ ಲೈಬ್ರರಿಯ ಪುಸ್ತಕಗಳಂತೆ. ಅವುಗಳನ್ನು ಓದಿ, ತನ್ನದಲ್ಲವೆಂದು ಅಲ್ಲಿಯೇ ಬಿಟ್ಟು, ಜ್ಞಾನವನ್ನು ಹೀರಿಕೊಂಡರೆ ಮನಸ್ಸು ಸದಾ ಉದ್ಯಾನವನ. ಗೊತ್ತಿರುವ ಸರಳ ಸತ್ಯ, ನಿಯಮಗಳನ್ನು ಉಲ್ಲಂಘಿಸಲು ಹೋಗಿ ಜೀವನವಿಡೀ ತೊಳಲಾಡುತ್ತೇವೆ.

ಬದುಕಿನಲ್ಲಿ ಯಾವುದೂ ಸುಲಭಕ್ಕೆ ಸಿಗುವುದಿಲ್ಲ. ಸುಲಭಕ್ಕೆ ಸಿಕ್ಕಿದ್ದು, ಶಾಶ್ವತವಾಗಿ ಇರುವುದೂ ಇಲ್ಲ. ಕಷ್ಟದಂಥ ನೋವು ಇನ್ನೊಂದಿಲ್ಲ. ಆದರೆ ಆ ನೋವಿನಲ್ಲೂ ಒಂದು ಆನಂದವಿದೆ. Difficult roads often lead us to beautiful destinations

ಅನ್ನೋದು ಸುಳ್ಳಲ್ಲ. ಭೂಮಿಯನ್ನು ಪಿಕಾಸಿಯಿಂದ ಅಗೆಯುವಾಗ ಮೊದಲ ಹೊಡೆತಕ್ಕೆ ನೀರು ಜಿನುಗುವುದಿಲ್ಲ. ಆಳ ಆಳಕ್ಕೆ ಅಗೆಯುತ್ತಲೇ ಹೋಗಬೇಕು, ನೀರು ಸಿಗುವ ತನಕ. ಕೆಲವರಿಗೆ ಬೇಗನೆ ಸಿಗಬಹುದು, ಇನ್ನು ಕೆಲವರಿಗೆ ತಡವಾಗಿ ಸಿಗಬಹುದು, ಮತ್ತೆ ಕೆಲವರಿಗೆ ಸಿಗದೆಯೂ ಹೋಗಬಹುದು. ಇದನ್ನೇ ಅದೃಷ್ಟ ಎಂದರೂ ಪರವಾಗಿಲ್ಲ. ನಮ್ಮ ಪಾಲಿನ ಪಂಚಾಮೃತ ಯಾವುದೋ? ಆದರೆ ನೀರು ಸಿಗುವ ತನಕ ಪ್ರಯತ್ನವನ್ನಂತೂ ಬಿಡಬಾರದು.

Let it hurt. Let it bleed. Let it heal. And let it go. ಜೀವನವೇ ಹೀಗೆ. ಇಲ್ಲಿ ಎಲ್ಲವೂ ಇದೆ. ಶಾಂತ ಸಾಗರ ಉತ್ತಮ ನಾವಿಕನನ್ನು ರೂಪಿಸುವುದಿಲ್ಲ. ಬದುಕಿನ ಹಾದಿಯ ತುಂಬಾ ಮುರುಕಿಗಳು. ಸೀದಾ ರಸ್ತೆಯಲ್ಲಿ ಹೊಂಡಗಳು, ಹೊಂಡಗಳಿಲ್ಲದ ಸಪಾಟು ರಸ್ತೆಯಲ್ಲಿ ರೋಡ್ ಹಂಪ್‌ಗಳು, ಅಲ್ಲಲ್ಲಿ ಸಿಗ್ನಲ್‌ಗಳು, ಟ್ರಾಫಿಕ ಜಾಮು. ಇವ್ಯಾವವೂ ಇಲ್ಲದಿದ್ದರೆ, ನಿಮ್ಮ ವಾಹನ ಕೆಟ್ಟು ನಿಲ್ಲಬಹುದು.

ಜೀವನದಲ್ಲಿ ಅದು ಸಿಕ್ಕಿಲ್ಲ, ಇದು ಸಿಕ್ಕಿಲ್ಲ ಎಂಬುದು ದುರಂತ ಅಲ್ಲ. ಗರ್ಲ್ ಫ್ರೆಂಡ್, ಬಾಯ್ ಫ್ರೆಂಡ್‌ಗಳನ್ನು ಕಳೆದುಕೊಳ್ಳುವುದು ದೊಡ್ಡ ದುರಂತ ಅಲ್ಲವೇ ಅಲ್ಲ. ಮತ್ತೊಬ್ಬರನ್ನು ಪಡೆಯಬಲ್ಲೆ ಎಂಬ ಆತ್ಮವಿಶ್ವಾಸ ಕಳೆದುಕೊಳ್ಳುವುದು ದೊಡ್ಡ ದುರಂತ. ಜೀವನದಲ್ಲಿ ತೊಂದರೆ ತಾಪತ್ರಯಗಳು ಬರುತ್ತವೆ. ಅವು ವಾಶಿಂಗ್ ಮಶೀನು ಇದ್ದ ಹಾಗೆ. ನಮ್ಮನ್ನು ತಿರುಗಿಸಿ, ಮುದ್ದೆ ಮಾಡಿ, ಕೊನೆಯಲ್ಲಿ ಶುಭ್ರಗೊಳಿಸಿ, ಒಣಗಿಸಿ, ಹೊರಗೆ ಕಳಿಸುತ್ತದೆ!

ಪಾರ್ಟಿಗೆ ಹೋಗೋದು ತಪ್ಪಲ್ಲ, ಯಾರೊಂದಿಗೆ ಅನ್ನೋದು ಮುಖ್ಯ!

ಇತ್ತೀಚಿನ ವರ್ಷಗಳಲ್ಲಿ ಈ ಪಾರ್ಟಿಗಳೆಂದರೆ ಅಲರ್ಜಿ ರೀತಿಯಾಗಿತ್ತು. ಆದರೂ ಕೆಲ ತಿಂಗಳ ಹಿಂದೆ ನಾನೊಂದು ಪಾರ್ಟಿಗೆ ಹೋಗಿದ್ದೆ. ಈ ರೀತಿಯ ಪಾರ್ಟಿಗೆ ಹೋಗದೇ ವರ್ಷಗಳೇ ಆಗಿದ್ದವು. ಬಹುತೇಕ ಪರಿಚಿತ ಮುಖಗಳು. ಆದರೆ ಕೆಲವರಿಗೆ ಪಾರ್ಟಿಗೆ ಹೋಗುವುದು ದೈನಂದಿನ ಕೆಲಸ. ವಾರದಲ್ಲಿರುವ ನಾಲ್ಕು ದಿನದಲ್ಲಿ ಹತ್ತು ಪಾರ್ಟಿಗಳಿಗೆ ಹೋಗುತ್ತಾರೆ. ಪ್ರತಿ ಪಾರ್ಟಿಗೂ ಬೇರೆ ಬೇರೆ ಡ್ರೆಸ್. ರಾಜಕಾರಣಿಗಳು ಹೇಗೆ ಮದುವೆ, ಮುಂಜಿ, ಗೃಹಪ್ರವೇಶ, ಅಂತ್ಯಕ್ರಿಯೆಯಲ್ಲಿ ಪಾಲುಗೊಳ್ಳುತ್ತಾರೋ, ಇವರು ಪಾರ್ಟಿಗಳಲ್ಲಿ ಹಾಗೆ. ರಾತ್ರಿ ಏಳರಿಂದ ಮಧ್ಯರಾತ್ರಿ ಎರಡು ಗಂಟೆವರೆಗೆ ಪಾರ್ಟಿಯಲ್ಲಿರುತ್ತಾರೆ.

ಸುಮಾರು 15 ವರ್ಷಗಳ ಹಿಂದೆ ನಾನು ಪಾರ್ಟಿಗೆ ಬಹಳ ಹೋಗುತ್ತಿದ್ದೆ. ಪಾರ್ಟಿ ಆರಂಭವಾಗುವ ಹೊತ್ತಿಗೆ ಸುದ್ದಿಮನೆ 'ಹೊತ್ತಿ ಉರಿಯುವ ಸಮಯ'. ಹೀಗಾಗಿ ಪತ್ರಕರ್ತರಿಗೆ ಪಾರ್ಟಿ ಹೇಳಿ ಮಾಡಿಸಿದ್ದಲ್ಲ. ಆದರೂ ಪತ್ರಿಕೆಯನ್ನು ಮುದ್ರಣಕ್ಕೆ ಕಳಿಸಿ ಪಾರ್ಟಿಗೆ ಹೋಗುತ್ತಿದ್ದೆ. ಯಾವುದೇ ಪಾರ್ಟಿಯಿರಲಿ, ಸುಮಾರು ಶೇ.60-70ರಷ್ಟು ಮಂದಿ ಕಾಮನ್ ಅಥವಾ ರಿಪೀಟ್ ಗೆಸ್ಟ್. ಅವವೇ ಮುಖ. ಅದೇ ಡೌಲು, ಚಡಂಗ!

ಪಾರ್ಟಿಗೆ ಹೋಗುವುದರ ಮುಖ್ಯ ಆಕರ್ಷಣೆಯೆಂದರೆ ತರಹೇವಾರಿ ಜನರ ಪರಿಚಯ, ಗೆಳೆತನಕ್ಕೆ ಅವಕಾಶವಾಗುತ್ತದೆಂಬುದು. ಆದರೆ ಬಹುದೊಡ್ಡ ಹಾನಿ ಏನೆಂದರೆ ಸಮಯ ವ್ಯರ್ಥವಾಗುತ್ತದೆಂಬುದು. ಒಂದೊಂದು ಪಾರ್ಟಿಗೆ ಹೋದರೆ ಕನಿಷ್ಠ ಮೂರು ತಾಸು ಕಳೆದುಹೋಗುತ್ತದೆ. ಪಾರ್ಟಿಯಲ್ಲಿ ಹೆಚ್ಚಾಗಿ ಚರ್ಚೆಯಾಗುವುದು ಗಾಸಿಪ್. ಕೆಲವರಿಗೆ ವದಂತಿ ಹಬ್ಬಿಸಲು ಇದೇ ಒಳ್ಳೆಯ ವೇದಿಕೆ. ಕೆಲವರು ಇದನ್ನೇ ಅದ್ಭುತ 'ಜ್ಞಾನ' ಎಂದು ಭಾವಿಸಿರುತ್ತಾರೆ. ತನ್ನ ಬಗ್ಗೆ ಬಡಾಯಿಕೊಚ್ಚಿಕೊಳ್ಳಲು ತಮ್ಮ ಆಭರಣ, ಡ್ರೆಸ್, ಕಾರು, ಅಂತಸ್ತು, ಸ್ಥಾನಮಾನ ಪ್ರದರ್ಶಿಸಲು ಇದೊಂದು ಒಳ್ಳೆಯ ಅವಕಾಶ.

ಆದರೆ ಇಂತಹ ಪಾರ್ಟಿಗಳು ಬರಬರುತ್ತಾ ಬೋರಾಗಲಾರಂಭಿಸಿತು. ಕೃತ್ರಿಮ ಭಾವ, ಆಡಂಬರ, ಸುಳ್ಳು, ಮುಖವಾಡ, ಬ್ಯಾಗಡೆಗಳೇ ಈ ಪಾರ್ಟಿಗಳನ್ನು ಆಳುತ್ತಿವೆ ಎಂದು ಎನಿಸಲಾರಂಭಿಸಿತು. ಪಾರ್ಟಿಗಳಿಗೆ ಹೋಗಲೇಬಾರದು ಎಂದು ನಿರ್ಧರಿಸಿದೆ. ಆರಂಭದಲ್ಲಿ ಸ್ನೇಹಿತರು ಬೇಸರಿಸಿಕೊಳ್ಳುತ್ತಿದ್ದರು. ನಾನು ಯಾವುದೇ ಪಾರ್ಟಿಯಲ್ಲಿ ಕಾಣಿಸಿಕೊಳ್ಳದೇ ಇದ್ದುದರಿಂದ, ಕ್ರಮೇಣ ನನ್ನನ್ನು ಕರೆಯುವುದನ್ನೇ ಬಿಟ್ಟರು. ಈ ಮಧ್ಯೆ, ಮೂರ್ನಾಲ್ಕು ಪಾರ್ಟಿಗಳಿಗೆ ಹೋದೆ. ಹತ್ತಾರು ಆಮಂತ್ರಣಗಳು ನಿತ್ಯ ಬರಲಾರಂಭಿಸಿದವು. ಅದೊಂಥರಾ ಸಾಂಕ್ರಾಮಿಕದಂತೆ, ಯಾವುದೇ ಪಾರ್ಟಿಗೆ ಹೋದರೂ ಒಬ್ಬನಾ ದರೂ ತಗುಲಿ ಹಾಕಿಕೊಳ್ಳುತ್ತಾನೆ. ಇಬ್ಬರಿಗೂ ಬೇಡದ ವಿಷಯ ಹಿಡಿದು ಕೊರೆಯುತ್ತಾನೆ. ನಿಮಗೆ ಇಷ್ಟವಾಗದಿದ್ದರೂ ಕೊರೆಯಿಸಿಕೊಳ್ಳಬೇಕಾಗುತ್ತದೆ. ಮನೆಗೆ ಬರುವಾಗ ತಡವಾಗುತ್ತದೆ. ಮರುದಿನ ಬೇಗನೇ ಏಳಲಾಗುವುದಿಲ್ಲ. ಒಟ್ಟಾರೆ ಕೆಟ್ಟ ಮೂಡು.

ಕೆಲವರಿಗೆ ಪಾರ್ಟಿಗೆ ಹೋಗದಿದ್ದರೆ ತಾವು ಅಪ್ರಸ್ತುತರಾಗಿಬಿಡುತ್ತೇವೆ ಎಂಬ ಅನಿಶ್ಚಿತತೆ. ಅನೇಕರನ್ನು ಪರಿಚಯ ಮಾಡಿಕೊಂಡು 'ನೆಟ್‌ವರ್ಕ್' ಮಾಡಿಕೊಳ್ಳುವ ಲೆಕ್ಕಾಚಾರದ, ವ್ಯಾಪಾರಿ ಬುದ್ಧಿ , ಇನ್ನು ಕೆಲವರಿಗೆ ಪ್ರತಿ ಪರಿಚಯವನ್ನು ಲಾಭದಾಯಕ ದಂಧೆ ಮಾಡಿಕೊಳ್ಳುವವರಿಗೆ ಸ್ವಲ್ಪ ಮಟ್ಟಿಗೆ ಈ ಪಾರ್ಟಿಗಳು ಸಹಾಯಕವಾಗುವುದು ನಿಜ. ನನ್ನ ಪ್ರಕಾರ, ನೀವು ಯೋಗ್ಯರೂ, ಉಪಯುಕ್ತವೂ ಆದ ಪ್ರಭಾವಿ ವ್ಯಕ್ತಿಯಾದರೆ ನೀವು ಎಲ್ಲಿದ್ದರೂ ಜನ ನಿಮ್ಮನ್ನು ಹುಡುಕಿಕೊಂಡು ಬರುತ್ತಾರೆ. ನೀವು ಇರುವಲ್ಲಿಗೇ ಬಂದು ಪರಿಚಯ, ಸ್ನೇಹ ಮಾಡಿಕೊಳ್ಳುತ್ತಾರೆ. ಪಾರ್ಟಿಗೇ ಹೋಗಬೇಕೆಂದಿಲ್ಲ. ಬಹುತೇಕ ವೇಳೆ ಈ ಪಾರ್ಟಿ ವೇಸ್ಟ್ ಆಫ್ ಟೈಮ್!

ಕೆಲ ತಿಂಗಳ ಹಿಂದೆ ಹೋಗಿದ್ದ ಪಾರ್ಟಿಯಲ್ಲಿ ಒಬ್ಬರು ಪರಿಚಿತ ಕಾಮಿಡಿಯನ್ ಇದ್ದರು. ಅವರನ್ನು ಕಂಡಾಗ ವೇದಿಕೆಯಲ್ಲಿ ಎಲ್ಲರನ್ನೂ ರಂಜಿಸುತ್ತಿದ್ದ ಕಾರ್ಯಕ್ರಮ ನಿರೂಪಕ ಒಂದು ಜೋಕ್ ಹೇಳುವಂತೆ ಒತ್ತಾಯಿಸಿದರು. ಕಾಮಿಡಿಯನ್ ವೇದಿಕೆಗೆ ಹೋದ. ಎಲ್ಲರೂ ಜೋರಾಗಿ ಚಪ್ಪಾಳೆ ಹೊಡೆದರು. ಆತ ಹೇಳಿದ- 'ಕಾಮಿಡಿಯನ್‌ನು ಕಂಡಾಗ ನೀವೆಲ್ಲ ಜೋಕ್ ಹೇಳಿ ಎಂದು ಒತ್ತಾಯಿಸುತ್ತೀರಾ. ಅದೇ ರಾಜಕಾರಣಿಗಳನ್ನು ಕಂಡಾಗ ಒಂದು ಸುಳ್ಳು ಹೇಳಿ ಎಂದು ಏಕೆ ಒತ್ತಾಯಿಸುವುದಿಲ್ಲ?!' ಎಲ್ಲರೂ ಜೋರಾಗಿ ನಕ್ಕರು.

ಇದೇ ಜೋಕನ್ನು ಇದೇ ಕಾಮಿಡಿಯನ್‌ನಿಂದ ಕಳೆದ ಹದಿನೇಳು ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ. ಇನ್ನೂ ಎಷ್ಟು ಸಲ ಕೇಳಬೇಕೋ? ಪಾರ್ಟಿಯಲ್ಲಿ ಒಂದು ಮೂಲೆ ಹಿಡಿದು, ಬರುವವರ, ಹೋಗುವವರ ಹಾವಭಾವ, ಮಾತುಕತೆಗಳನ್ನೆಲ್ಲ ಕುತೂಹಲದಿಂದ ಗಮನಿಸಬೇಕು. ಅದಕ್ಕಿಂತ ನಿಜವಾದ ಮಜಾ ಬೇರೇ ಇಲ್ಲ.

ಟ್ರಿಸ್ಕೆಡಕಫೋಬಿಯಾ ಅಂದರೆ!

ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ ಬೆಂಗಳೂರಿಗೆ ಲುಫ್ತಾನ್ಸಾ ವಿಮಾನದಲ್ಲಿ ಬರುವಾಗ, ಹದಿನಾಲ್ಕನೇ ಸಾಲಿನಲ್ಲಿ ನನ್ನ ಆಸನವಿತ್ತು. ವಿಮಾನದೊಳಗೆ ಪ್ರವೇಶಿಸುತ್ತಿದ್ದಂತೆ ಆಸನಗಳ ಸಂಖ್ಯೆ ಬರೆದ ಸಾಲುಗಳನ್ನು ನೋಡುತ್ತಾ ಹೋಗುವಾಗ ಅಚ್ಚರಿ ಕಾದಿತ್ತು. ವಿಮಾನದಲ್ಲಿ ಹನ್ನೆರಡನೇ ಸಾಲಿತ್ತು. ಮುಂದಿನ ಸಾಲು ಹದಿನಾಲ್ಕನೇಯದು. ಮಧ್ಯದ ಅಂದರೆ, ಹದಿಮೂರನೇ ಸಾಲು ಇರಲಿಲ್ಲ, ನಾನೇ ಸರಿಯಾಗಿ ಗಮನಿಸಿರಲಿಕ್ಕಿಲ್ಲ ಎಂದು ಎರಡೆರಡು ಸಲ ನೋಡಿದೆ. ಹದಿಮೂರನೇ ಸಂಖ್ಯೆಯ ಇಡೀ ಸಾಲು ಇರಲಿಲ್ಲ. ನನ್ನ ಆಸನವೇನೋ ಸಿಕ್ಕಿತು.

ಆದರೆ, ಹದಿಮೂರನೇ ಸಂಖ್ಯೆಯ ಸಾಲು ಎಗರಿ ಹೋಗಿದ್ದೇಕೆ ಎಂಬುದು ಗೊತ್ತಾಗಲಿಲ್ಲ. ಈ ಬಗ್ಗೆ ಅಲ್ಲಿಯೇ ಇದ್ದ ಗಗನಸಖಿಯನ್ನು ಕೇಳಿದೆ. 'ಮೂಢನಂಬಿಕೆ...ಮೂಢನಂಬಿಕೆ..' ಎಂದಳು. ನನಗೆ ತಕ್ಷಣ ಅರ್ಥವಾಗಲಿಲ್ಲ. ಆಗ ಅವಳು 'triskaidekaphobia' (ಟ್ರಿಸ್ಕೆಡಕಫೋಬಿಯಾ) ಎಂದಳು. ನಾನು ಆಗ 'ಒಹೋ ಅದಾ?' ಎಂದೆ

ಟ್ರಿಸ್ಕೆಡಕಫೋಬಿಯಾ ಅಂದರೆ ಏನು ಅಂದರೆ ನಿಮಗೆ ಈಗ ಗೊತ್ತಾಗಿರಬಹುದು. ಹದಿಮೂರನೆ ಸಂಖ್ಯೆ ಬಗ್ಗೆ ಭಯ. ಅನೇಕರಲ್ಲಿ ಈ ಸಂಖ್ಯೆ ಅಪಶಕುನ ಎಂಬ ಭಾವನೆ ಇದೆ. ಅಷ್ಟೇ ಅಲ್ಲ, ಆ ಸಂಖ್ಯೆ ಬಗ್ಗೆ ಏನೋ ಒಂಥರಾ ವಿಚಿತ್ರ ದುಗುಡ. ಹೀಗಾಗಿ ಹದಿಮೂರನೇ ಸಂಖ್ಯೆಯನ್ನು ಅವರು ಚಡಟಜಿಭ ಮಾಡುತ್ತಾರೆ. ಈ ಸಂಖ್ಯೆಯ ಬಗ್ಗೆ ಅದೆಂಥ ಭಯ ಅಂದರೆ ಹದಿಮೂರನೇ ಸಾಲಿನ ಆಸನಗಳಲ್ಲಿ ಕುಳಿತುಕೊಳ್ಳುವುದಿಲ್ಲ. ಅಪಘಾತವಾದರೆ ಎಂಬ ಅಂಜಿಕೆ. ಈ ಸಾಲನಲ್ಲಿ ಕುಳಿತುಕೊಳ್ಳಲು ಯಾರೂ ಬಯಸುವುದಿಲ್ಲ. ಒತ್ತಾಯ ಮಾಡಿ ಈ ಸಂಖ್ಯೆಯ ಸಾಲನ್ನು ನೀಡಿದರೆ, ಹಲವಾರು ಆಕ್ಷೇಪಿಸುತ್ತಾರೆ, ಮೂಢನಂಬಿಕೆ ಕಾರಣ ನೀಡಿ ಕುಳಿತುಕೊಳ್ಳಲು ಹಿಂದೇಟು ಹಾಕುತ್ತಾರೆ.

ಹದಿಮೂರು ನಂಬರಿನ ಸುತ್ತ ಇರುವ ಮೂಢನಂಬಿಕೆ ಸರ್ವವ್ಯಾಪಿ ಆಗಿರುವುದನ್ನು ಗಮನಿಸಿ, ತನ್ನ ಹಲವಾರು ವಿಮಾನಗಳಲ್ಲಿ ಲುಫ್ತಾನ್ಸಾ ಏರ್ ಲೈನ್ ಆ ಸಂಖ್ಯೆಯ ಸಾಲನ್ನೇ ತೆಗೆದುಬಿಟ್ಟಿದೆ. ಅದಕ್ಕೆ ಏರ್‌ಲೈನ್ಸ್ ನೀಡಿದ ಕಾರಣ ಟ್ರಿಸ್ಕೆಡಕಫೋಬಿಯಾ! ಏರ್ ಫ್ರಾನ್ಸ್ ವಿಮಾನ ಸಂಸ್ಥೆ ಸಹ ಹದಿಮೂರನೇ ಸಾಲನ್ನು ಇದೇ ಕಾರಣಕ್ಕೆ ತೆಗೆದುಹಾಕಿದೆ. ಹದಿಮೂರನೇ ಸಾಲು ಇಲ್ಲದಿರಬಹುದು, ನಿಜವಾದ ಅರ್ಥದಲ್ಲಿ ಹದಿನಾಲ್ಕನೇ ಸಾಲೇ ಹದಿಮೂರನೇ ಸಾಲು ಎಂಬುದನ್ನು ಮರೆಯುವಂತಿಲ್ಲ.

ಜೀವನ ಅಂದ್ರೆ ಏನು?

ಮೂಲತಃ ಅರೇಬಿಕ್ ಭಾಷೆಯಲ್ಲಿ ಬರೆದ ಈ ಸಂದೇಶವನ್ನು ಇತ್ತೀಚೆಗೆ ಸ್ನೇಹಿತರೊಬ್ಬರು ಕಳಿಸಿಕೊಟ್ಟಿದ್ದರು. ಅದು ನಿಮಗೂ ಗೊತ್ತಾಗಲಿ ಎಂದು ಕೊಡುತ್ತಿದ್ದೇನೆ.

- ತನ್ನ ಮನೆಯ ಕಸದ ಬುಟ್ಟಿಯಲ್ಲಿ ಏನನ್ನೋ ಹೆಕ್ಕುತ್ತಿದ್ದ ಬಡವನನ್ನು ನೋಡಿ ಬಾಲ್ಕನಿಯಲ್ಲಿ ನಿಂತ ವ್ಯಕ್ತಿ ಉದ್ಗರಿಸಿದಧನ್ಯವಾದಗಳು ದೇವರೇ ನಾನು ಬಡವನಲ್ಲ.
- ರಸ್ತೆಯ ಮೇಲೆ ಮೈಮೇಲೆ ಬಟ್ಟೆ ಇಲ್ಲದೆ ವಿಚಿತ್ರವಾಗಿ ಆಡುತ್ತಿದ್ದ ಹುಚ್ಚನನ್ನು ನೋಡಿ ಆ ಬಡವ ಅಂದುಕೊಂಡ ಧನ್ಯವಾದಗಳು ದೇವರೇ ನಾನು ಹುಚ್ಚನಲ್ಲ.
- ಅಂಬ್ಯುಲೆನ್ಸ್ ವಾಹನದಲ್ಲಿ ಕೊಂಡೊಯ್ಯುತ್ತಿದ್ದ ರೋಗಿಯನ್ನು ನೋಡಿದ ಆ ಹುಚ್ಚ ತನ್ನಲ್ಲೇ ಹೇಳಿಕೊಂಡ ಧನ್ಯವಾದಗಳು ದೇವರೇ ನಾನು ರೋಗಿಯಲ್ಲ.
- ಆಸ್ಪತ್ರೆಯಿಂದ ಹೊರತರುತ್ತಿದ್ದ ಹೆಣವನ್ನು ನೋಡಿದ ಆ ರೋಗಿ ತನ್ನಲ್ಲೇ ಗೊಣಗಿಕೊಂಡ ಧನ್ಯವಾದಗಳು ದೇವರೇ, ನಾನಿನ್ನು ಸತ್ತಿಲ್ಲ.
- ಸತ್ತ ವ್ಯಕ್ತಿ ಮಾತ್ರ ದೇವರಿಗೆ ಧನ್ಯವಾದಗಳನ್ನು ಅರ್ಪಿಸಲಾರ.
- ನನ್ನಲ್ಲಿ ಉಸಿರಿರುವಾಗಲೆ ನಾನೇಕೆ ದೇವರಿಗೆ ಧನ್ಯವಾದಗಳನ್ನು ಅರ್ಪಿಸಬಾರದು. ಈ ಸುಂದರವಾದ ಜೀವನವನ್ನು ನನಗೆ ಉಡುಗೊರೆಯಾಗಿ ನೀಡಿದ್ದಕ್ಕಾಗಿ.

ಹಾಗಾದರೆ ಜೀವನ ಅಂದ್ರೆ ಏನು?

- ನೀವು ಜೀವನವನ್ನು ಅರ್ಥೈಸಿಕೊಳ್ಳಬೇಕಾದರೆ, ಅದೇನೆಂದು ತಿಳಿದುಕೊಳ್ಳಬೇಕಾದರೆ ಈ ಕೆಳಗಿನ ಮೂರುಸ್ಥಳಗಳು ಸೂಕ್ತ. ಆಸ್ಪತ್ರೆ -ಜೈಲು ಹಾಗೂ ಸ್ಮಶಾನ
- ಆಸ್ಪತ್ರೆಯಲ್ಲಿ ನಿಮಗೆ ಅರಿವಾಗುತ್ತದೆ ಆರೋಗ್ಯಕ್ಕಿಂತ ಸುಂದರವಾದ ವಸ್ತು ಜಗತ್ತಿನಲ್ಲಿ ಬೇರಾವುದೂ ಇಲ್ಲ.
- ಜೈಲಿನಲ್ಲಿ ನಿಮಗೆ ಅರಿವಾಗುತ್ತದೆ ಸ್ವಾತಂತ್ರ್ಯ ಎಷ್ಟು ಅಮೂಲ್ಯ ಎಂಬುದು.
- ಸ್ಮಶಾನದಲ್ಲಿ ಅರಿವಾಗುತ್ತದೆ ನಮ್ಮ ಜೀವನ ಎಷ್ಟೊಂದು ಅಪೂರ್ವ, ಅಮೂಲ್ಯ ಎಂದು. ಇಂದು ನಾವುನಡೆಯುತ್ತಿರುವ ನೆಲವೇ ನಾಳೆ ನಮಗೆ ಮೇಲ್ಛಾವಣಿಯಾಗುತ್ತದೆಂದು ಸ್ಮಶಾನದಲ್ಲಿ ಮಾತ್ರ ಅರಿವಾಗಲು ಸಾಧ್ಯ.
- ಇದು ಜೀವನದ ಕಹಿ ಸತ್ಯ. ಬರುವಾಗಲೂ ಬರಿಗೈ, ಹೋಗುವಾಗಲೂ ಬರಿಗೈ. ಹಾಗಾಗಿ ಬದುಕಿರುವಷ್ಟು ದಿನ ದೇವರಿಗೆ ಶರಣಾಗಿ, ಅವನಿತ್ತ ಜೀವನದಲ್ಲಿ ಅವನ ಮೇಲೆ ನಂಬಿಕೆಯಿಟ್ಟು, ಅವನಿಗೆ ಆಭಾರಿಯಾಗಿರೋಣ.

ಒಂದು ಘಟನೆ : ಆಗ - ಈಗ

ಸುಮಾರು ನಲವತ್ತೈದು ವರ್ಷಗಳ ಹಿಂದೆ ಈ ಪ್ರಸಂಗವನ್ನು ಹೇಳಿದಾಗ ಎಲ್ಲರೂ ಬೆರಗಿನಿಂದ ಕೇಳಿ ನಕ್ಕಿದ್ದರಂತೆ. ಆದರೆ ಈಗ ಹೇಳಿದರೆ ಹೇಳಿದವರ ಪೆದ್ದುತನಕ್ಕೆ ಕನಿಕರಪಡಬಹುದು. ಹಳ್ಳಿ ಹೈದನೊಬ್ಬ ಮುಂಬೈಗೆ ಬಂದು ಅಲ್ಲಿನ ಬಹುಮಹಡಿ ಕಟ್ಟಡಗಳನ್ನು ಅತ್ಯಂತ ಆಶ್ಚರ್ಯದಿಂದ ಬಾಯಿ ತೆರೆದುದಿಟ್ಟಿಸುತ್ತಿದ್ದ. ಒಂದು ಗಗನಚುಂಬಿ ಕಟ್ಟಡದಲ್ಲಿ ಲಿಫ್ಟ್ ಮೇಲೆ ಕೆಳಕ್ಕೆ ಹೋಗುತ್ತಿತ್ತು. ಇವನಿಗೆ ಬಹಳ ಕುತೂಹಲ. ಸ್ವಲ್ಪ ಹತ್ತಿರ ಹೋಗಿ ನೋಡೋಣ ಎಂದು ಸನಿಹ ಹೋದ. ಮುದುಕಿಯೊಬ್ಬಳು ಲಿಫ್ಟ್‌ನಲ್ಲಿ ಮೇಲಕ್ಕೆ ಹೋದಳು. ಅದನ್ನು ಆತ ಬೆರಗಾಗಿ ನಿಂತು ನೋಡುತ್ತಿದ್ದ. ಐದು ನಿಮಿಷಗಳ ನಂತರ ಅದೇ ಲಿಫ್ಟ್ ಕೆಳಗೆ ಬಂದಿತು. ಅದರೊಳಗಿಂದ ತರುಣಿಯೊಬ್ಬಳು ಹೊರಗೆ ಬಂದಳು. 'ಅರೇ ! ಇದರಲ್ಲಿ ಮೇಲೇರಿದ ಮುದುಕಿ ಇಷ್ಟು ಬೇಗ ತರುಣಿಯಾಗಿ ಇಳಿದು ಬಂದಳಾ?! ಏನಾಶ್ಚರ್ಯ ? ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಬರದೇ ತಪ್ಪು ಮಾಡಿದೆ' ಎಂದು ಕೈ ಕೈ ಹೊಸಕಿಕೊಂಡ ಹಳ್ಳಿ ಹೈದ.

ಅಕ್ಷರ ಪ್ರಪಂಚದಲ್ಲಿ ಪಸರಿಸಿರುವ ಕೇದಗೆ ಹೂವಿನ ಕಂಪು

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಕ್ಷರಗಳದು ಅದೊಂದು ವಿಶೇಷ ಶಕ್ತಿ. ನಿಮ್ಮ ಪ್ರೀತಿಯ ಅಥವಾ ನಿಮಗೆ ಅತಿಪರಿಚಿತ ಯಾವುದೋ ವಸ್ತುವಿನದಾಗಲೀ ವ್ಯಕ್ತಿಯದಾಗಲೀ ಸ್ಥಳದ್ದಾಗಲೀ ಹೆಸರು ಅಕ್ಷರಗಳಲ್ಲಿ ಬರೆದಿದ್ದನ್ನು ಎಲ್ಲಿಯೋ ಓದುತ್ತೀರಿ ಎಂದುಕೊಳ್ಳಿ. ತತ್‌ಕ್ಷಣವೇ ಆ ವಸ್ತು/ವ್ಯಕ್ತಿ/ಸ್ಥಳ ನಿಮ್ಮ ಮನಸ್ಸನ್ನೆಲ್ಲ ಆವರಿಸಿಬಿಡುತ್ತದೆ. ಪ್ರತ್ಯಕ್ಷ ಕಾಣಬೇಕೆಂದಿಲ್ಲ, ಚಿತ್ರವೂ ಬೇಕಾಗಿಲ್ಲ, ಬರೀ ಅಕ್ಷರಗಳಲ್ಲಿ ಆ ಹೆಸರು ಇದ್ದರೂ ಸಾಕಾಗುತ್ತದೆ. ಉದಾಹರಣೆಗೆ- ಮಸಾಲೆದೋಸೆ ಎಂದು ಈಗ ನಾನಿಲ್ಲಿ ಅಕ್ಷರಗಳಲ್ಲಿ ಉಲ್ಲೇಖಿಸಿದೆನು, ನೀವು ಓದಿದಿರಿ. ಮಸಾಲೆದೋಸೆ ನಿಮ್ಮೆದುರಿಗೆ ಇಲ್ಲದಿದ್ದರೂ, ಮಸಾಲೆದೋಸೆಯ ಚಿತ್ರವನ್ನು ತೋರಿಸದಿದ್ದರೂ ನಿಮ್ಮ ಬಾಯಿಯಲ್ಲಿ ನೀರೂರುವಷ್ಟರ ಮಟ್ಟಿಗೆ ಮಸಾಲೆದೋಸೆ ನಿಮ್ಮ ಮನಸ್ಸನ್ನೊಮ್ಮೆ ಆಕ್ರಮಿಸಲಿಲ್ಲವೇ? ಇದೇ ಮಾತನ್ನು ಮಾವಿನಹಣ್ಣಿನ ಸೀಕರಣೆ ಬಗ್ಗೆನೂ ಹೇಳಬಹುದು, ಮಂಡಕ್ಕಿ-ಮಿರ್ಚಿಬಜ್ಜಿ ಬಗ್ಗೆನೂ ಹೇಳಬಹುದು, ಮೈಸೂರುಪಾಕ್ ಬಗ್ಗೆನೂ ಹೇಳಬಹುದು, ಮಾವಳ್ಳಿ ಟಿಫನ್ ರೂಮ್ ಬಗ್ಗೆಯೂ ಹೇಳಬಹುದು! ಇಲ್ಲ, ತಿನ್ನುವುದಕ್ಕೆ ಸಂಬಂಧಿಸಿದ್ದೇ ಆಗಬೇಕಿಲ್ಲ, ತುಂಬ ಚಂದ ಕಾಣುತ್ತದೆಂದೋ ಆಹ್ಲಾದಕರ ಪರಿಮಳ ಬೀರುತ್ತದೆಂದೋ ನಾವು ಮೆಚ್ಚುವ ಹೂವಿನ ಹೆಸರಿಗೂ ಇದು ಅನ್ವಯಿಸುತ್ತದೆ. ಬೇಕಿದ್ದರೆ ಇಂದು ನಾನಿದನ್ನು ಕೇದಗೆ ಹೂವಿನ ನಿದರ್ಶನದಿಂದ ಸಾಧಿಸಿ ತೋರಿಸುತ್ತೇನೆ.

ಕೇದಗೆ ಅಥವಾ ಕೇದಿಗೆ ಹೂವು ಕನ್ನಡಿಗರೆಲ್ಲರಿಗೂ ಚಿರಪರಿಚಿತ ಎಂದುಕೊಳ್ಳಲಿಕ್ಕಡ್ಡಿಯೇನಿಲ್ಲ. ಆದ್ದರಿಂದಲೇ ಕುವೆಂಪು ಹೇಳಿದ್ದಾರೆ 'ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ, ಮಲ್ಲಿಗೆ ಸಂಪಿಗೆ ಕೇದಗೆ ಸೊಂಪಿಗೆ, ಮಾವಿನ ಹೊಂಗೆಯ ತಳಿರಿನ ತಂಪಿಗೆ, ರಸರೋಮಾಂಚನಗೊಳುವಾತನ ಮನ ಎಲ್ಲಿದ್ದರೆ ಏನ್? ಎಂತಿದ್ದರೆ ಏನ್? ಎಂದೆಂದಿಗು ತಾನ್- ಕನ್ನಡವೇ ಸತ್ಯ!' ಎಂದು. ಕರ್ನಾಟಕದ ಕರಾವಳಿ ಪ್ರದೇಶದವರಿಗಂತೂ ಕೇದಗೆ ಮತ್ತಷ್ಟು ಆಪ್ಯಾಯಮಾನ. ಅಲ್ಲಿನ ನಾಗಾರಾಧನೆಯಲ್ಲಿ ಕೇದಗೆ ಹೂ ಬೇಕೇಬೇಕು; ಯಕ್ಷಗಾನ ಕಲೆಯ ವೇಷಭೂಷಣಗಳಲ್ಲಿ ಕಿರೀಟದ ಒಂದು ಪ್ರಕಾರಕ್ಕೆ ಕೇದಗೆ ಮುಂದಲೆ ಎಂದೇ ಹೆಸರು. ಹಳ್ಳಿಯ ಹೆಂಗಸರು ಕೇದಗೆಯ ಎಸಳನ್ನು ತ್ರಿಕೋನಾಕಾರ ಮಡಚಿ ತೆಂಗಿನಕಡ್ಡಿ ಪೋಣಿಸಿ ಹೂವಿನಂತೆ ಮಾಡಿಕೊಂಡು ತಲೆಗೆ ಮುಡಿದುಕೊಂಡರೆ ಮಲ್ಲಿಗೆ ಸಂಪಿಗೆಗಳೆಲ್ಲ ನಾಚಿ ದೂರ ಸರಿಯಬೇಕು. ಗಾಳಿ ಬೀಸುವ ದಿಕ್ಕಿನಲ್ಲಿ ನೂರಾರು ಮೀಟರ್ ದೂರಕ್ಕೂ ಪರಿಮಳ ಸೂಸಬಲ್ಲ ಕೇದಗೆ ಸೌಗಂಧಿಕಾ ಪುಷ್ಪವಿದ್ದಂತೆ. ಅಷ್ಟಾಗಿ ಸಸ್ಯಶಾಸ್ತ್ರಜ್ಞರೇನಾದರೂ ಚರ್ಚೆಗೆ ಬಂದರೆ ಕೇದಗೆ ಹೂವೆಂದು ನೀವು ಮುಡಿದುಕೊಳ್ಳುವುದು ನಿಜವಾಗಿ ಹೂವಲ್ಲ ಸಂರಕ್ಷಕ ಎಲೆಗಳು ಎಂಬ ಥಿಯರಿ ಮಂಡಿಸಿಯಾರು. ಅದು ನಿಜವೂ ಇರಬಹುದು. ಅಲ್ಲದೇ ಒಟ್ಟಾರೆಯಾಗಿ ಕೇದಗೆಯು ಪರಿಮಳ ದ್ರವ್ಯ ತಯಾರಿಯಲ್ಲಿ, ಔಷಧೀಯ ಸಸ್ಯವಾಗಿ, ಆಹಾರ ಸಾಮಗ್ರಿಯಾಗಿ, ಗರಿಗಳು ಮತ್ತು ಎಲೆಗಳ ನಾರು ಕೂಡ ಗೃಹೋಪಯೋಗಿ ವಸ್ತುಗಳ ತಯಾರಿಯಲ್ಲಿ ಉಪಯುಕ್ತವಾದ್ದರಿಂದ ಒಂಥರದ ಕಲ್ಪವೃಕ್ಷ ಎನಿಸುವುದೂ ಹೌದು. ಆದರೆ ಇಲ್ಲಿ ನಾವು ಕೇದಗೆಯನ್ನು ಚಿತ್ತಾಕರ್ಷಕ ಹೂವೆಂದೇ ಪರಿಗಣಿಸಿ ಮುಂದುವರಿಯೋಣ. ಅಕ್ಷರಪ್ರಪಂಚದಲ್ಲಿ ಕೇದಗೆ ಹೂವಿನ ಉಲ್ಲೇಖ ನಮ್ಮನ್ನೆಷ್ಟು ಉದ್ದೀಪನಗೊಳಿಸಬಲ್ಲದೆಂದು ನೋಡೋಣ.

ಡಿ.ವಿ.ಗುಂಡಪ್ಪನವರು ತಮ್ಮದೊಂದು ಕವನ ಸಂಕಲನಕ್ಕೆ 'ಕೇತಕೀವನ' ಎಂದು ಹೆಸರಿಟ್ಟಿದ್ದಾರೆ. ಕೇತಕೀ ಅಂದರೆ ಸಂಸ್ಕೃತದಲ್ಲಿ ಕೇದಗೆಯ ಹೆಸರು. ಕೇತಕೀ ತಾಳೀ ಖರ್ಜೂರೀ ಚ ತೃಣದ್ರುಮಾಃ ಎಂದು ಅಮರಕೋಶದ ವಾಕ್ಯ. ಕೇತಕೀವನ ಪುಸ್ತಕದ ಮುನ್ನುಡಿಯನ್ನು ಡಿವಿಜಿ ಹೀಗೆ ಆರಂಭಿಸಿದ್ದಾರೆ: 'ನನ್ನ ಹುಟ್ಟೂರು ಮುಳಬಾಗಿಲು. ಅಲ್ಲಿಯ ಶ್ರೀ ಆಮದಾಂಜನೇಯಸ್ವಾಮಿ ಸನ್ನಿಧಿ ಪ್ರಸಿದ್ಧವಾದದ್ದು. ವರ್ಷದ 360 ದಿನವೂ ಆ ಸ್ವಾಮಿಗೆ ಕೇತಕೀ ಪುಷ್ಪ (ತಾಳೆಯ) ಪೂಜೆ ನಡೆಯುತ್ತಿತ್ತು. ಅದರ ನಿರ್ಮಾಲ್ಯದ ತಾಳೆ ರೇಕನ್ನು ಪ್ರಸಾದವೆಂದು ರೋಗಾದಿ ಪೀಡಿತರ ತಲೆದಿಂಬಿನ ಕೆಳಗಿಡುವುದು ವಾಡಿಕೆ. ಅದು ರಕ್ಷೆಯೆಂದು ನಂಬಿಕೆ. ಇಂಥದ್ದು ಕೇತಕೀ (ಕೇದಗೆ = ತಾಳೆ). ನನಗೆ ಓದಲಿಕ್ಕೂ ಯೋಚಿಸಲಿಕ್ಕೂ ಕೊಂಚ-ಕೊಂಚವಾಗಿಯಾದರೂ ಬಿಡುವು ದೊರೆಯುತ್ತಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ಆಗಾಗ ಮನಸ್ಸಿಗೆ ಭಾವನೆಗಳು ಬರುತ್ತಿದ್ದದ್ದೂ ಉಂಟು. ಅವು ಬಂದಾಗ ಅವು ಹಾರಿ ಹೋಗುವುದಕ್ಕೆ ಮುನ್ನ ಅವುಗಳನ್ನು ಆಗ ತೋಚಿದ ಮಾತುಗಳಲ್ಲಿ, ಆಗ ಕೈಗೆ ಸಿಕ್ಕಿದ ಚೀಟಿಗಳಲ್ಲಿ, ಗುರುತು ಹಾಕುತ್ತಿದ್ದುದುಂಟು. ಅಂಥ ಚೀಟಿಗಳು ಈ ಪುಸ್ತಕವಾಗಿವೆ.' ಸಂಕಲನದ ಹೆಸರಿಗೆ ಕಾರಣವಾದ 'ಕೇತಕೀ-ಕೇದಗೆ' ಕವನ ಪುಸ್ತಕದ ಕೊನೆಯಲ್ಲಿದೆ. 'ಮನಕೆ ಮತ್ತೀ ಗಂಧ। ತನುವು ಚೆಂಬೊನ್ನಂದ। ವನಸುಮ ಮಧುಸ್ಯಂದ। ಏನೆನ್ನ ಭಾಗ್ಯ! ಎಷ್ಟೆಲ್ಲಿ ಭೋಗ್ಯ! ಔತಣವು ತನಗೆಂದು। ಆತುರದಿ ಮರಿದುಂಬಿ। ಕೀರ್ತಿ ಬಣ್ಣವ ನಂಬಿ। ಕೇತಕಿಗೆ ತುತ್ತು। ಕ್ಷುತ್ತಿಂಗೆ ಮಿತ್ತು। ಧೂಳ್ ಕಣ್ಣ ಕವಿದು। ಮುಳ್ ರೆಕ್ಕೆ ಹರಿದು। ಲದ್ದಿ ತುಟಿ ಬಿಗಿದು। ಮಧುಪಂಗೆ ಮಸಣ। ವಿಧಿಗದುವೆ ಹಸನ। ಜೀವ ವಿಭ್ರಾಂತಿ। ಸಾಕೆ ವಿಶ್ರಾಂತಿ.' ಇದನ್ನು ಡಿವಿಜಿ ಬರೆದಿದ್ದು ಸಂಸ್ಕೃತ ಅನ್ಯೋಕ್ತಿ ಸುಭಾಷಿತವೊಂದರ ಕನ್ನಡ ಭಾವಾನುವಾದವಾಗಿ. ಮೂಲ ಸಂಸ್ಕೃತ ಪದ್ಯವೂ ತುಂಬ ಪ್ರಸಿದ್ಧವೇ. ಕೇದಗೆಯ ಚಿತ್ರಣವನ್ನು ಕಣ್ಮುಂದೆ ತರಬಲ್ಲದ್ದೇ. 'ಗಂಧಾಢ್ಯಾಸೌ ಭುವನವಿದಿತಾ ಕೇತಕೀ ಸ್ವರ್ಣಪರ್ಣಾ। ಪದ್ಮಭ್ರಾಂತ್ಯಾ ಕ್ಷುಧಿತಮಧುಪಃ ಪುಷ್ಪಮಧ್ಯೇ ಪಪಾತ। ಅಂಧೀಭೂತಃ ಕುಸುಮರಜಸಾ ಕಂಟಕೈಶ್ಛಿನ್ನ ಪಕ್ಷಃ।

ಸ್ಥಾತುಂ ಗಂತುಂ ದ್ವಯಮಪಿ ಸಖೇ ನೈವಶಕ್ತೋ ದ್ವಿರೇಫಃ॥' ಕೇದಗೆ ಹೂವು ವಿಶ್ವವಿಖ್ಯಾತವಾದದ್ದು, ಬಂಗಾರದ ಬಣ್ಣದ್ದು ಮತ್ತು ಸುಗಂಧಭರಿತವಾದದ್ದು. ಕಮಲದ ಹೂವೆಂದು ಭಾವಿಸಿದ ಹಸಿದ ದುಂಬಿಯು ನೇರವಾಗಿ ಅದರೊಳಕ್ಕೆ ಹಾರಿತು. ಕೇದಗೆಯ ಪರಾಗರೇಣುಗಳಿಂದ ದುಂಬಿಯ ಕಣ್ಣುಗಳು ಕುರುಡಾದುವು. ಗರಗಸದಂಥ ಎಸಳುಗಳು ರೆಕ್ಕೆಗಳನ್ನು ಕತ್ತರಿಸಿದವು. ದುಂಬಿಗೆ ಪಜೀತಿ- ಇಲ್ಲಿರಲಾರೆ, ಇಲ್ಲಿಂದ ಹೋಗಲಾರೆ ಎಂಬ ಉಭಯಸಂಕಟ. ಜೀವನದಲ್ಲಿ ಎಂಥೆಂಥದೋ ಆಕರ್ಷಣೆಗೊಳಗಾಗಿ ನಾವೂ ಇಂಥದೇ ಪಜೀತಿಗಳನ್ನು ತಂದುಕೊಳ್ಳುತ್ತೇವೆ- ಎಂದು ಈ ಅನ್ಯೋಕ್ತಿ ಸುಭಾಷಿತದ ಗಾಢವಾದ ಅರ್ಥ.

ಡಿವಿಜಿಯವರ ಮಗ ಬಿ.ಜಿ.ಎಲ್.ಸ್ವಾಮಿ 'ಹಸಿರು ಹೊನ್ನು' ಕೃತಿಯಲ್ಲಿ ಕೇದಗೆಯ ಬಗ್ಗೆಯೂ ವಿಸ್ತೃತವಾಗಿ ಬರೆದಿದ್ದಾರೆ: 'ತಮಿಳು ಕವಿಗಳಿಗೆ ಪರಿಚಿತವಾದ ಗಿಡ ಇದು. ಕಾಂಡದ ಹೊರಮೈ ಹತ್ತು ಕಾಲಿನ ಸೀಗಡಿ ಪ್ರಾಣಿಯ ಬೆನ್ನಿನಂತೆ ಒರಟೊರಟಾಗಿದೆಯಂತೆ; ದಳದ ಮುಳ್ಳುಗಳು ಶಾರ್ಕ್ ಮೀನಿನ ತೊಂಡಿಲು ಗರಗಸದಂತೆ; ಗಂಡು ಹೂ ಮೊಗ್ಗು ಮದಕರಿಯ ದಂತದಂತೆ; ಬಿರಿಹೂ ಕುದುರೆಯ ತಲೆಯ ಮೇಲೆ ಎದ್ದಿರುವ ಕೇಶಗುಚ್ಛದಂತೆ. ಇನ್ನೊಬ್ಬ ಕವಿಗೆ ಕೇದಗೆ ಹೂ ಹಂಸಪಕ್ಷಿಯಂತೆ ಕಂಡಿತು. ಕೇದಗೆಯ ಪೊದರು ಹಂಸಗಳನ್ನು ತಳೆಯಿತು ಎಂದೇ ಆಲಂಕಾರಿಕವಾಗಿ ನುಡಿದಿದ್ದಾನೆ. ಪೊದರನ್ನು ಮೊತ್ತವಾಗಿ ನೋಡಿದಾಗ ಅದು ರಾಕ್ಷಸನ ತಲೆಯ ಮೇಲೆ ಬೆಳೆದಿರುವ ಕೇಶರಾಶಿಯಂತಿದ್ದಿತು. ಮುಳ್ಳೆಲೆಗಳು ಸುವಾಸನೆಯನ್ನು ಸೂಸುವ ಸುಮಗಳಿಗೆ ಕಾವಲಾಗಿ ನಿಂತಿರುವಂತೆ ಭಾಸವಾಯಿತು. ಇನ್ನೊಬ್ಬ ಕವಿಗೆ ಹೂವಿಂದ ಹೊಮ್ಮಿದ ವಾಸನೆ ಹಬ್ಬಹಾಡಿಗೆಗಳ ನೆನಪು ತಂದಿತು. ಈ ತಮಿಳು ಕವಿಗಳು ಕೇದಗೆಯ ಪಾದಾದಿ ಕೇಶಾಂತ ವರ್ಣನೆಯನ್ನು ಕೊಟ್ಟಿರುವರಾದರೂ ಹೂವಿನ ಕಂಪಿಗೆ ಮನಸೋತಂತೆ ಕಾಣದು. ಹೂವಿನ ವಾಸನೆಯನ್ನೇನೋ ಕುರಿತಿದ್ದಾರೆ, ಆದರೆ ಅದರ ವರ್ಣನೆಗೆ ಕೈಹಾಕಲಿಲ್ಲ. ಕನ್ನಡ ಕವಿಗಳ ವಿಚಾರಕ್ಕೆ ಬಂದರೆ- ಮುದ್ದಣನು ಅದ್ಭುತರಾಮಾಯಣದಲ್ಲಿ ಶ್ರೀಮತಿಯನ್ನು ವರ್ಣಿಸುವಾಗ ಅವಳ ನಖಗಳನ್ನು ಗರಿಪೂವಂತೆ ಮೊನೆಗೊಂಡುಗುರು ಎಂದಿದ್ದಾನೆ- ಕನ್ನಡನಾಡಿನ ಕಡಲುತೀರ ಪ್ರದೇಶಗಳಲ್ಲಿ ಕೇದಗೆಗೆ ಗರಿ ಹೂ ಎಂಬ ಹೆಸರೂ ಇರುವುದರಿಂದ. ಕೇತಕಿಯ ಬನಗಳಲಿ ಸಂಚರಿಸದಿರು ಚೆಲುವೆ, ಸರ್ಪಮಂದಿರವಂತೆ ಕಂಪಿನೊಡಲು ಎಂದು ಎಚ್ಚರಿಕೆ ಕೊಡುವುದು ನಮ್ಮ ಕವಿಗಳ ವಾಡಿಕೆ. ಕವಿಪರಂಪರೆಯಲ್ಲಿ ಇದೊಂದು ಕವಿಸಮಯವಾಗಿ ನೆಲೆಸಿದೆ. ಕೇದಗೆಯ ಪೊದರಿನಲ್ಲಿ ಮಾತ್ರ ಹಾವು ವಾಸ ಮಾಡುತ್ತದೆಯೆಂಬುದಕ್ಕೆ ಆಧಾರವಾದರೂ ಏನಿದೆ? ಹಾಗೆ ನೋಡಿದರೆ ಕೇದಗೆಯ ಪೊದರೊಂದೇ ಅಲ್ಲ, ಇನ್ನೂ ಎಷ್ಟೋ ಪೊದರುಗಳೂ ಹಾವಿನ ವಾಸಸ್ಥಾನವೇ! ಕೇದಗೆಗೂ ಹಾವಿಗೂ ಯಾವ ಕಾರಣದಿಂದ ನಂಟು ಬಿತ್ತೋ? ಬಹುಶಃ ಕೇದಗೆಯ ಬಿಡಿ ಎಲೆ ನೀಟಾಗಿ ಹಸುರು ಹಾವಿನಂತೆ ಕಾಣುವುದರಿಂದಲೆ? ಅಥವಾ ಕಾಂಡ ರೆಂಬೆಗಳು ಡೊಂಕು ಡೊಂಕಾಗಿ ಬಾಗಿ ಹೆಬ್ಬಾವಿನಂತೆ ಕಾಣುವುದರಿಂದಲೆ? ಅಥವಾ ಕೇದಗೆಯ ಕಂಪಿಗೆ ಹಾವು ಆಕರ್ಷಿತವಾಗುತ್ತದೆಂಬ ಭ್ರಮೆಯಿಂದಲೆ?'

ಆದರೆ ಕೇದಗೆಗೂ ಹಾವಿಗೂ ನಂಟು ಚಾಣಕ್ಯನ ಅರ್ಥಶಾಸ್ತ್ರ ಕಾಲದಿಂದಲೂ ಇದೆ! ಚಾಣಕ್ಯನೀತಿಯಲ್ಲಿ ಕೊನೆಯ ಅಧ್ಯಾಯದ ಕೊನೆಗೆ ಹೀಗೊಂದು ಕೇದಗೆ ಶ್ಲೋಕ ಬರುತ್ತದೆ: 'ವ್ಯಾಲಾಶ್ರಯಾಪಿ ವಿಕಲಾಪಿ ಸಕಂಟಕಾಪಿ। ವಕ್ರಾಪಿ ಪಂಕಿಲಭವಾಪಿ ದುರಾಸದಾಪಿ। ಗಂಧೇನ ಬಂಧುರಸಿ ಕೇತಕಿ ಸರ್ವಜಂತಾ। ರೇಕೋ ಗುಣಃ ಖಲು ನಿಹಂತಿ ಸಮಸ್ತದೋಷಾನ್॥' ಇದರ ಭಾವಾರ್ಥ ಹೀಗಿದೆ: ಎಲೈ ಕೇದಗೆಯೇ, ನೀನು ಸರ್ಪಗಳಿಗೆ ಆಶ್ರಯವನ್ನು ಕೊಟ್ಟಿದ್ದೀಯೆ. ನೀನು ಫಲವತಿಯಲ್ಲ (ಹಣ್ಣುಗಳನ್ನು ಬಿಡುವುದಿಲ್ಲ), ಮೈತುಂಬ ಮುಳ್ಳುಗಳನ್ನು ಹೊಂದಿದ್ದೀಯೆ. ನಿನ್ನ ರೆಂಬೆಕೊಂಬೆಗಳನ್ನು ನೋಡಿದರೆ ತುಂಬ ವಕ್ರಳಾಗಿದ್ದೀಯೆ. ನೀನು ಕೆಸರಲ್ಲಿ ಹುಟ್ಟಿ ಅಲ್ಲೇ ಹೊರಳಾಡುತ್ತೀಯೆ. ನಿನ್ನನ್ನು ಕಷ್ಟಪಟ್ಟು ಹೊಂದಬಹುದಾಗಿದೆ. ಇಷ್ಟೆಲ್ಲ ಅವಗುಣಗಳ ನಿನ್ನಲ್ಲಿದ್ದರೂ ನಿನ್ನಲ್ಲಿರುವ ಪರಿಮಳದಿಂದ ನೀನು ಎಲ್ಲರಿಗೂ ಬೇಕಾದವಳಾಗಿದ್ದೀಯೆ. ಹೀಗೆಯೇ ಮನುಷ್ಯನಲ್ಲಿ ಹಲವು ಅವಗುಣಗಳಿದ್ದರೂ ಕೂಡ ಒಂದೇ ಒಂದು ಗುಣವಿದ್ದರೂ ಅವನು ಜನಪ್ರಿಯನಾಗಬಹುದು!

ಹರಿಹರ ಕವಿಯು ಬರೆದ ಬಸವರಾಜ ದೇವರ ರಗಳೆ ಎಂಬ ಕೃತಿ ಬಸವಣ್ಣನವರ ಜೀವನಚರಿತ್ರೆ ರೀತಿಯದು. ಅದರಲ್ಲಿ ಬಸವಣ್ಣನವರ ಬದುಕಲ್ಲಿ ನಡೆದ ಪವಾಡಗಳ ವರ್ಣನೆ ಬರುತ್ತದೆ. ಅಂಥದೊಂದು ಪವಾಡವೇ ಕೇದಗೆಯ ಕಥೆ. ಹರಿಹರ ಕವಿಯು ಹಳಗನ್ನಡದಲ್ಲಿ ಬರೆದಿದ್ದಕ್ಕೆ ತಳುಕಿನ ವೆಂಕಣ್ಣಯ್ಯನವರು ಹೊಸಗನ್ನಡದಲ್ಲಿ ಬರೆದ ಭಾಷ್ಯದಿಂದ ಆ ಕಥೆಯನ್ನಷ್ಟೇ ಉದ್ಧರಿಸುವುದಾದರೆ- 'ಬಿಜ್ಜಳನ ರಾಜಧಾನಿಗೆ ಆಗಂತುಕನಾಗಿ ಬಂದಿದ್ದ ಬಸವಣ್ಣನು ಕಾಲಕ್ರಮದಲ್ಲಿ ಅತ್ಯುನ್ನತ ಪದವಿಗೇರಿದನು. ಇತ್ತಕಡೆ ಆತನ ಭಕ್ತಿಯೂ ಒಳಗೊಳಗೇ ಬೆಳೆದು ಮಹಿಮಾಸಂಪನ್ನವಾಯಿತು. ಬಿಜ್ಜಳನ ಭಂಡಾರಿಯಾದ ಬಸವಣ್ಣನು ಭಕ್ತಿಭಂಡಾರಿಯೂ ಆದನು. ಆಕಸ್ಮಿಕವಾಗಿ ನಡೆದ ಒಂದು ಘಟನೆಯು ಈತನ ಭಕ್ತಿಯ ಮಹಿಮೆಯನ್ನು ಪ್ರಕಾಶಕ್ಕೆ ತಂದಿತು. ಒಂದು ದಿನ ಬಿಜ್ಜಳನು ಸಭೆಯಲ್ಲಿದ್ದಾಗ ಒಬ್ಬ ಮಾಲೆಗಾರನು ಒಂದು ಕೇದಗೆಯ ಹೂವನ್ನು ತಂದು ಆತನಿಗೆ ಅರ್ಪಿಸಿದನು. ಅರಸನು ಅದನ್ನು ಬಿಚ್ಚಿ ಅದರೊಳಗಣ ಒಂದು ಎಸಳನ್ನು ತನ್ನ ಪಕ್ಕದ ಗದ್ದುಗೆಯಲ್ಲಿ ಕುಳಿತಿದ್ದ ಬಸವಣ್ಣನಿಗೆ ಕೊಟ್ಟನು. ತನಗೆ ದೊರೆತುದನ್ನೆಲ್ಲ ಶಿವಾರ್ಪಣ ಮಾಡುತ್ತಿದ್ದ ಬಸವಣ್ಣನು ತಾನು ಧರಿಸಿದ್ದ ಲಿಂಗಕ್ಕೆ ಆ ಎಸಳನ್ನು ಅರ್ಪಿಸಿದನು. ಬಸವಣ್ಣನ ಉನ್ನತಸ್ಥಿತಿಯನ್ನು ನೋಡಿ ಅಸೂಯೆಗೊಂಡಿದ್ದವರಲ್ಲಿ ಒಬ್ಬನಾದ ನಾರಣಭಟ್ಟನು ಅದನ್ನು ನೋಡಿ- ಶಿವಲಿಂಗಕ್ಕೆ ಕೇದಗೆಯ ಹೂವನ್ನು ಏರಿಸಬಾರದೆಂದು ಶಿವಾಗಮಗಳಲ್ಲಿ ನಿಯಮವಿದೆ. ಅದನ್ನು ಮೀರಿ ಬಸವಣ್ಣನು ಶಿವಾರ್ಪಿತ ಮಾಡಿದ್ದು ತಪ್ಪು ಎಂದು ಆಕ್ಷೇಪವೆತ್ತಿದನು. ಬಸವಣ್ಣನಸುನಗುತ್ತ 'ಎಲೈ ಮರುಳುವಿಪ್ರ, ಎಲೈ ದ್ವಿಜಾಧಮಾ, ಎಲೈ ಕರ್ಮಜಡನೇ, ಕೇಳು. ದೇವಂ ಭಕ್ತರ್ ಕೊಟ್ಟಡೆ ಕೈಕೊಳ್ವನು. ಭೂತೇಶನು ಭಕ್ತರ ಪರಾಧೀನ. ಭಕ್ತರು ಭಕ್ತಿಯಿಂದ ಕೊಟ್ಟಿದ್ದನ್ನು ಪ್ರೀತಿಯಿಂದಲೇ ಸ್ವೀಕರಿಸುತ್ತಾನೆ. ಇದು ದಿಟವಾದ ಮಾತು ಎಂದು ಉತ್ತರಿಸಿದನು. ಈ ಸಂಭಾಷಣೆಗಳನ್ನೆಲ್ಲ ಕೇಳುತ್ತಿದ್ದ ಬಿಜ್ಜಳನು, ಭಕ್ತರು ಕೊಟ್ಟಿದ್ದನ್ನು ಈಶ್ವರನು ಸ್ವೀಕರಿಸುವನೆಂಬುದಕ್ಕೆ ಸಾಕ್ಷಿಯೇನು? ಎಂದು ಕೇಳಿದನು. ಬಸವಣ್ಣನು ತನ್ನ ಅಕ್ಕಪಕ್ಕದ ಮಾಹೇಶ್ವರರ ಕಕ್ಷಪುಟಗಳಲ್ಲಿದ್ದ ಸಜ್ಜೆಗಳನ್ನು ತೆರೆಯಿಸಿ ತೋರಿಸಲು ಆ ಎಲ್ಲ ಲಿಂಗಗಳ ಉತ್ತಮಾಂಗಗಳಲ್ಲಿಯೂ ಅಲ್ಲದೆ ಮಂಗಳವಾಡದ ಮಹಾಲಿಂಗದ ಅಂಘ್ರಿಗಳಲ್ಲಿಯೂ ಬಸವಣ್ಣನು ಅರ್ಪಿಸಿದ ಕೇದಗೆಯ ಎಸಳನ್ನು ಹೋಲುವ ನುಣ್ಣೆಸಳುಗಳಿದ್ದುವು. ಬಿಜ್ಜಳನು ಬಸವಣ್ಣನ ಮಹಿಮೆಗೆ ಮೆಚ್ಚಿ, ಆತನ ಪಾದಕ್ಕೆರಗಿ ಅಂದಿನಿಂದ ಆತನು ತನ್ನ ಭಂಡಾರಿ ಎಂಬುದನ್ನು ಮರೆತು ಸಾಕ್ಷಾತ್ ಸಂಗಮೇಶ್ವರನೆಂದೇ ಭಾವಿಸತೊಡಗಿದನು.'

ಹರಿಹರನ ಸೋದರಳಿಯ ರಾಘವಾಂಕ ಕೇದಗೆಯನ್ನು ಹೇಗೆ ಕಂಡಿದ್ದಾನೆ? ರಾಘವಾಂಕನ ಅತಿಶ್ರೇಷ್ಠ ಕೃತಿರತ್ನವೆನಿಸಿದ ಹರಿಶ್ಚಂದ್ರ ಕಾವ್ಯದಲ್ಲಿ, ವನವರ್ಣನೆಯ ಪದ್ಯವೊಂದರಲ್ಲಿ ಕೇತಕೀವನದ ದೃಶ್ಯಾವಳಿ ಹೀಗೆ ಬರುತ್ತದೆ: 'ವಿರಹಿಗಳ ಚಿತ್ತವಂ ಸೀಳ್ವ ಕಾಮನ ಕೈಯ। ಗರಗಸದ ಕಕ್ಕುಗಳೋ ಕಂತು ಹೊಡೆದಡೆ ಮುನೀ। ಶ್ವರಕಟಿನಮನಮಾಂತು ಧಾರೆಗಳು ಮುರಿದಲಗು ಮುಕ್ಕುಗಳ ಬಳಗವೋ। ಪರಿಮಳದ ಮುಳುವೇಲಿಯೋ ಎನಿಸಿ ಕಂಟಕೋ। ತ್ಕರಭರಿತ ಕೇತಕಿಗಳೊಪ್ಪಿದುವು ಹೊರಗೆ ಶಂ। ಕರವಿರೋಧಿಯನು ನಡುವಿರಿಸಲಮ್ಮದೆ ವನಂ ಪೊರೆಮಡಿಸಿತೆಂಬಂದದಿ॥ ಇದರ ಅರ್ಥವನ್ನು ಶತಾವಧಾನಿ ರಾ.ಗಣೇಶರ ವ್ಯಾಖ್ಯಾನದಿಂದ ತಿಳಿದುಕೊಂಡರೆ ಇನ್ನೂ ಸೊಗಸು. 'ವಿರಹಿಗಳ ಎದೆಯನ್ನು ಸೀಳುವುದಕ್ಕೆ ಇರತಕ್ಕಂಥ ಮನ್ಮಥನ ಕೈಯ ಗರಗಸವೋ ಎಂಬಂತೆ ಕೇದಗೆಯ ಹೂವು ಕಾಣುತ್ತಿದೆ. ತಪಸ್ಸು ಮಾಡುತ್ತಿದ್ದ ಈಶ್ವರನ ಕಠಿನ ಮನಸ್ಸನ್ನು ಸೀಳುವುದಕ್ಕೆ, ಕತ್ತರಿಸುವುದಕ್ಕೆ ಅಂತ ಮನ್ಮಥನು ಪ್ರಯತ್ನ ಮಾಡಿ ಆಗ ಮುರಿದ ಕತ್ತಿಗಳ ತುಂಡುಗಳೋ ಎಂಬಂತೆ ಕೇದಗೆಯ ಎಲೆಗಳು ಕಾಣುತ್ತಿವೆ. ಪರಿಮಳ ತನ್ನಿಂದ ಆಚೆ ಹೋಗಬಾರದೆಂದು ಮುಳ್ಳಿನ ಬೇಲಿ ಮಾಡಿಕೊಂಡಿದೆಯೇನೋ ಎಂಬಂತೆ ತೋರುತ್ತಿದೆ. ಮುಳ್ಳು ತುಂಬಿದ ಕೇದಗೆಗಳು ತೋಟದ ಹೊರಬದಿಯಲ್ಲಿವೆ. ಶಂಕರವಿರೋಧಿಯನ್ನು ನಾವು ಸೇರಿಸಿಕೊಳ್ಳುವುದಿಲ್ಲ ಅಂತ ವನವು ಕೇದಗೆಯನ್ನು ಬಹಿಷ್ಕರಿಸಿದಂತೆ, ಗಡೀಪಾರು ಮಾಡಿದಂತೆ ಇದೆ!'

ಏನಿದು ಕೇದಗೆಗೂ ಶಂಕರನಿಗೂ ಪರಸ್ಪರ ವಿರೋಧ? ಅದೊಂದು ಕುತೂಹಲಕಾರಿ ಕಥೆ. ತ್ರಿಮೂರ್ತಿಗಳ ದರ್ಪದ ಧಗೆಯಲ್ಲಿ ಕೇದಗೆ ಸಿಕ್ಕಿಬಿದ್ದ ಕಥೆ. ಸ್ಕಾಂದ, ಲಿಂಗ, ಕೂರ್ಮಾದಿ ಪುರಾಣಗಳಲ್ಲಿ ಆ ಕಥೆ ಬರುತ್ತದೆ. ತಮ್ಮಲ್ಲಿ ಯಾರು ಹೆಚ್ಚಿನವರು ಎಂದು ಬ್ರಹ್ಮನಿಗೂ ವಿಷ್ಣುವಿಗೂ ಚರ್ಚೆಯಾದಾಗ ಅವರಿಬ್ಬರ ಗರ್ವಭಂಗ ಮಾಡುತ್ತೇನೆಂದು ಶಿವನು ಮಹಾಲಿಂಗಾಕಾರನಾಗಿ, ಒಂದು ದೊಡ್ಡ ಅಗ್ನಿಸ್ತಂಭದಂತೆ ಕಾಣಿಸಿಕೊಂಡನು. ನನ್ನ ತುದಿ ಅಥವಾ ಬುಡವನ್ನು ಮೊದಲು ಕಂಡುಕೊಂಡವರೇ ಶ್ರೇಷ್ಠರು ಎಂದನು. ಅವನ ಮೂಲಚೂಲಗಳನ್ನು ನೋಡುತ್ತೇವೆಂದು ವಿಷ್ಣು ಮತ್ತು ಬ್ರಹ್ಮ ಇಬ್ಬರೂ ಸಂಕಲ್ಪ ಮಾಡಿ, ವರಾಹ ರೂಪದಿಂದ ವಿಷ್ಣು, ಹಂಸ ರೂಪದಿಂದ ಬ್ರಹ್ಮ ಹೋದಾಗ ಆ ಸ್ತಂಭದ ಬೇರು-ತುದಿಗಳನ್ನು ಕಾಣುವುದು ಇಬ್ಬರಿಂದಲೂ ಆಗಲಿಲ್ಲ. ಆಗ ಮೇಲಿಂದ ಬೀಳುತ್ತಿದ್ದ ಒಂದು ಕೇದಗೆಯ ಹೂವನ್ನು ಹಂಸರೂಪಿಯಾಗಿದ್ದ ಬ್ರಹ್ಮನು ಹಿಡಿದು ಕೇದಗೆಗೆ ಪುಸಲಾವಣೆ ಮಾಡಿದನು. ನೀನು ನನ್ನ ಪರವಾಗಿ ಸಾಕ್ಷಿ ಹೇಳು, ಶಿವಲಿಂಗದ ಮೇಲ್ತುದಿಯಲ್ಲಿದ್ದ ನಿನ್ನನ್ನು ನಾನು ತೆಗೆದುಕೊಂಡು ಬಂದೆ ಅಂತ. ಬದಲಾಗಿ ನಿನಗೇನಾದರೂ ಅತಿಶಯವಾದದ್ದನ್ನು ಮಾಡಿಕೊಡುತ್ತೀನಿ. ಆಗಲಿ ಎಂದು ಒಪ್ಪಿಕೊಂಡಿತು ಕೇದಗೆ. ಆಗಲೇ ಅದಕ್ಕೆ ಬ್ರಹ್ಮನು ದಿವ್ಯವಾದ ಪರಿಮಳವನ್ನು ಕೊಟ್ಟಿದ್ದು. ಎಷ್ಟೆಂದರೂ ಸೃಷ್ಟಿಕರ್ತ ಅಲ್ಲವೇ? ಆಮೇಲೆ ಬ್ರಹ್ಮ ಬಂದು ಶಿವನ ಬಳಿ ಹೇಳುತ್ತಾನೆ, ನಾನು ನಿನ್ನ ತಲೆಯ ಮೇಲಿದ್ದ ಈ ಕೇದಗೆ ಹೂವನ್ನು ತಂದಿದ್ದೀನಿ. ಬೇಕಾದರೆ ಅದೇ ಸಾಕ್ಷಿ ಹೇಳುತ್ತೆ ನೋಡು ಅಂತ. ಈನಡುವೆ ವಿಷ್ಣುವಿಗೆ ವರಾಹರೂಪದಲ್ಲಿ ಹೋಗಿ ಲಿಂಗದ ಬುಡ ಕಂಡುಕೊಳ್ಳುವುದು ಸಾಧ್ಯವಾಗಲಿಲ್ಲ, ಆತ ನಿರಾಶನಾಗಿ ಹಿಂದಿರುಗಿದನು. ಶಿವ ನಿಜವಾಗಿಯೂ ಅನಾದಿ-ಅನಂತ ಎಂದು ವಿಷ್ಣು ಒಪ್ಪಿಕೊಂಡನು. ಬ್ರಹ್ಮನಾದರೋ ಚೇಷ್ಟೆ ಮಾಡಿ ಕೇದಗೆಯ ಮುಖಾಂತರ ಸುಳ್ಳು ಸಾಕ್ಷ್ಯವನ್ನು ಹೇಳಿಸಿದನು. ಆಗ ಶಿವನಿಗೆ ನಿಜಾಂಶ ಗೊತ್ತಾಗಿ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು; ಅದೇ ಬ್ರಹ್ಮಕಪಾಲವಾಗಿ ಶಿವನ ಕೈಸೇರಿತು. ಈ ಕೇದಗೆ ಹೂವು ಎಂದೂ ತನ್ನ ಪೂಜೆಗೆ ಅರ್ಹವಾಗಬಾರದು ಎಂದು ಅದಕ್ಕೆ ಶಾಪ ಕೊಟ್ಟನು. ಹೀಗಾಗಿ ಶಿವಪೂಜೆಗೆ ಕೇದಗೆ ಹೂವು ಬಳಸುವುದಿಲ್ಲ ಎಂದು ಸಂಪ್ರದಾಯ. ಆಮೇಲೆ ಶಿವನೇ ಮರುಗಿ ಕೇದಗೆಯ ಮೇಲೆ ದಯತೋರಿದನೋ, ಅಥವಾ ಶಿವಭಕ್ತರು ಕೇದಗೆಯ ಪರವಾಗಿ ವಕಾಲತ್ತು ನಡೆಸಿದರೋ- ಮಹಾಶಿವರಾತ್ರಿಯಂದು ಮಾತ್ರ ಪೂಜೆಯಲ್ಲಿ ಶಿವಲಿಂಗಕ್ಕೆ ಕೇದಗೆ ಏರಿಸಬಹುದು ಎಂದು ಕೂಡ ಕೆಲವೆಡೆ ಆಚರಣೆ ಇದೆ.

ಪುರಾಣಕಾಲದಿಂದ ಆಧುನಿಕ ಕಂಪ್ಯೂಟರ್ ಯುಗಕ್ಕೆ ಬಂದರೆ ಇಲ್ಲೂ, ಅಕ್ಷರಪ್ರಪಂಚದಲ್ಲಿ ಕೇದಗೆ ಕಂಪು ಇದೆ, ಅದೇನು ಗೊತ್ತೇ? ಕಂಪ್ಯೂಟರ್‌ನಲ್ಲಿ, ಯುನಿಕೋಡ್ ರೀತಿಯಲ್ಲಿ ಮುದ್ದಾದ ಕನ್ನಡ ಅಕ್ಷರಗಳನ್ನು ಮೂಡಿಸಲಿಕ್ಕಿರುವ ಒಂದು ಫಾಂಟ್‌ನ ಹೆಸರು ಕೇದಗೆ ಎಂದೇ ಇರುವುದು!

ಕ್ರಿಕೆಟ್, ಭಾರತೀಯರನ್ನು ಬೆಸೆಯುವ ಏಕೈಕ ಧರ್ಮ



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

19 ನವೆಂಬರ್ 2023 ರಂದು ಒಂದು ಲಕ್ಷ ಮೂವತ್ತು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಕುಳಿತುಕೊಳ್ಳುವ ಸಾಮರ್ಥ್ಯ ಹೊಂದಿರುವ ವಿಶ್ವದಲ್ಲೇ ಅತಿ ದೊಡ್ಡ ಕ್ರೀಡಾಂಗಣವಾದ ಗುಜರಾತ್‌ನ ನರೇಂದ್ರ ಮೋದಿ ಸ್ಟೇಡಿಯಂ ಕಿಕ್ಕಿರಿದು ತುಂಬಿತ್ತು, ಈ ಬಾರಿ ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದೇ ಗೆಲ್ಲುತ್ತದೆ ಎನ್ನುವ ದೃಢವಿಶ್ವಾಸ ದೇಶದ ನೂರಾ ನಲವತ್ತು ಕೋಟಿ ಜನರಿಗೂ ಇತ್ತು. ಕಾರಣ, ಇಡೀ ಟೂರ್ನಿಯಲ್ಲಿ ತಂಡ ಹಾಗೆ ಆಡಿಕೊಂಡು ಬಂದಿತ್ತು. ಅನೇಕ ಗಣ್ಯರ ಜತೆಗೆ ಭಾರತ ಮತ್ತು ಆಸ್ಟ್ರೇಲಿಯಾದ ಪ್ರಧಾನಮಂತ್ರಿಗಳು ಮೈದಾನದಲ್ಲಿ ಸ್ವತಃ ಉಪಸ್ಥಿತರಿದ್ದರು. ಭಾರತವು ತವರು ನೆಲದಲ್ಲಿ ಫೈನಲ್ ತಲುಪಲು ಟೂರ್ನಿಯಲ್ಲಿ ಅಭೂತಪೂರ್ವವಾಗಿ ಆಡಿ 10 ಪಂದ್ಯಗಳನ್ನು ಸತತವಾಗಿ ಗೆದ್ದು ಅಜೇಯ ಎನಿಸಿಕೊಂಡಿತ್ತು ಮತ್ತು ತಂಡದ ಎಲ್ಲ ವಿಭಾಗಗಳೂ ಸಮನ್ವಯತೆಯಿಂದ ಅದ್ಭುತವಾದ ಪ್ರದರ್ಶನ ನೀಡುತ್ತಾ ಬಂದಿತ್ತು. ಆದರೆ, ದುರದೃಷ್ಟವಶಾತ್ ಆ ಒಂದು ದಿನ ಮಾತ್ರ ಭಾರತದ್ದಾಗಿರಲಿಲ್ಲ. ಆಸ್ಟ್ರೇಲಿಯನ್ ತಂಡವು ಆರು ವಿಕೆಟ್‌ಗಳಿಂದ ನಿರ್ಣಾಯಕವಾಗಿ ನಮ್ಮದೇ ನೆಲದಲ್ಲಿ ನಮ್ಮನ್ನು ಸೋಲಿಸಿಬಿಟ್ಟಿತ್ತು. ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ ಸೋಲು ಕಂಡು ಮತ್ತೊಮ್ಮೆ ವಿಶ್ವ ಕಪ್ ಗೆಲ್ಲುವ ತಂಡದ ಆಸೆ ಭಗ್ನಗೊಂಡು ಆಟಗಾರರು ನೋವಿನ ಮಡುವಿನಲ್ಲಿ ಮುಳುಗಿದ್ದರು. ಅಂದು ಡ್ರೆಸ್ಸಿಂಗ್ ರೂಮಿಗೆ ಹೋಗಿ ತಂಡದ ಪ್ರತಿಯೊಬ್ಬ ಆಟಗಾರನ ಹೆಸರು ಹೇಳಿ ಭಾರತದ ಪ್ರಧಾನಮಂತ್ರಿಗಳು ಸಂತೈಸಿದ್ದರು. ಈ ವಿಶ್ವಕಪ್ ಮೂಲಕ ನಿಮ್ಮ ಪ್ರತಿಭೆ ಮತ್ತು ಸಂಕಲ್ಪ ದೇಶದ ಗಮನ ಸೆಳೆದಿದೆ. ನೀವು ಉತ್ಸಾಹದಿಂದ ಆಡಿದ್ದೀರಿ ಮತ್ತು ರಾಷ್ಟ್ರಕ್ಕೆ ಅಪಾರ ಹೆಮ್ಮೆ ತಂದಿದ್ದೀರಿ. ಕಪ್ ಗೆಲ್ಲದಿದ್ದರೂ ನೀವು ಶತಕೋಟಿ ಭಾರತೀಯರ ಹೃದಯ ಗೆದ್ದಿದ್ದೀರಿ. ನಾವು ಎಂದೂ ನಿಮ್ಮೊಂದಿಗೆ ಇರುತ್ತೇವೆ ಎಂದು ಮೋದಿಯವರು ದೇಶವಾಸಿಗಳ ಪರವಾಗಿ ತಂಡವನ್ನು ಸಂತೈಸಿದ್ದರು. ಆಟವೆಂದರೆ ಸೋಲು ಗೆಲುವು ಇದ್ದಿದ್ದೇ, ಮನಸ್ಸನ್ನು ಚಿಕ್ಕದು ಮಾಡಿಕೊಳ್ಳಬೇಡಿ ಎನ್ನುತ್ತಾ ದೆಹಲಿಯ ತಮ್ಮ ನಿವಾಸಕ್ಕೆ ತಂಡವನ್ನು ಆಹ್ವಾನಿಸಿ ಅವರು ಹೊರಟಿದ್ದು ಇನ್ನೂ ಕಣ್ಣ ಮುಂದಿದೆ. ಅಂತೂ, ಆ ಸೋಲಿನ ನಂತರ ಇಡೀ ದೇಶ ತಿಂಗಳುಗಟ್ಟಲೇ ಮಂಕಾಗಿ ಬಿಟ್ಟಿತ್ತು. ಹತಾಶ ಭಾವ ಇಡೀ ಭಾರತವನ್ನು ಆವರಿಸಿಬಿಟ್ಟಿತ್ತು. ತಂಡದ ನಾಯಕ ರೋಹಿತ ಶರ್ಮ ಅವರನ್ನೂ ಸೇರಿ ಕೆಲವು ಆಟಗಾರರು ಖಿನ್ನತೆಗೊಳಗಾಗಿ ಮನೆ ಸೇರಿಬಿಟ್ಟಿದ್ದರು. ಸಾಮಾನ್ಯವಾಗಿ ಕ್ರಿಕೆಟ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು 'ಚೋಕರ್ಸ್' ಎಂದು ಕರೆಯಲಾಗುತ್ತದೆ, ಆದರೆ ಕಳೆದ 10 ವರ್ಷಗಳ ದಾಖಲೆಗಳನ್ನು ನೋಡುವಾಗ ಭಾರತ ತಂಡ ಕೂಡ ಇಂತಹುದೇ ಪರಿಸ್ಥಿತಿಯಲ್ಲಿದೆ ಎನ್ನುವುದು ಅರ್ಥವಾಗುತ್ತದೆ. 2014 ರ ಟಿ20 ವಿಶ್ವಕಪ್ ಫೈನಲ್, 2015ರ ಏಕದಿನ ವಿಶ್ವಕಪ್ ಸೆಮಿಫೈನಲ್, 2016 ಟಿ20 ವಿಶ್ವಕಪ್ ಸೆಮಿಫೈನಲ್, 2017 ಚಾಂಪಿಯನ್ಸ್ ಟ್ರೋಫಿ ಫೈನಲ್, 2019 ವಿಶ್ವಕಪ್ ಸೆಮಿಫೈನಲ್, ಗಖಇಫೈನಲ್ 2021 ಮತ್ತು 2023, ಮತ್ತು 2022 ಟಿ20 ವಿಶ್ವ ಸೆಮಿಫೈನಲ್ ಈ ಪ್ರತಿಯೊಂದು ಟೂರ್ನಿಯಲ್ಲೂ ಭಾರತ ತಂಡ ಪ್ರಶಸ್ತಿಗೆ ಅತ್ಯಂತ ಹತ್ತಿರ ಹೋಗಿ ಬರಿಗೈನಲ್ಲಿ ವಾಪಸ್ ಬಂದಿತ್ತು. ಭಾರತ ತಂಡ, ನಿರ್ಣಾಯಕ ಹಂತದಲ್ಲಿ ಒತ್ತಡಗಳನ್ನು ನಿಭಾಯಿಸುವಲ್ಲಿ ವೈಫಲ್ಯ ಅನುಭವಿಸುತ್ತಿದೆ ಎಂದು ಆಗ ವಿಶ್ಲೇಷಿಸಲಾಗಿತ್ತು.

ಜೂನ್ 25, 1983 ಭಾರತೀಯ ಕ್ರಿಕೆಟ್ ಅಭಿಮಾನಿಗಳಿಗೆ ಮರೆಯಲಾಗದ ಐತಿಹಾಸಿಕ ದಿನ. ಏಕೆಂದರೆ, ಅದು ಕಪಿಲ್ ದೇವ್ ನಾಯಕತ್ವದ ಭಾರತ ಕ್ರಿಕೆಟ್ ತಂಡ ತಮ್ಮ ಮೊದಲ ಏಕ ದಿನ ವಿಶ್ವಕಪ್ ಟ್ರೋಫಿ ಗೆದ್ದ ಅವಿಸ್ಮರಣೀಯ ದಿನವಾಗಿದೆ. ಭಾರತ ತಂಡವು 1983ರಲ್ಲಿ ಚೊಚ್ಚಲ ವಿಶ್ವಕಪ್ ಗೆಲುವಿನೊಂದಿಗೆ ಕ್ರಿಕೆಟ್ ಜಗತ್ತನ್ನೇ ಅಚ್ಚರಿಗೊಳಿಸಿದ್ದ ದಿನಕ್ಕೆ ಇದೀಗ 41ವರ್ಷಗಳು ಸಂದಿವೆ. ಈ ಸಂದರ್ಭದಲ್ಲಿ ಭಾರತೀಯರ ಸೋಲಿನ ಹಳೆಯ ನೋವುಗಳನ್ನೆಲ್ಲ ಮರೆಯುವಂತೆ ಮತ್ತು 1983ರ ವಿಶ್ವ ವಿಜಯವನ್ನು ಪುನಃ ಸ್ಮರಣೆಮಾಡುವಂತೆ ಮಾಡಿದ್ದು ಬಾರ್ಬಡೋಸ್‌ನ ಕೆನ್ಸಿಂಗ್ಟನ್ ಓವಲ್‌ನಲ್ಲಿ ನಡೆದ ಟಿ20 ವಿಶ್ವಕಪ್ 2024 ರ ಅಂತಿಮ ಪಂದ್ಯದಲ್ಲಿ ಭಾರತದ ಅವಿಸ್ಮರಣೀಯ ಗೆಲುವು. ಪಾಕಿಸ್ತಾನ, ಆಸ್ಟ್ರೇಲಿಯಾ, ಇಂಗ್ಲೆಂಡ್ ದೇಶಗಳ ತಂಡಗಳ ಕುರಿತ ಹಳೆಯ ಸೇಡನ್ನೆಲ್ಲ ತೀರಿಸಿ ಅಂತಿಮ ಹಂತಕ್ಕೆ ತಲುಪಿದ್ದ ಭಾರತ ತಂಡ, ಕೇವಲ 7 ರನ್‌ಗಳಿಂದ ಅಂದು ದಕ್ಷಿಣ ಆಫ್ರಿಕಾವನ್ನು ರೋಚಕವಾಗಿ ಸೋಲಿಸಿ ಭಾರತ ಪ್ರತಿಷ್ಠಿತ ಐಸಿಸಿ ಪ್ರಶಸ್ತಿಯೊಂದನ್ನು ಮುಡಿಗೇರಿಸಿಕೊಂಡಿತು. ಈ ಗೆಲುವಿನಿಂದ ಕ್ರಿಕೆಟ್ ಹುಚ್ಚು ಭಾರತಾದ್ಯಂತ ಮತ್ತೊಮ್ಮೆ ಆವರಿಸಿಬಿಟ್ಟಿತು. ಸಂಭ್ರಮಾಚರಣೆಗಳು ದೇಶದ ಮೂಲೆ ಮೂಲೆಗಳಲ್ಲಿ ನಡೆದವು. ಜಗತ್ತಿನಾದ್ಯಂತ ನಗರ ಕೇಂದ್ರಗಳಲ್ಲಿ ನೆರೆದಿದ್ದ ಅಭಿಮಾನಿಗಳ 'ಇಂಡಿಯಾ, ಇಂಡಿಯಾ' ಎಂಬ ಘೋಷಣೆಗಳು ಆಕಾಶವನ್ನು ಮುಟ್ಟುವಂತಿತ್ತು. ವಿಜೇತ ತಂಡ ಭಾರತಕ್ಕೆ ಮರಳಿದಾಗ ಅಭೂತಪೂರ್ವ ಸ್ವಾಗತವನ್ನು ನೀಡಿ ವಾರದ ನಂತರ ವಿಜಯವನ್ನು ಮತ್ತೊಮ್ಮೆ ಸಂಭ್ರಮಿಸಲಾಯಿತು. ದೇಶದ ನಾಲ್ಕೂ ದಿಕ್ಕುಗಳ ಜನ ಸಮಾನ ಭಾವುಕರಾಗಿ ತಮಗೇ ಅರಿವಿಲ್ಲದೇ ಕ್ರಿಕೆಟ್ ಎಂಬ ಸಂವೇದನೆಯ ಸೆಲೆಯಿಂದ ದೇಶವನ್ನೇ ಒಂದಾಗಿ ಬಿಗಿದುಬಿಟ್ಟಿದ್ದರು. ಭಾರತದಲ್ಲಿ ಕ್ರಿಕೆಟ್ ಎನ್ನುವುದು ಎಲ್ಲರನ್ನೂ ಒಂದಾಗಿಸುವ ಒಂದು ಧರ್ಮ ಎನ್ನುವ ಮಾತಿದೆ. ರಾಜಕೀಯ, ಧರ್ಮ, ಜಾತಿ- ಪಂಥ, ಹಿಂದುಳಿದವರು, ಮುಂದುವರಿದವರು ಎನ್ನುವ ವಿವಿಧ ವೈರುಧ್ಯಗಳಿಂದ ವಿಭಜನೆಯಾಗಿರುವ ಆಗಾಗ ಭಾಷಾವಾರು ಗಲಭೆಗಳಿಂದ ಒಡೆದಿರುವ ಭಾರತವನ್ನು ಒಂದಾಗಿ ಬೆಸೆಯುವ ಶಕ್ತಿ ಇದ್ದರೆ ಅದು ಕ್ರಿಕೆಟ್‌ಗೆ ಮಾತ್ರ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು.

ಟೂರ್ನಿಯ ಅಂತಿಮ ಹಂತವನ್ನು ತಲುಪಲು ಭಾರತ ಮತ್ತು ದಕ್ಷಿಣ ಆಫ್ರಿಕಾ ಎರಡೂ ತಂಡಗಳ ಪರಿಶ್ರಮ ಅಪರಿಮಿತವಾಗಿತ್ತು. ಅಜೇಯವಾಗಿ ಸಾಗಿಬಂದ ಎರಡು ಬಲಿಷ್ಠ ತಂಡಗಳು ಪ್ರಶಸ್ತಿಗಾಗಿ ಬಾರ್ಬಡೋಸ್‌ನಲ್ಲಿ ಅಂದು ಸೆಣಸುತ್ತಿದ್ದವು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡ ಆರಂಭಿಕ ಕುಸಿತದಿಂದ ಕಂಗೆಡದೇ ಇಪ್ಪತ್ತನೇ ಓವರ್ ಅಂತ್ಯದಲ್ಲಿ ಗೌರವಪೂರ್ಣವಾದ ಮೊತ್ತವನ್ನೇ ಸೇರಿಸಿತ್ತು. ಆದರೆ, ದಕ್ಷಿಣ ಆಫ್ರಿಕಾ ಪ್ರಾರಂಭಿಕವಾಗಿ ಸ್ವಲ್ಪ ಎಡವಿದರೂ, ಕ್ಲಾಸೆನ್ ಬಂದ ಮೇಲೆ ಅವರ ವಿಜಯ ಹಸಿಗೋಡೆಯ ಮೇಲಿನ ಬರಹದಷ್ಟು ನಿಚ್ಚಳವಾಗಿಬಿಟ್ಟಿತ್ತು. ಸ್ಪಿನ್, ವೇಗ ಯಾವುದೇ ರೀತಿಯ ಬೌಲಿಂಗ್ 'ಕ್ಲಾಸೆನ್' ಅವರನ್ನು ಬಾಧಿಸುತ್ತಿರಲಿಲ್ಲ, ಯಾವುದೇ ಚೆಂಡನ್ನು ಲೀಲಾಜಾಲವಾಗಿ ಬೌಂಡರಿ ಗೆರೆ ದಾಟಿಸುತ್ತಿದ್ದ ಅವನ ಅಂದಿನ ಆಟ, ಎದುರಿಗಿರುವವನ ನೈತಿಕ ಸ್ಥೈರ್ಯವನ್ನೇ ಅಲುಗಾಡಿಸುವಂತಿತ್ತು. ಅಕ್ಷರ್ ಪಟೇಲ್ ಅವರ ನಿಧಾನ ಗತಿಯ ಚಂಡುಗಳನ್ನೂ ಬೌಂಡರಿ ಗೆರೆ ದಾಟಿಸಿ 6ರನ್ ಪಡೆಯುತ್ತಿದ್ದ 'ಕ್ಲಾಸೆನ್' ಓವರ್ ಒಂದರಲ್ಲೇ 22 ರನ್ ಬಾಚಿಕೊಂಡಾಗ ನಮ್ಮ ದೇಶದ ಅನೇಕ ಮನೆಗಳಲ್ಲಿ ಟಿವಿ ಬಂದ್ ಆಗಿರಲಿಕ್ಕೆ ಸಾಕು. ಅವನ ವಿಕೆಟ್ ಎತ್ತಲು ನಮ್ಮ ತಂಡದ ಉಪಾಯದ ಬುಟ್ಟಿ ಬರಿದಾಗಿದ್ದಾಗ ದೇವರಂತೆ ಬಂದ ನಮ್ಮ ಪಾಂಡ್ಯ, ಅನಿರೀಕ್ಷಿತವಾಗಿ 'ಕ್ಲಾಸೆನ್' ವಿಕೆಟ್ ಕಿತ್ತುಬಿಟ್ಟ. ಅಲ್ಲಿಂದ ನಮ್ಮ ತಂಡದ ಗ್ರಹಗತಿಯೇ ಬದಲಾಗಿಬಿಟ್ಟಿತು ನೋಡಿ! ನಂತರ ಬಂದವ ಇನ್ನೊಬ್ಬ ದೈತ್ಯ 'ಕಿಲ್ಲರ್' ಎಂದೇ ಖ್ಯಾತನಾದ ಮಿಲ್ಲರ್. ಅವನೂ ಕ್ಲಾಸೆನ್‌ಗೆ ಕಡಿಮೆ ಏನೂ ಇರಲಿಲ್ಲ, ಆದರೆ, ಪಾಂಡ್ಯ ಎಸೆದ ಫುಲ್ಟಾಸ್ ಚಾಲನ್ನು ಸಿಕ್ಸರ್‌ಗಾಗಿ ನೇರವಾಗಿ ಮೇಲಕ್ಕೆ ಎತ್ತಿದ ನೋಡಿ! ಎಲ್ಲರ ಹೃದಯ ಬಡಿತ ಕ್ಷಣಕಾಲ ನಿಲ್ಲುವಂತಾಗಿತ್ತು. ಎಲ್ಲಿಂದಲೋ ಓಡಿಬಂದ ನಮ್ಮ ಸೂರ್ಯಕುಮಾರ ಚೆಂಡನ್ನು ಹಿಡಿದು 'ಸಿಕ್ಸ್'ಗೆ ಹೋಗಬಹುದ್ದನ್ನು ತಪ್ಪಿಸಿದ್ದು ಮಾತ್ರವಲ್ಲದೇ ಪವಾಡ ಸದೃಶವಾಗಿ ಕ್ಯಾಚ್ ಆಗಿ ಪರಿವರ್ತಿಸುವ ಮೂಲಕ 'ಕ್ಯಾಚಸ್ ವಿನ್ ಮ್ಯಾಚಸ್' ಎನ್ನುವ ಮಾತನ್ನು ಮತ್ತೊಮ್ಮೆ ಸತ್ಯವಾಗಿಸಿಬಿಟ್ಟ! 1983ರಲ್ಲಿ ವಿಂಡೀಸ್ ತಂಡವನ್ನು ಗೆಲುವಿನ ದಡಕ್ಕೆ ಸಾಗಿಸುತ್ತಿದ್ದ ವಿವಿಯನ್ ರಿಚರ್ಡ್ಸ್ ಅವರು ಬಾರಿಸಿದ ಚೆಂಡನ್ನು ಕಪಿಲ್ ಹಿಮ್ಮುಖವಾಗಿ ಓಡುತ್ತ ಕೈಯಲ್ಲಿ ಭದ್ರಪಡಿಸಿಕೊಂಡು ಪಂದ್ಯದ ಗತಿಯನ್ನೇ ಬದಲಿಸಿದಂತೆ ಸೂರ್ಯನ ಅಂತಿಮ ಸಮಯದ ಪ್ರಜ್ಞೆ ಮೆರೆದು ಹಿಡಿದ ಈ ಐತಿಹಾಸಿಕ ಕ್ಯಾಚ್ ಕೂಡಾ ಪಂದ್ಯದ ಫಲಿತಾಂಶ ಭಾರತದ ಕಡೆಗೆ ಜಾರುವಂತೆ ಮಾಡಿತ್ತು. 2007 ರ ಟಿ 20 ವಿಶ್ವಕಪ್‌ನ ಪಾಕಿಸ್ತಾನದ ವಿರುದ್ಧದ ಅಂತಿಮ ಪಂದ್ಯದ ಗೆಲುವೂ ಶ್ರೀಶಾಂತ್ ಹಿಡಿದ ಕ್ಯಾಚ್‌ನಿಂದಲೇ ನಮ್ಮೆಲ್ಲರ ನೆನಪಿನಲ್ಲಿ ಈಗಲೂ ಉಳಿದಿದೆ.

ಬಾರ್ಬಡೋಸ್‌ನಲ್ಲಿ ಭಾರತವು ದಕ್ಷಿಣ ಆಫ್ರಿಕಾವನ್ನು 'ನೇಲ್-ಬೈಟರ್'ನಲ್ಲಿ ಸೋಲಿಸಿದ ಕ್ಷಣ ಎರಡು ತಂಡಗಳ ಆಟಗಾರರ ಕಣ್ಣಾಲಿಗಳಲ್ಲಿ ನೀರು ತುಂಬುವಂತೆ ಮಾಡಿತ್ತು. ಭಾರತೀಯ ಆಟಗಾರರು ಆನಂದ ದಿಂದ ಕಣ್ಣೀರಾದರೆ, ದಕ್ಷಿಣ ಆಫ್ರಿಕದವರು ತಮ್ಮ ಮೂವತ್ತೂರು ವರ್ಷಗಳಿಂದ ಮುಂದುವರೆದ ದೌರ್ಭಾಗ್ಯವನ್ನು ನೆನೆದು ಕಣ್ಣೀರಾಗಿರ ಬೇಕು. ಉಭಯ ತಂಡಗಳ ಈ ಭಾವುಕ ಸ್ಥಿತಿಯನ್ನು ನೋಡಿ ವೀಕ್ಷಕರ ಕಣ್ಣಾಲಿಗಳೂ ಒದ್ದೆಯಾದವು. ಭಾರತದ ತಂಡದ ಆಟಗಾರರು ಮಕ್ಕಳಂತೆ ಕುಣಿದು ಕುಪ್ಪಳಿಸಿ ಆ ಕ್ಷಣವನ್ನು ಆನಂದಿಸಿದರು. ಉಳಿದವರನ್ನು ಬಿಡಿ, ಸದಾ ಸ್ಥಿತಪ್ರಜ್ಞನಂತೆ ಇರುತ್ತಿದ್ದ ತರಬೇತುದಾರ ರಾಹುಲ್ ದ್ರಾವಿಡ್ ಕೈಗೆ ಟ್ರೋಫಿಯನ್ನು ವಿರಾಟ್ ತಂದು ನೀಡಿದ್ದೇ ತಡ, ಅಕ್ಷರಶಃ ಹುಚ್ಚನಂತೆ ಮೈಮರೆತು ಕಿರುಚಾಡಿಬಿಟ್ಟಿದ್ದ ಆತ. ಸೋತ ಭಾರತ ತಂಡವನ್ನು ಅಂದು ಸಂತೈಸಿ ಮನೆಗೆ ಆಮಂತ್ರಣ ನೀಡಿದ್ದ ಪ್ರಧಾನಿ ಮೋದಿಯವರ ಮನೆಗೆ ಬರಿಗೈನಿಂದ ಹೋಗದೇ, ಸೊತು ವರ್ಷ ತುಂಬುವುದರೊಳಗೆ ಹಠ ಹೊತ್ತು ಮತ್ತೊಂದು ವಿಶ್ವ ಕಪ್ ಪಾರಿತೋಷಕದ ಜತೆಗೆ ತೆರಳಿ, ಅದನ್ನು ಅವರ ಕೈಗಿತ್ತ ಧನ್ಯತೆಯ ಕ್ಷಣ ನಿಜಕ್ಕೂ ಸ್ಮರಣೀಯವಾಗಿತ್ತು. ಇನ್ನು, ಭಾರತದ ಬೌಲರುಗಳು ಚಂಡನ್ನು ವಿರೂಪ ಮಾಡಿದರು, ಸೂರ್ಯನ ಕ್ಯಾಚ್, ಕ್ಲೀನ್ ಆಗಿರಲ್ಲ, ಈ ಪಂದ್ಯ 'ಫಿಕ್ಸ್' ಆಗಿತ್ತು ಮುಂತಾಗಿ ಸಾಮಾಜಿಕ ಜಾಲತಾಣಗಳಲ್ಲಿ ಬಾಯಿ ಹರಿ ಬಿಡುವ ಮೂರ್ಖರಿಗೇನೂ ಕಡಿಮೆ ಇರಲಿಲ್ಲ. ಎರಡೂ ತಂಡಗಳ ಆಟಗಾರರ ಕಣ್ಣಾಲಿಗಳಲ್ಲಿ ನೀರು ನೋಡಿದ ಮೇಲೆಯೂ, ಈ ಪಂದ್ಯದ ಫಲಿತಾಂಶ ಮೊದಲೇ ತೀರ್ಮಾನ ವಾಗಿತ್ತು ಎನ್ನುವ ಪ್ರಭೃತಿಗಳಿಗೆ ನಮ್ಮದೊಂದು ದಿವ್ಯವಾದ ಧಿಕ್ಕಾರವಿರಲಿ ಅಷ್ಟೆ.

(ಲೇಖಕರು: ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಸಾಧಾರಣ ಜನಾದೇಶಕ್ಕೆ ಸಾಕ್ಷಿಯಾದ ಮೋದಿ 3.0

ವಿಶ್ಲೇಷಣೆ

ಪ್ರಕಾಶ್ ಶೇಷರಾಘವಾಚಾರ್
sprakashbjpgmail.com

1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಗಳಿಸಿದಾಗ ಅಂದು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರುರವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಎಲ್ಲ ಪಕ್ಷಗಳ ನಾಯಕರನ್ನೊಳಗೊಂಡ ರಾಷ್ಟ್ರೀಯ ಸರಕಾರವು ರಚನೆಯಾಯಿತು.

ಸ್ವಾತಂತ್ರ್ಯ ಬಂದು ಐದು ವರ್ಷದ ನಂತರ 1952ರಲ್ಲಿ ಮೊಟ್ಟ ಮೊದಲ ಸಾವರ್ತ್ರಿಕ ಚುನಾವಣೆ ನಡೆಯಿತು. ಜವಾಹರಲಾಲ್ ನೆಹರು ಅವರನ್ನು ಎದುರಿಸುವ ವರ್ಚಸ್ವೀ ನಾಯಕತ್ವ ಯಾರಿಗೂ ಇರಲಿಲ್ಲ. ಚುನಾವಣೆಯಲ್ಲಿ 489 ಸೀಟುಗಳಿಗೆ ಕಾಂಗ್ರೆಸ್ 364 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ವಿಶೇಷವೆಂದರೆ ಎರಡನೆಯ ಸ್ಥಾನವನ್ನು ಪಕ್ಷೇತರರು ಪಡೆದಿದ್ದರು.

1957 ರ ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ 494 ಸ್ಥಾನದಲ್ಲಿ 371 ಸ್ಥಾನಗಳಲ್ಲಿ ಜಯಭೇರಿ ಬಾರಿಸಿರುತ್ತಾರೆ. ಕಾಂಗ್ರೆಸ್ ಮತ್ತು ನೆಹರು ಅವರ ಪಾರಮ್ಯ ಎರಡನೆಯ ಬಾರಿಯು ಅಬಾಧಿತವಾಗಿರುತ್ತದೆ. ಕಾಂಗ್ರೆಸ್ ಕಳೆದ ಚುನಾವಣೆಗಿಂತ ಎರಡನೆಯ ಬಾರಿ ಹೆಚ್ಚಿನ ಏಳು ಸ್ಥಾನ ಗಳಿಸಿರುತ್ತದೆ.

1962 ರಲ್ಲಿ ನಡೆದ ಮೂರನೆಯ ಚುನಾವಣೆಯಲ್ಲಿ ನೆಹರುರವರು 494 ಸ್ಥಾನಗಳ ಪೈಕಿ 361 ಸ್ಥಾನಗಳಲ್ಲಿ ಯಶಸ್ಸು ಕಂಡಿರುತ್ತಾರೆ. ಕಳೆದ ಬಾರಿಗಿಂತ ತುಸು ಕಡಿಮೆಯಾಗಿದ್ದರು ಶೇ.70 ಕ್ಕೂ ಹೆಚ್ಚು ಸ್ಥಾನ ಅವರ ಪಾಲಾಗಿರುತ್ತದೆ. ಮೂರನೆಯ ಬಾರಿಯು ಸಹ ನೆಹರು ರವರನ್ನು ಸೋಲಿಸುವ ಪಕ್ಷವಾಗಲಿ ಅಥವಾ ನಾಯಕ ರಾಗಲಿ ಇರಲಿಲ್ಲ. ಎರಡನೆಯ ಬಾರಿ ಗೆದ್ದ ಮೇಲೆ ಪ್ರಾದೇಶಿಕ ನಾಯಕತ್ವ ಮೊಳಕೆಯೊಡಿಯಲು ಆರಂಭ ವಾಗಿರುತ್ತದೆ. 1956 ರಲ್ಲಿ ಕೇರಳದಲ್ಲಿ ಈ.ಎ.ಎಸ್. ನಂಬೂದರಿಪಾದ್ ನೇತೃತ್ವದಲ್ಲಿ ಮೊಟ್ಟಮೊದಲ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬರುತ್ತದೆ. ಆದರೆ ನೆಹರು ರವರು 1959 ರಲ್ಲಿ ಕೇರಳ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರುತ್ತಾರೆ. ಚುನಾಯಿತ ಸರಕಾರ ವನ್ನು ವಜಾ ಮಾಡುವ ಪರಂಪರೆಗೆ ಬೀಜಾಂಕುರವಾಗಿ ಮುಂದಿನ ಐವತ್ತು ವರ್ಷದಲ್ಲಿ ನೂರಕ್ಕೂ ಹೆಚ್ಚು ಸರಕಾರ ಗಳನ್ನು ಕೆಡವಿದ ಕುಖ್ಯಾತಿ ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ.

ಇದೇ ವೇಳೆ ಮದ್ರಾಸ್ ಪ್ರಾಂತ್ಯದಲ್ಲಿ ದ್ರಾವಿಡ ಚಳವಳಿಯು ಬೇರೂರ ತೊಡಗಿತ್ತು. ಅವರ ಹಿಂದಿ ವಿರೋಧ ಮತ್ತು ಬ್ರಾಹ್ಮಣರ ದ್ವೇಷ ಕಾಂಗ್ರೆಸ್‌ಗೆ ಸವಾಲೊಡ್ಡಲು ತೊಡಗಿತ್ತು. 1959 ರಲ್ಲಿ ಹಿರಿಯ ನಾಯಕ ರಾಜಾಜಿಯವರು ಕಾಂಗ್ರೆಸ್ ತೊರೆದು ಸ್ವತಂತ್ರ ಪಕ್ಷವನ್ನು ಸ್ಥಾಪನೆ ಮಾಡುತ್ತಾರೆ. ನೆಹರು ನಾಯಕತ್ವಕ್ಕೆ ಅಲುಗಾಡಿಸುವಷ್ಟು ಸವಾಲಾಗದಿದ್ದರು ಅವರ ವಿರುದ್ಧ ಧ್ವನಿಯೆತ್ತುವ ನಾಯಕತ್ವ ತಲೆಯೆತ್ತಲು ಆರಂಭವಾಯಿತು.

ತಮ್ಮ ಮೂರನೆಯ ಅವಧಿಯಲ್ಲಿ ನೆಹರುರವರು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಚೀನಾ ಜತೆಯ ಯುದ್ಧದ ಸೋಲು ಅವರನ್ನು ಜರ್ಝರಿತಗೊಳಿಸುತ್ತದೆ. ಹಲವಾರು ಉಪಚುನಾವಣೆಗಳಲ್ಲಿ ಸೋಲಾಗುತ್ತದೆ. ದೇಶದಲ್ಲಿ ಜೆ. ಬಿ. ಕೃಪಲಾನಿ, ರಾಮಮನೋಹರ ಲೋಹಿಯಾ ಮತ್ತು ದೀನ ದಯಾಳ್ ಉಪಾಧ್ಯಾಯರವರ ಪ್ರಭಾವ ವಿಸ್ತಾರವಾಗ ತೊಡಗಿದ್ದು ಈ ಅವಧಿಯಲ್ಲಿಯೇ.

ಚೀನಾದೊಂದಿಗೆ ಯುದ್ಧದಲ್ಲಿ ಪರಾಭವಗೊಂಡಿದ್ದು ನೆಹರುರವರನ್ನು ಅವರನ್ನು ಹಣ್ಣು ಮಾಡಿಬಿಡುತ್ತದೆ. ಅವರಲ್ಲಿದ್ದ ಮೊದಲಿನ ಹೊಳಪು ಮಂಕಾಗಿ ಮಾನಸಿಕವಾಗಿ ಕುಗ್ಗಿ ಹೋಗಿರುತ್ತಾರೆ. 1964 ಮೇ 27ರಂದು ನೆಹರುರವರು ನಿಧನರಾಗುತ್ತಾರೆ. ವಿಷಾದವೆಂದರೆ ಅವರ ಹದಿನೇಳು ವರ್ಷದ ಆಳ್ವಿಕೆಯು ಹಲವಾರು ಹಿನ್ನೆಡೆಗಳೊಂದಿಗೆ ಅಂತ್ಯವಾಗುತ್ತದೆ.

ಇಂದಿರಾಗಾಂಧಿಯವರು ತಮ್ಮ ತಂದೆಯು ಮರಣಿಸಿದ ನಂತರ ಏಕ್ ದಂ ಅವರ ಸ್ಥಾನಕ್ಕೆ ಲಗ್ಗೆ ಹಾಕುವುದಿಲ್ಲ. ಲಾಲ್ ಬಹದ್ದೂರ್ ಶಾಸ್ತ್ರಿ ಸಂಪುಟದಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗುತ್ತಾರೆ. 1966ರಲ್ಲಿ ಶಾಸ್ತ್ರಿಯವರು ತಾಷ್ಕೆಂಟಿನಲ್ಲಿ ಅಕಾಲಿಕವಾಗಿ ಮೃತಪಟ್ಟಾಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಕಾಮರಾಜ್ ರವರ ಜಾಣ್ಮೆಯ ರಾಜಕೀಯ ತಂತ್ರದಿಂದ ಮೊರಾರ್ಜಿ ದೇಸಾಯಿಯ ವರನ್ನು ಪಕ್ಕಕ್ಕೆ ಸರಿಸಿ ಇಂದಿರಾರವರನ್ನು ಪ್ರಧಾನಿ ಪಟ್ಟಕ್ಕೇರಿಸುತ್ತಾರೆ.

ಇಂದಿರಾ ಶಕೆಯು ಮೂರು ಹಂತದಲ್ಲಿ ನೋಡ ಬೇಕಾಗುತ್ತದೆ. 1966 ರಿಂದ 67 ಅವರ ತಂದೆಯವರ ಜನಾದೇಶದ ಮೇಲೆ ಆಡಳಿತ ನಡೆಸುತ್ತಾರೆ. 1967ರಲ್ಲಿ ಇವರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 283 ಸ್ಥಾನವನ್ನು ಗೆಲ್ಲುತ್ತದೆ. ಆದರೆ 1962 ರಲ್ಲಿ ಜಯಗಳಿಸಿದ್ದ 361 ಸೀಟಿನಿಂದ 283 ಕ್ಕೆ ಕಾಂಗ್ರೆಸ್ ಬಲ ಕುಗ್ಗುತ್ತದೆ.

ಇಂದಿರಾ ಗಾಂಧಿಯವರು ಮೊಟ್ಟ ಮೊದಲ ಬಾರಿಗೆ 1971 ರಲ್ಲಿ ಮಧ್ಯಂತರ ಚುನಾವಣೆಯನ್ನು ಘೋಷಿಸುತ್ತಾರೆ. 'ಗರೀಬಿ ಹಟಾವೋ' ಘೋಷಣೆಯಡಿಯಲ್ಲಿ ನಡೆದ ಚುನಾವಣೆಯಲ್ಲಿ ಇಂದಿರಾರವರು 521 ಸ್ಥಾನಕ್ಕೆ 352 ರಲ್ಲಿ ಅಭೂತಪೂರ್ವ ಗೆಲುವು ಸಾಧಿಸುತ್ತಾರೆ. ದುರಾದೃಷ್ಟವಶಾತ್ ಅವರ ಈ ಗೆಲುವು ಅನೇಕ ಪ್ರಜಾಪ್ರಭುತ್ವ ವಿರೋಧಿ ನಡೆಗೆ ಕುಖ್ಯಾತಿ ಪಡೆಯುತ್ತದೆ.

1980 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರು ಜನತಾ ಪಾರ್ಟಿಯನ್ನು ಸೋಲಿಸಿ 377 ಸ್ಥಾನ ಗೆದ್ದು ಮೂರನೆಯ ಬಾರಿ ಮತ್ತೆ ಅಧಿಕಾರ ಗದ್ದುಗೆಯ ಮೇಲೆ ವಿರಾಜಮಾನರಾಗುತ್ತಾರೆ. 1984 ರಲ್ಲಿ ಅವರ ಅಂಗರಕ್ಷಕರಿಂದ ಅಮಾನುಷವಾಗಿ ಹತ್ಯೆಯಾಗಿ ಹದಿನೈದು ವರ್ಷದ ಇಂದಿರಾ ಯುಗವು ದುರಂತದಲ್ಲಿ ಅಂತ್ಯವಾಗುತ್ತದೆ.

ಇಂದಿರಾ ಕಾಲಾವಧಿಯು ಭಾರತದ ರಾಜಕಾರಣದಲ್ಲಿ ಅನೇಕ ಐತಿಹಾಸಿಕ ಬದಲಾವಣೆಗಳನ್ನು ಕಂಡಿತು. ಸಮಾಜವಾದ ಆರ್ಥಿಕ ನೀತಿಯು ಇವರ ಮೂಲ ಮಂತ್ರವಾಗಿತ್ತು. ಕಾಂಗ್ರೆಸ್ ಹಿರಿಯ ನಾಯಕರಿಗೆ ಸಡ್ಡು ಹೊಡೆದು ಪಕ್ಷವನ್ನೇ ಇಬ್ಭಾಗ ಮಾಡಿ ಕಾಂಗ್ರೆಸ್ (ಆಡಳಿತ) ಎಂದು ಹೊಸ ಪಕ್ಷವನ್ನು ಹುಟ್ಟು ಹಾಕಿದರು. ಜನಪ್ರಿಯತೆ ಗಳಿಸಲು ರಾಷ್ಟ್ರೀಕರಣ ಮಂತ್ರವನ್ನು ಜಪಿಸಿದ ಕಾಲವಿದು.

1969 ರಲ್ಲಿ ಹದಿನಾಲ್ಕು ಖಾಸಗಿ ಬ್ಯಾಂಕ್‌ಗಳು ರಾಷ್ಟ್ರೀಕರಣವಾಗುತ್ತದೆ. 1970 ರಲ್ಲಿ ರಾಜಧನ ರದ್ದತಿ ಮಾಡಿ ಮಹಾರಾಜರ ದರ್ಬಾರಿಗೆ ಅಂತ್ಯ ಹೇಳುತ್ತಾರೆ. 1971ರಲ್ಲಿ ಗಾಂಧಿಯವರು ಕಲ್ಲಿದ್ದಲು, ಉಕ್ಕು, ತಾಮ್ರ, ಸಂಸ್ಕರಣೆ, ಹತ್ತಿ, ಜವಳಿ ಮತ್ತು ವಿಮಾ ಉದ್ಯಮಗಳನ್ನು ರಾಷ್ಟ್ರೀಕರಣಗೊಳಿಸುತ್ತಾರೆ.

ಈ ಎಲ್ಲ ಉಪಕ್ರಮದಿಂದ ಅವರು ಜನಪ್ರಿಯತೆಯ ಉತ್ತುಂಗವನ್ನು ತಲುಪಿರುತ್ತಾರೆ. ಆದರೆ ಚುನಾವಣಾ ಅಕ್ರಮದ ಮೊಕದ್ದಮೆಯಲ್ಲಿ ಅಲಹಾಬಾದ್ ಹೈಕೋರ್ಟ್ ಇವರ ಲೋಕಸಭಾ ಸ್ಥಾನವನ್ನು ಅನೂರ್ಜಿತಗೊಳಿಸಿದಾಗ ಅಧಿಕಾರ ಉಳಿಸಿಕೊಳ್ಳಲು ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಿ ಸರ್ವಾಧಿಕಾರಿಯಾಗಿ ಬದಲಾಗುತ್ತಾರೆ. 1977ರಲ್ಲಿ ನಡೆದ ಚುನಾವಣೆಯಲ್ಲಿ ಭಾರೀ ಪರಾಭವವನ್ನು ಅನುಭವಿಸುತ್ತಾರೆ. ವಿಫಲಗೊಂಡ ಜನತಾ ಪಾರ್ಟಿ ಪ್ರಯೋಗವು 1980 ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಮತ್ತೇ ಗೆದ್ದು ಪ್ರಧಾನಿಯಾಗುತ್ತಾರೆ.

ಮೂರನೆಯ ಅವಧಿಯಲ್ಲಿ, ಪಂಜಾಬ್ ಅಸ್ಸಾಂ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿಗಳ ಅಟ್ಟಹಾಸ ದೇಶದ ಆಂತರಿಕ ಭದ್ರತೆಗೆ ಬಹು ದೊಡ್ಡ ಸವಾಲಾಗುತ್ತದೆ. ಅಮೃತಸರದ ಸಿಖ್ಖರ ಪವಿತ್ರ ಸ್ಥಾನವಾದ ಸ್ವರ್ಣ ಮಂದಿರದ ಆವರಣದೊಳಗೆ ಆಪರೇಷನ್ ಬ್ಲೂ ಸ್ಟಾರ್ ಕಾರ್ಯಾಚರಣೆ ಕೈಗೊಂಡು ಸಿಖ್ಖ್ ಸಮುದಾಯದವರ ಆಕ್ರೋಶಕ್ಕೆ ಗುರಿಯಾಗುತ್ತಾರೆ. ಸಿಖ್ಖ್ ಸಮಾಜವು ಇಂದಿರಾರವರ ವಿರೋಧಿಗಳಾಗುತ್ತಾರೆ. ಭದ್ರತಾ ಅಧಿಕಾರಿಗಳ ಮಾತಿಗೆ ಬೆಲೆ ಕೊಡದ ತಪ್ಪಿಗೆ ತಮ್ಮ ಪ್ರಾಣವನ್ನೇ ಬಲಿ ಕೊಡಬೇಕಾಗುತ್ತದೆ.

ಮನಮೋಹನ್ ಸಿಂಗ್ ರವರು 2004ರಲ್ಲಿ ಯುಪಿಎ ಸರಕಾರದಲ್ಲಿ ಪ್ರಧಾನಿಯಾಗುತ್ತಾರೆ. ಮೊದಲ ಐದು ವರ್ಷದ ಆಳ್ವಿಕೆಗೆ 2009ರಲ್ಲಿ ಒಪ್ಪಿಗೆಯ ಮುದ್ರೆ ಬಿದ್ದು ಎರಡನೆಯ ಅವಧಿಗೂ ಪ್ರಧಾನಿಯಾಗುತ್ತಾರೆ. ಈ ಅವಧಿಯು ದೇಶದ ಆರ್ಥಿಕ ಸ್ಥಿತಿಯು ಅಧೋಗತಿಯನ್ನು ತಲುಪುತ್ತದೆ. ಲಕ್ಷಾಂತರ ಕೋಟಿ ಹಗರಣಗಳ ಸರಮಾಲೆಯಿಂದ ಜನ ಬೇಸತ್ತು ಹೋಗಿರುತ್ತಾರೆ. 2014 ರಲ್ಲಿ ಬದಲಾವಣೆಗೆ ಜನ ತುದಿಗಾಲಿನಲ್ಲಿ ಕಾದಿರುತ್ತಾರೆ.

ಇಂತಹ ಪರ್ವ ಕಾಲದಲ್ಲಿ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರನ್ನು ಬಿಜೆಪಿ ತನ್ನ ಪ್ರಧಾನಿ ಅಭ್ಯರ್ಥಿಯೆಂದು ಘೋಷಿಸುತ್ತದೆ. ಗುಜರಾತಿನಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳಿಂದ ಜನಪ್ರಿಯರಾಗಿದ್ದ ಮೋದಿಯವರು ಜನರ ವಿಶ್ವಾಸಗಳಿಸುತ್ತಾರೆ. 2014 ರಲ್ಲಿ ಮತದಾರರು ಮೋದಿಯವರನ್ನು ಬೆಂಬಲಿಸಿ ಮೂವತ್ತು ವರ್ಷದ ನಂತರ ದೇಶದಲ್ಲಿ ಸಮ್ಮಿಶ್ರ ಸರಕಾರದ ಸರಪಳಿಯ ಕೊಂಡಿ ಕಳಚಿ ಬಿಜೆಪಿಗೆ ಪೂರ್ಣ ಬಹುಮತ ನೀಡುತ್ತಾರೆ. 2019 ರಲ್ಲಿ ಎರಡನೆಯ ಬಾರಿ ಬಿಜೆಪಿಯು ಮೋದಿಯವರ ನೇತೃತ್ವದಲ್ಲಿ ಇನ್ನೂ ಹೆಚ್ಚಿನ ಬಹುಮತದಿಂದ ಮತ್ತೇ ಅಧಿಕಾರಕ್ಕೆ ಬರುತ್ತಾರೆ.

ಮೂರನೆಯ ಅವಧಿಯ 2024 ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಪ್ರಬಲ ಪೈಪೋಟಿ ಎದುರಿಸುತ್ತಾರೆ. ತಂತ್ರಜ್ಞಾನ ಬಳಸಿ ಸುಳ್ಳು ಸಂಗತಿ ಹರಡುವುದು, ಜಾತಿ ಕೇಂದ್ರೀಕೃತ ಚುನಾವಣಾ ಪ್ರಚಾರ ಮತ್ತು ವಿದೇಶ ಶಕ್ತಿಗಳೂ ಕೈ ಜೋಡಿಸಿ ಬಿಜೆಪಿಯನ್ನು ಸೋಲಿಸಲು ಹರಸಾಹಸ ಮಾಡುತ್ತವೆ. ಇವೆಲ್ಲದರ ನಡುವೆಯೂ ಮೋದಿಯವರು ಕುಸಿದ ಬಹುಮತದಿಂದ ಪುನರಾಯ್ಕೆಯಾಗಿ ದಾಖಲೆ ಸೃಷ್ಟಿಸಿದ್ದಾರೆ. ಈ ಬಾರಿ ಮೈತ್ರಿ ಪಕ್ಷಗಳ ಎನ್‌ಡಿಎ ಸರಕಾರವನ್ನು ರಚನೆ ಮಾಡಬೇಕಾಗುತ್ತದೆ.

ನೆಹರು ನಂತರ ಸತತವಾಗಿ ಮೂರು ಬಾರಿ ಪ್ರಧಾನಿಯಾಗಿರುವುದು ಮೋದಿಯವರು ಮಾತ್ರ. ಇಂದಿರಾರವರಿಗೆ 77ರಲ್ಲಿ ಸೋಲಾಗಿ ಮೂರನೆಯಬಾರಿ 1980ರಲ್ಲಿ ಅವರು ಮತ್ತೇ ಪ್ರಧಾನಿಯಾಗಿದ್ದು. ಮೋದಿಯವರು ಗಾಂಧಿ ಕುಟುಂಬದವರ ಪ್ರಧಾನಿ ಪಟ್ಟದ ಏಕಸ್ವಾಮ್ಯಕ್ಕೆ ಅಂತ್ಯ ಹಾಡಿ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಪ್ರಾಯಶಃ ಗಾಂಧಿ ಪರಿವಾರಕ್ಕೆ ಈ ಸತ್ಯವನ್ನು ಅರಗಿಸಿಕೊಳ್ಳಲು ಕಷ್ಟವಾಗಿರುವ ಹಾಗಿದೆ.

1962 ರಲ್ಲಿ ನೆಹರು ರವರು ಪ್ರಧಾನಿಯಾದಾಗ ಭಾರತದ ಜನಸಂಖ್ಯೆ 46 ಕೋಟಿ ಮತ್ತು ಇಂದಿರಾರವರು 1980ರಲ್ಲಿ ಪ್ರಧಾನಿಯಾದಾಗ ಭಾರತದ ಜನಸಂಖ್ಯೆ 70 ಕೋಟಿ ಆದರೆ ಮೋದಿಯವರು 2024 ರಲ್ಲಿ ಪ್ರಧಾನಿಯಾದಾಗ ದೇಶದ ಜನಸಂಖ್ಯೆಯು 144 ಕೋಟಿ ದಾಟಿದೆ ಹೀಗಾಗಿ ಅವರಿಬ್ಬರ ಜನಾದೇಶಕ್ಕೆ ಮೋದಿಯವರ ಜನಾದೇಶವನ್ನು ಹೋಲಿಕೆ ಮಾಡಲಾಗದು.

ನೆಹರು ಮತ್ತು ಇಂದಿರಾರವರಿಗೆ ರಾಜಕೀಯವಾಗಿ ಪ್ರಬಲ ಸವಾಲುಗಳೇ ಇರಲಿಲ್ಲ ಹಾಗೂ ಅವರಿಬ್ಬರ ಕಾಲದಲ್ಲಿ ಕೇವಲ ಮುದ್ರಣ ಮಾಧ್ಯಮ ಮಾತ್ರವೊಂದೇ ಸುದ್ದಿ ಮೂಲವಾಗಿತ್ತು. ಇಂದು ರಾಜ್ಯಕ್ಕೊಂದು ಪ್ರಾದೇಶಿಕ ಪಕ್ಷಗಳು, 24 ಗಂಟೆಯೂ ಸುದ್ದಿ ಬಿತ್ತರಿಸುವ ಎಲೆಕ್ಟ್ರಾನಿಕ್ ಮಾಧ್ಯಮ, ಯೂ ಟ್ಯೂಬ್‌ನಲ್ಲಿಯೂ ಅಬ್ಬರದ ಪ್ರಚಾರ. ಇವೆಲ್ಲಕ್ಕಿಂತ ಪ್ರಮುಖವಾಗಿ ಸಾಮಾಜಿಕ ತಾಣದ ಅಬ್ಬರವು ಹೆಜ್ಜೆ ಹೆಜ್ಜೆಗೂ ಕಾಣಬಹುದು. ಪ್ರತಿಯೊಂದು ಹೇಳಿಕೆ ಮತ್ತು ನಿರ್ಣಯಗಳ ಪರಾಮರ್ಶೆ ಕ್ಷಣಕ್ಷಣಕ್ಕೂ ನಡೆಯುತ್ತಿದೆ. ಇಂತಹ ಅತ್ಯಂತ ಸಂಕೀರ್ಣ ಯುಗದಲ್ಲಿಯೂ ಮೂರನೆಯ ಬಾರಿಗೆ ಸತತವಾಗಿ ಜನಾದೇಶ ಪಡೆದಿರುವುದು ಮೋದಿಯವರ ಅಸಾಧಾರಣ ಸಾಧನೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

(ಲೇಖಕರು: ಬಿಜೆಪಿ ವಕ್ತಾರರು)

ಏರಿಕೆ, ಸೋರಿಕೆ, ಜಿಗಿತ, ಕುಸಿತ

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ಕರ್ನಾಟಕದಲ್ಲಿ ಚಿತ್ರಮಂದಿರಗಳು ಮುಚ್ಚೋದು ಹೊಸ ಸುದ್ದಿ ಏನಲ್ಲ. ಆದರೆ ಈಗ ಈ ಸಮಸ್ಯೆ ಇನ್ನಷ್ಟು ಉಲ್ಬಣವಾಗುತ್ತಿದೆ. ಇದು ಕೇವಲ ಕರ್ನಾಟಕದ ಸಮಸ್ಯೆ ಅಲ್ಲ, ಸಿನಿಮಾ ಕ್ರೇಜ್ ಸಿಕ್ಕಾಪಟ್ಟೆ ಇರೋ ತಮಿಳುನಾಡಿನಲ್ಲೂ 150ಕ್ಕೂ ಹೆಚ್ಚು ಚಿತ್ರಮಂದಿರಗಳು ಮುಚ್ಚುತ್ತಿವೆಯಂತೆ. ನಮ್ಮಲ್ಲಿಯೂ ಇನ್ನೇನು ಹಲವು ಚಿತ್ರಮಂದಿರಗಳು ಕೌಂಟರ್ ಕ್ಲೋಸ್ ಮಾಡುವ ಮಾತನ್ನಾಡುತ್ತಿವೆ. ಸ್ಟಾರ್ ಸಿನಿಮಾಗಳೂ ಕಾಸು ಮಾಡದೆ, ಗಲ್ಲಾ ಪೆಟ್ಟಿಗೆ ತುಂಬುತ್ತಿಲ್ಲ ಎಂದು ಮೊದಲೇ ಸಂಕಷ್ಟದಲ್ಲಿದ್ದ ಈ ಚಿತ್ರಮಂದಿರಗಳು ಈಗ, ಗಲ್ಲದ ಮೇಲೆ ಕೈ ಇಟ್ಟು ಕೂತಿವೆ. ಅಂದಹಾಗೆ ಇವೆಲ್ಲ ಕೇವಲ ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳ ಸಮಸ್ಯೆ. ಇನ್ನೋವೇಟಿವ್ ಮಲ್ಟಿಪ್ಲೆಕ್ಸ್‌ಗಳು ಹೇಗೋ ಬಚಾವಾಗಲು ಹಲವು ಇನ್ನೋವೇಟಿವ್ ದಾರಿಗಳನ್ನು ಹುಡುಕಿಕೊಳ್ಳುತ್ತವೆ. ಆದ್ರೆ ಸಿಂಗಲ್ ಸ್ಕ್ರೀನ್‌ಗಳ ಕತೆ ಹಾಗಿಲ್ಲ. ಹಾಗಾಗಿ ಜನ ಚಿತ್ರಮಂದಿರಗಳಲ್ಲಿ ಮಿಂಗಲ್ ಆಗ್ತಾ ಇಲ್ಲ ಎನ್ನುವಂಥ ಟೈಮಲ್ಲಿ ಸಿಂಗಲ್ ಥಿಯೇಟರ್‌ಗಳು ವಿರಹ ವೇದನೆಯಿಂದ ನರಳುವ ಸಿಂಗಲ್‌ಗಳಂತೆ ಆಗಿವೆ. ಸದ್ಯಕ್ಕೆ ಹಲವು ಚಿತ್ರಮಂದಿರಗಳ ಮಾಲೀಕರು ತಮ್ಮ ಲೈಸೆನ್ಸ್ ರಿನ್ಯೂ ಮಾಡೋಕೆ ಅರ್ಜಿಯನ್ನೂ ಹಾಕಿಲ್ಲವಂತೆ. ಇಷ್ಟು ದಿನ ತಮ್ಮ ಮರ್ಜಿ ಎನ್ನುವಂತೆ ಟಿಕೆಟ್ ದರವನ್ನು ಹೆಚ್ಚಿಸುತ್ತಿದ್ದ ಚಿತ್ರಮಂದಿರಗಳ ಮಾಲೀಕರು ಸರಕಾರದ ಫಿಫ್ಟಿ ಫಿಫ್ಟಿ ನೀತಿಯಿಂದಾಗಿ ಕರೋನಾ ಲಾಕ್‌ಡೌನ್ ನಲ್ಲೇ ಒಂದಿಷ್ಟು ಕಂಗೆಟ್ಟಿದ್ದರು. ಈಗ ಫಿಫ್ಟಿ ಫಿಫ್ಟಿ ಇರಲಿ, ಚಿತ್ರಮಂದಿರಗಳಲ್ಲಿ ಶೋಗಳೇ ಇಲ್ಲದೆ ಅವರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ಅಡ್ವಾನ್ಸ್ ಬುಕ್ಕಿಂಗ್ ಮಾಡಿಕೊಂಡು ಸೀಟುಗಳನ್ನ ಬ್ಲಾಕ್ ಮಾಡಿಕೊಳ್ಳುತ್ತಿದ್ದ, ದೊಡ್ಡ ಸಿನಿಮಾಗಳು ಬಿಡುಗಡೆಯಾದಾಗ ಬ್ಲ್ಯಾಕ್ ಟಿಕೆಟ್ ಮಾರುತ್ತಿದ್ದ ಚಿತ್ರಮಂದಿರಗಳೇ ಈಗ ಬ್ಲಾಕ್ ಆಗುವ ಭಯದಲ್ಲಿವೆ. ಈ ಚಿತ್ರಮಂದಿರಗಳ ಸಿಟ್ ಔಟ್‌ನಲ್ಲೇ ಕೂತು, ಕಮ್ ಆನ್ ಇನ್ ಅಂದ್ರೂ, ಯಾರೂ ಬರ್ತಾ ಇಲ್ಲ. ಹಾಗಾಗಿ ಚಿತ್ರಮಂದಿರ ತುಂಬಿದೆ ಎಂಬ ಬೋರ್ಡ್ ನೋಡಬೇಕಾಗಿದ್ದ ಹಲವು ಕಡೆ ಇನ್ನುಮುಂದೆ ಚಿತ್ರಮಂದಿರ ಮುಚ್ಚಿದೆ ಎಂಬ ಬೋರ್ಡ್ ತಗಲಾಕಿದರೆ ಅಚ್ಚರಿಯಿಲ್ಲ.

ಲೂಸ್ ಟಾಕ್

ನರೇಂದ್ರ ಮೋದಿ

- **ಏನ್ ಸಾರ್, ದೇಶದಲ್ಲಿ ಬರೀ ನೀಟ್ ಪ್ರಶ್ನೆ ಪತ್ರಿಕೆಗಳಷ್ಟೇ ಅಲ್ಲ, ಏರ್ ಪೋರ್ಟ್‌ಗಳು ಕೂಡಾ ಸೋರಿಕೆ ಆಗ್ತಾ ಇವೆ. ಅವನ್ನೂ ನೀಟಾಗಿ ಕಟ್ಟಿಲ್ವಾ ನೀವು?**

-ಏನ್ರೀ, ಬೆಲೆ ಏರಿಕೆ ಆದ್ರೂ ಕಿರಿಕಿರಿ ಮಾಡ್ತೀರಾ, ಎಲ್ಲಾದ್ರೂ ಸೋರಿಕೆ ಆದ್ರೂ ಕಿರಿಕಿರಿ ಮಾಡ್ತೀರಾ. ಏನ್ ನಿಮ್ ಪ್ರಾಬ್ಲಮ್ಮು?

- **ಇದರ ಜತೆ ಸೇತುವೆಗಳೂ ಕುಸಿಯುತ್ತಾ ಇವೆ ಅಂತ ಜನ ಕೇಳ್ತಾ ಇದ್ದಾರೆ ಸರಿ. ಯಾಕೆ ಹಿಂಗೆ ಅಂತ?**

-ಅಯ್ಯೋ, ಅವರಿಗೇನ್ ಬಿಡ್ರಿ, ಷೇರು ಪೇಟೆಯಲ್ಲಿ ಜಿಗಿತ ಆದ್ರೂ ಮಾತಾಡ್ತಾರೆ. ಸೇತುವೆ ಕುಸಿತ ಆದ್ರೂ ಮಾತಾಡ್ತಾರೆ. ಸೇತುವೆ ಕುಸಿದ ತಕ್ಷಣ ಈ ವಿಷಯದಲ್ಲಿ ನಾವು ಸೋತೆವು ಅಂತ ಹೇಳೋಕಾಗುತ್ತಾ?

- **ಹಂಗಲ್ಲ, ಆದ್ರೂ ಸೇತುವೆಗಳು ಯಾಕೆ ಕುಸಿತಾ ಇವೆ ಅಂತ?**

-ಅಯ್ಯೋ. ಸಮುದ್ರದ ನೀರಿನ ಮೇಲೆ, ಕಲ್ಲುಗಳನ್ನ ಹಾಕಿ ತೇಲಿಸಿ ಸೇತುವೆ ಕಟ್ಟಿದ ರಾಮನ ದೇಶ ಇದು. ಅದಕ್ಕೇ ನಾವೂ ಸ್ವಲ್ಪ ಹಂಗೇ ಕಟ್ಟೋಕೆ ಟ್ರೈ ಮಾಡಿದ್ವಿ, ಹಿಂಗಾಗ್ಬಿಡ್ತು ಅಷ್ಟೇ.

- **ಏನೋ ಹೇಳಿ ಸೇತುವೆ ಕಟ್ಟಿದ ಕತೆ ಕಟ್ಟಿ, ಕಲ್ಲು ತೇಲಿಸಿದ ಹಾಗೆ ಮಾತು ತೇಲಿಸ್ತಾ ಇದ್ದೀರಾ. ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರನೇ ಕೊಡ್ತಿಲ್ಲ ನೋಡಿ ನೀವು**

-ನೀಟ್ ಎಕ್ಸಾಮ್ ಥರ, ನಿಮ್ಮ ಪ್ರಶ್ನೆಗಳೂ ಮೊದಲೇ ಲೀಕ್ ಆಗಿದ್ದಿದ್ರೆ ಸರಿಯಾಗಿ ಪ್ರಿಪೇರ್ ಆಗಿ ಉತ್ತರ ಕೊಡ್ತಿದ್ದೆ.

- **ಅದೊಂದ್ ಬಾಕಿ ಇತ್ತು. ಹೋಗ್ಲಿ, ಮೊನ್ನೆ ಕ್ರಿಕೆಟ್ ವರ್ಲ್ಡ್ ಕಪ್ ಟ್ರೋಫಿ ಕೈಯಲ್ಲಿ ಇಟ್ಕೊಂಡಿದ್ರಲ್ಲ, ಮಾರಿಬಿಡೋ ಪ್ಲ್ಯಾನ್ ಏನಾದ್ರೂ ಇತ್ತಾ?**

-ಪ್ಲ್ಯಾನ್ ಏನೋ ಇತ್ತು. ಆದ್ರೆ ಅದು ಒರಿಜಿನಲ್ ಅಲ್ಲ, ಡ್ಯೂಪ್ಲಿಕೇಟ್ ಅಂತೆ. ಅದಕ್ಕೇ ಸುಮ್ಮನಾದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮುಶ್ರೀ ಶಾಪಿಂಗ್ ಮಾಲ್‌ನಿಂದ ಖರೀದಿ ಮುಗಿಸಿ ಹೊರಬಂದಳು. ಕಾರಿನ ಕೀ ತೆಗೆಯಲು ಪರ್ಸ್‌ಗೆ ಕೈ ಹಾಕಿದರೆ ಕೀ ಸಿಗಲಿಲ್ಲ. ತಡಬಡಾಯಿಸಿ ಎಲ್ಲ ಕಡೆ ಹುಡುಕಿದರೂ ಕಾರ್ ಕೀನ ಸುಳಿವೇ ಇಲ್ಲ. ಅವಳಿಗೂ ಗೊತ್ತಿತ್ತು, ಕಾರ್ ಕೀ ವಿಷಯದಲ್ಲಿನ ತನ್ನ ಬೇಜವಾಬ್ದಾರಿತನ ಇದೇನೂ ಮೊದಲ ಬಾರಿ ಅಲ್ಲ ಎಂಬುದು. ಎಷ್ಟೋ ಸಾರಿ, ಕಾರ್ ಕೀಯನ್ನು ಕಾರಿನಲ್ಲೇ ಬಿಟ್ಟು ಹೋಗಿದ್ದಕ್ಕಾಗಿ ಗಂಡ ಖೇಮುವಿನಿಂದ ಸಿಕ್ಕಾಪಟ್ಟೆ ಬೈಸಿಕೊಂಡಿದ್ದು ಅವಳಿಗಿನ್ನೂ ನೆನಪಿತ್ತು. ಈ ಸಲಾನೂ ಹಂಗೇ ಆಯ್ತಾ, ಹಂಗೇ ಆಗಿದ್ರೆ ಆಕಸ್ಮಾತ್ ಯಾರಾದ್ರೂ ಕಾರನ್ನು ಲಪಟಾಯಿಸಿದ್ರೆ ಏನ್ ಗತಿ ಎಂಬ ಆತಂಕದಲ್ಲಿ ಪಾರ್ಕಿಂಗ್ಗೆ ಓಡೋಡಿ ಬಂದಳು. ಅವಳಂದುಕೊಂಡ ಹಾಗೇ ಆಗಿತ್ತು. ಅಲ್ಲಿ ಅವಳ ಕಾರ್ ಇರಲಿಲ್ಲ. ತಕ್ಷಣ ಪೊಲೀಸರಿಗೆ ಕಾಲ್ ಮಾಡಿ ಕರೆಸಿ, ಕಾರ್‌ನ ಕಲರ್, ನಂಬರ್ ಮತ್ತಿತರ ವಿವರ ಕೊಟ್ಟು ದೂರು ಕೊಟ್ಟಳು. ಪೊಲೀಸರು ಕಾರು ಹುಡುಕಲು ಹೊರಟರು. ಒಬ್ಬಳೇ ನಿಂತಿದ್ದ ಖೇಮುಶ್ರೀ ಸ್ವಲ್ಪ ಹೊತ್ತಿನ ನಂತರ, ಬೈಸಿಕೊಂಡರೂ ಪರವಾಗಿಲ್ಲ, ಯಾವುದಕ್ಕೂ ಗಂಡನಿಗೆ ಫೋನ್ ಮಾಡಿ ವಿಷಯ ತಿಳಿಸೋದು ಒಳ್ಳೇದು ಎಂದು ಖೇಮುಗೆ ಕಾಲ್ ಮಾಡಿ ಮೆಲ್ಲನೆ ಅಳುಕಿನಿಂದಲೇ ಹೇಳಿದಳು 'ರೀ, ನನ್ನ ಕಾರ್ ಕೀ ಕಾರಲ್ಲೇ ಬಿಟ್ಟಿದ್ದೆ. ಈಗ ಕಾರು ಕಳುವಾಗಿದೆ. ಬಯ್ಬೇಡಿ, ನಾನಿಲ್ಲಿ ಶಾಪಿಂಗ್ ಮಾಲ್ ಬಳಿ ಒಬ್ಬಳೇ ಇದೀನಿ ಬರ್ತೀರಾ ಪ್ಲೀಸ್'. ಆ ಕಡೆಯಿಂದ ಗಂಡ ಖೇಮು ರೇಗಿದ, 'ಅಯ್ಯೋ, ನಿನ್ನ, ಲೇ, ಇವತ್ತು ನೀನೆಲ್ಲೇ ಡ್ರೈವ್ ಮಾಡ್ಕೊಂಡ್ ಹೋಗಿದ್ದೆ.. ಬೆಳಿಗ್ಗೆ ನಾನೇ ನಿನ್ನ ಕಾರಲ್ಲಿ ಕರ್ಕೊಂಡ್ ಹೋಗಿ ಶಾಪಿಂಗ್ ಮಾಲ್ ಹತ್ರ ಬಿಟ್ ಬರಲಿಲ್ವಾ. ಈಗ ಈ ಪೊಲೀಸ್ನೋರಿಗೆ ನಿನ್ನ ಕಾರನ್ನ ನಾನು ಕದ್ದಿಲ್ಲ ಅಂತ ಕನ್ವಿನ್ಸ್ ಮಾಡಿ ಆಮೇಲ್ ಬರ್ತೀನಿ ಇರು'.

ಲೈನ್ ಮ್ಯಾನ್

- **ಮಹಾಲಕ್ಷ್ಮಿ ಮಹಾತ್ಮೆ**

-ಮೊದಲೆಲ್ಲಾ, ಭವ್ಯ, ಮಾಧವಿ, ಸರಿತಾ, ಅಂಬಿಕಾ, ಆರತಿ, ಭಾರತಿ, ಮಂಜುಳಾ.. ಯಾರೇ ಆಗಿರಲಿ.. ಹೀರೋಯಿನ್ ಎಷ್ಟೇ ಚೆನ್ನಾಗಿದ್ರೂ.. ಎಷ್ಟೇ ಕೆಟ್ಟದಾಗಿದ್ರೂ, 'ಒಳ್ಳೆ ಮಹಾಲಕ್ಷ್ಮಿ ಇದ್ದಂಗಿದೀಯಮ್ಮ' ಅಂತ ಡೈಲಾಗ್ ಬರೀತಿದ್ರು.. ಕ್ರೆಡಿಟ್ ಸಿಗ್ತಾ ಇದ್ದಿದ್ದು ನಟಿ ಮಹಾಲಕ್ಷ್ಮಿಗೆ ಮಾತ್ರ

- **ಲಿವಿಂಗ್ ಆನ್ ದಿ ಎಡ್ಜ್**

-ಗಾಡ್ ಫಾದರ್ ಥರ ಬೆನ್ನ ಹಿಂದೆ ನಿಂತು ನಮ್ಮನ್ನ ಪುಶ್ ಮಾಡೋರು ಯಾರೂ ಇಲ್ಲ ಅಂತ ಬೇಸರದಲ್ಲಿರೋರು, ಬೆಟ್ಟದ ತುದಿಯಲ್ಲಿ ನಿಂತ್ಕೊಬಾರದು

- **ಮನಿ ಮ್ಯಾಟರ್ಸ್**

-ಪ್ರಶ್ನೆ- ಲೈಫಲ್ಲಿ ದುಡ್ಡಿರಬೇಕಾ? ಪ್ರೀತಿ ಇರಬೇಕಾ?

-ಉತ್ತರ-ದುಡ್ಡಿನ ಮೇಲೆ ಪ್ರೀತಿ ಇರಬೇಕು

- **ಲವ್‌ನಲ್ಲಿ ಹುಡುಗ ಕೈ ಕೊಟ್ರೆ** – ಬಗಣಿ ಗೂಟ
- **ಹುಡುಗಿ ಕೈ ಕೊಟ್ರೆ** – ಭಗಿನಿ ಗೂಟ
- **ಹಳೆ ಮಾತು:** ಸಮುದ್ರ ದಡದಲ್ಲಿ ಕಪ್ಪೆಚಿಪ್ಪುಗಳು ಸಿಗುತ್ತವೆ. ಮುತ್ತುಗಳು ಬೇಕು ಅಂದ್ರೆ, ಸಮುದ್ರದ ತಳಕ್ಕೆ ಹೋಗಬೇಕು.
- **ಹೊಸ ಮಾತು:** ವಾಲ್, ಟೈಮ್ಲೈನ್‌ಗಳಲ್ಲಿ ಎಲ್ಲರೂ ಸಾಚಾಗಳೇ ಆಗಿರ್ತಾರೆ, ನಿಜವಾದ ಮುಖ ಗೊತ್ತಾಗಬೇಕು ಅಂದ್ರೆ ಇನ್‌ಬಾಕ್ಸ್‌ಗೆ ಹೋಗಬೇಕು.
- **ಚಳಿಗಾಲದ ಸಮಸ್ಯೆ**

-ಬೈಕಿನ ಹಿಂದೆ ಕೂತ ಹುಡುಗಿ ಬಾಯ್‌ಫ್ರೆಂಡ್‌ನ ಅಪ್ಪಿಕೊಂಡಿರುವುದಕ್ಕೆ ಆ ಹುಡುಗನ ಮೇಲಿರೋ ಸಿಕ್ಕಾಪಟ್ಟೆ ಪ್ರೀತಿಯೇ ಕಾರಣ ಅಂತ ಹೇಳೋಕಾಗಲ್ಲ.

- **ನಮ್ ಜನ ಸರಿ ಇಲ್ಲಪ್ಪ**

-ಸಿಟ್ಟು ಬಂದಾಗ ರಾಜಕಾರಣಿಗಳನ್ನು ದೇಶದಿಂದ ಹೊರಗೆ ಹಾಕಬೇಕು ಅಂತಾರೆ

-ಈಗ ಅವರಾಗಿಯೇ ದೇಶದಿಂದ ಹೊರಗೆ ಹೋದರೆ ಸಿಟ್ಟು ಮಾಡಿಕೊಳ್ಳುತ್ತಾರೆ

- **ಸೀಕ್ವೆಲ್ ಮಾಡಲಾಗದ ಚಿತ್ರಗಳು**

-ನಂ.1

-ಒಕ್ಕೇ ಒಕ್ಕುಡು

-ಅಪವಾದ ಎಂಬಂತೆ ಎರಡೆರಡು 'ಸ್ವರ್ಗ' ತೋರಿಸಿದ್ದು 'ಜನ್ನತ್ 2' 'ಜನ್ನತ್ 3' ಸಿನಿಮಾ ಬಂದಿದ್ರೆ ಕನ್ನಡದಲ್ಲಿ 'ಸ್ವರ್ಗಕ್ಕೆ ಮೂರೇ ಗೇಣು' ಅಂತ ರಿಮೇಕ್ ಮಾಡಬಹುದಿತ್ತು

- **ಮಾಡರ್ನ್ ಗಾದೆ**

-ಸುಸ್ಸೂ ಬಂತು ಅಂತ ಬೆಂಗಳೂರು 'ಒನ್'ಗೆ ಹೋಗೋಕಾಯ್ತದ..?

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 195

ಸಮಾಚಾರ ಸಣ್ಣದಲ್ಲ

ಚಮೋಲಿ ಭೂಕುಸಿತ: ಪ್ರವಾಸಿಗರಿಬ್ಬರ ಸಾವು

ಚಮೋಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಶನಿವಾರ ಭೂಕುಸಿತವಾಗಿದ್ದು ಬಂಡೆಗಳಡಿ ಸಿಲುಕಿ ಹೈದರಾಬಾದ್‌ನ ಇಬ್ಬರು ಪ್ರವಾಸಿಗರು ಮೃತಪಟ್ಟಿದ್ದಾರೆ. ಬದರಿನಾಥದ ರಾಷ್ಟ್ರೀಯ ಹೆದ್ದಾರಿಯಲ್ಲಿ ಗೌಚಾರ್ ಮತ್ತು ಕರ್ಣಪ್ರಯಾಗ ನಡುವಿನ ಚಟ್ವಾಪೀಪಾಲ್ ಬಳಿ ದುರ್ಘಟನೆ ನಡೆದಿದೆ. ನಿರ್ಮಲ್ ಶಾಹಿ (36), ಸತ್ಯ ನಾರಾ ಯಣ(50) ದೇವಸ್ಥಾನದಿಂದ ಬೈಕ್‌ನಲ್ಲಿ ಬರುತ್ತಿದ್ದಾಗ ಬೆಟ್ಟದಿಂದ ಉರುಳಿದ ಬಂಡೆಗಳಡಿ ಸಿಲುಕಿ ಮೃತಪಟ್ಟಿದ್ದಾರೆ. ಭೂಕುಸಿತ ಕಾರಣ 6 ಸ್ಥಳಗಳಲ್ಲಿ ಬದರಿನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ರುದ್ರಪ್ರಯಾಗ- ಕೇದಾರನಾಥ ರಾಷ್ಟ್ರೀಯ ಹೆದ್ದಾರಿಯೂ ಬಂದ್ ಆಗಿದೆ.

ಮನೀಶ್ ನ್ಯಾಯಾಂಗ ಬಂಧನ ಮತ್ತೆ ವಿಸ್ತರಣೆ

ದೆಹಲಿ: ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ 2023ರ ಮಾ.9ರಂದು ಜಾರಿ ನಿರ್ದೇಶನಾಲಯ (ಇ.ಡಿ) ದೆಹಲಿ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಬಂಧಿಸಿತ್ತು. ಬಳಿಕ ಸಿಬಿಐ ಕೂಡಾ ಭ್ರಷ್ಟಾಚಾರ ಪ್ರಕರಣ ದಾಖಲಿಸಿ ವಶಕ್ಕೆ ಪಡೆದಿತ್ತು. ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಸಿಸೋಡಿಯರನ್ನು ಪೊಲೀಸರು ಶನಿವಾರ ದೆಹಲಿ ರೋಸ್ ಅವೆನ್ಯೂ ಕೋರ್ಟ್‌ಗೆ ಹಾಜರುಪಡಿಸಿದ್ದರು. ನ್ಯಾಯಾಲಯ ನ್ಯಾಯಾಂಗ ಬಂಧನ ಅವಧಿಯನ್ನು ಜು.15ರವರೆಗೆ ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ.

{ ಶಶಿ ತರೂರ್ } ಕಾಂಗ್ರೆಸ್ ಸಂಸದ

ಪ್ರಧಾನಿ ಮೋದಿ ಅವರು ಲೋಕಸಭಾ ಚುನಾವಣೆ ಸಂದರ್ಭ ಪದೇ ಪದೇ 'ಅಬ್ ಕಿ ಬಾರ್ 400 ಪಾರ್' ಎನ್ನುತ್ತಿದ್ದರು. ಸಭೆಗಳಲ್ಲಿ ಬಿಜೆಪಿ ಕಾರ್ಯಕರ್ತರಿಂದಲೂ ಘೋಷಣೆ ಮೊಳಗಿಸುತ್ತಿದ್ದರು. ಆದರೆ, ಅದು ಇಲ್ಲಿ ಸಾಧ್ಯವಾಗಲಿಲ್ಲ. ಆದರೆ, ಬೇರೆ ದೇಶದಲ್ಲಿ ಸಾಧ್ಯವಾಗಿದೆ. ದೂರದ ಬ್ರಿಟನ್‌ನಲ್ಲಿ 14 ವರ್ಷಗಳಿಂದ ಪ್ರತಿಪಕ್ಷ ಸ್ಥಾನದಲ್ಲಿದ್ದ ಲೇಬರ್ ಪಕ್ಷ '400 ಸ್ಥಾನಗಳ ಗಡಿ ದಾಟಿದೆ', ಭರ್ಜರಿ ಜಯ ಸಾಧಿಸಿದೆ.



ಮಧ್ಯಪ್ರದೇಶದ ಕುನೊ ವನ್ಯಧಾಮದಲ್ಲಿ ಹಿಗ್ಗುತ್ತಿದೆ ಆಫ್ರಿಕಾ ಚೀತಾಗಳ ಸಂಸಾರ

ತಾಯಿ ಚೀತಾ ಗಾಮಿನಿ ಜತೆ 5 ಮರಿಗಳ ಚಿನ್ನಾಟ

ಕುನೊ: ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ವನ್ಯಧಾಮಕ್ಕೆ ಕಡೆಗೂ ಹೊಂದಿಕೊಂಡಿರುವ ಆಫ್ರಿಕಾ ಚೀತಾ ಸಂತತಿ ನಿಧಾನವಾಗಿ ಹಿರಿದಾಗುತ್ತಿದೆ.

ದಕ್ಷಿಣ ಆಫ್ರಿಕಾದ ಕಲಹರಿ ಅರಣ್ಯದಿಂದ ಭಾರತಕ್ಕೆ ತರಲಾಗಿರುವ 'ಗಾಮಿನಿ' ಚೀತಾ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ವನ್ಯಧಾಮದಲ್ಲಿ 5 ಮರಿಗಳಿಗೆ ಜನ್ಮನೀಡಿದ್ದು, ಆಫ್ರಿಕಾ ಚೀತಾ ಗಾಮಿನಿಯ ಕುಟುಂಬ ದೊಡ್ಡದಾಗಿದೆ. ಐದೂರ ಮರಿಗಳು ಆರೋಗ್ಯಪೂರ್ಣವಾಗಿ ಬೆಳೆದುನಿಂತಿವೆ. ಇತ್ತೀಚೆಗೆ ಕುನೋ ವನ್ಯಧಾಮ ಪ್ರದೇಶದಲ್ಲಿ ಮಳೆಯಾಗಿದ್ದು, ತಂಪಾದ ವಾತಾವರಣದಿಂದ ಸಂತಸಗೊಂಡ ಐದೂ ಮರಿಗಳು ಕುಣಿದು ಕುಪ್ಪಳಿಸಿವೆ. ತಾಯಿಯ ಮೈಮೇಲೆಲ್ಲಾ ಚಿಗಿದಾಡಿವೆ. ಮರಿಗಳು ಪೈಪೋಟಿಗೆ ಬಿದ್ದಂತೆ ಒಂದರ ಮೇಲೊಂದು ಎಗರಾಡುತ್ತಾ ಖುಷಿಯಿಂದ ಆಟವಾಡಿವೆ. ಈ ದೃಶ್ಯಗಳನ್ನು ವಿಡಿಯೊದಲ್ಲಿ ದಾಖಲಿಸಿರುವ ಕುನೋ ವನ್ಯಧಾಮದ ಅಧಿಕಾರಿಗಳು, ಕೇಂದ್ರದ ಅರಣ್ಯ ಸಚಿವ ಭೂಪಿಂದರ್ ಯಾದವ್ ಅವರ ಜತೆ ಹಂಚಿಕೊಂಡಿದ್ದಾರೆ. ಸಚಿವರು ತಮ್ಮ 'ಎಕ್ಸ್' ಖಾತೆಯಲ್ಲಿ ವಿಡಿಯೊವನ್ನು ಹಂಚಿಕೊಂಡು 'ಆಫ್ರಿಕನ್ ಚೀತಾ ಕುಟುಂಬ ಕುನೋ ವನ್ಯಧಾಮದಲ್ಲಿ ಉತ್ತಮ ಬೆಳವಣಿಗೆ ಕಾಣುತ್ತಿದೆ. ಉತ್ತಮ ಪರಿಸರ ನಿರ್ಮಿಸಿಕೊಟ್ಟಿರುವ ಕುನೋ ವನ್ಯಧಾಮದ ಅಧಿಕಾರಿ-ಸಿಬ್ಬಂದಿಗಳ ಕಾರ್ಯ ಶ್ಲಾಘನೀಯ' ಎಂದು ಬರೆದ್ದಿದಾರೆ.



ಗಾಮಿನಿಯ 5 ಮರಿಗಳಿಗೆ ಈಗ 4 ತಿಂಗಳು

ದಕ್ಷಿಣ ಆಫ್ರಿಕಾದ ಕಲಹರಿ ಅರಣ್ಯದಿಂದ ಆಮ ದಾಗಿ ಕುನೋ ರಾಷ್ಟ್ರೀಯ ವನ್ಯಧಾಮ ಸೇರಿದ 5 ವರ್ಷಗಳ ಚೀತಾ 'ಗಾಮಿನಿ' (ಭಾರತಕ್ಕೆ ಬಂದ ಮೇಲೆ ಇಟ್ಟ ಹೆಸರು) ಮಾ.10ರ ಭಾನುವಾರ 5 ಮರಿಗಳಿಗೆ ಜನ್ಮನೀಡಿತ್ತು. ಈಗ ಆ ಮರಿಗಳಿಗೆ 4 ತಿಂಗಳು. ವಯಸ್ಸಿಗೆ ತಕ್ಕಂತೆ ಆರೋಗ್ಯಕರವಾಗಿ ಬೆಳೆದಿರುವ ಐದೂ ಮರಿಗಳು ತಾಯಿಯ ಕಣ್ಗಾವಲಿನಲ್ಲೇ ಉಂಡು-ಆಡಿ ಚೆನ್ನಾಗಿ ಬೆಳೆ ಯು ತ್ತಿವೆ. ಗಾಮಿನಿ ಐದು ಮರಿಗಳಿಂದಾಗಿ ಕುನೋ ವನ್ಯಧಾಮದಲ್ಲಿನ ಆಫ್ರಿಕನ್ ಚೀತಾಗಳ ಮರಿಗಳ ಸಂಖ್ಯೆ 13ಕ್ಕೇರಿತ್ತು. ಈ ಬೆಳವಣಿಗೆ ಗಳಿಂದಾಗಿ ದೊಡ್ಡ ಚೀತಾಗಳೂ ಸೇರಿದಂತೆ ಭಾರತದಲ್ಲಿರುವ ಆಫ್ರಿಕನ್ ಚೀತಾಗಳ ಒಟ್ಟು ಸಂಖ್ಯೆ 26ಕ್ಕೆ ಏರಿಕೆಯಾಗಿದೆ ಎಂದು ಸಚಿವ ಭೂಪಿಂದರ್ ಯಾದವ್ ತಿಳಿಸಿದ್ದರು.

ಶನಿವಾರ ಆರಂಭವಾಗಬೇಕಿದ್ದ 2024ರ ಅಖಿಲ ಭಾರತ ಕೋಟಾ ಸೀಟ್ ಕೌನ್ಸೆಲಿಂಗ್

ನೀಟ್ ಯುಜಿ ಕೌನ್ಸೆಲಿಂಗ್ ಮುಂದೂಡಿಕೆ

ದೆಹಲಿ: ರಾಷ್ಟ್ರೀಯ ಅರ್ಹತೆ ಮತ್ತು ವೈದ್ಯಕೀಯ ಪದವಿ ಪ್ರವೇಶ ಪರೀಕ್ಷೆ (ನೀಟ್ ಯುಜಿ) 2024ರ ಕೌನ್ಸೆಲಿಂಗ್ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಕೌನ್ಸೆಲಿಂಗ್ ದಿನಾಂಕದ ಬಗ್ಗೆ ಮುಂದೆ ಸೂಚನೆ ಹೊರಡಿಸಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ನೀಟ್ ಯುಜಿ 2024ರ ಅಖಿಲ ಭಾರತ ಕೋಟಾ (ಎಐಕ್ಯು) ಸೀಟ್ ಕೌನ್ಸೆ ಲಿಂಗ್ ಶನಿವಾರ ಆರಂಭವಾಗಬೇಕಿತ್ತು. ಆದರೆ, ಕೌನ್ಸೆಲಿಂಗನ್ನು ವಿಳಂಬಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ ನಂತರ ಕೇಂದ್ರ ಸರಕಾರ ಈ ಕ್ರಮ ಕೈಗೊಂಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾ.ಜೆ.ಬಿ.ಪರ್ದಿವಾಲಾ ಮತ್ತು ನ್ಯಾ.ಮನೋಜ್ ಮಿಶ್ರಾ, ಅವರನ್ನೊಳಗೊಂಡ ಪೀಠ ಸೋಮವಾರ ನೀಟ್ ಯುಜಿ 2024 ಪರೀಕ್ಷೆ-ಕೌನ್ಸೆಲಿಂಗ್ ಕುರಿತ ವಿವಿಧ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳಲಿದ್ದಾರೆ. ಅರ್ಜಿದಾರರಲ್ಲಿ ಕೆಲವರು ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಮಾಡಿದ್ದರೆ, ಕೆಲವರು ಇಡೀ ಪರೀಕ್ಷೆ ಪ್ರಕ್ರಿಯೆಯನ್ನೇ ರದ್ದುಗೊಳಿಸಿ ಹೊಸದಾಗಿ ಪರೀಕ್ಷೆ ನಡೆಸುವಂತೆ ನಿರ್ದೇಶನ ನೀಡಲು ಕೋರಿದ್ದಾರೆ. ಮತ್ತೆ ಕೆಲವರು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಕಾರ್ಯವಿಧಾನಗಳ ತನಿಖೆಗೆ ಆಗ್ರಹಿಸಿದ್ದಾರೆ.

ಕೌನ್ಸೆಲಿಂಗ್ ಪ್ರಕ್ರಿಯೆ: ನೀಟ್ ಯುಜಿ ಕೌನ್ಸೆಲಿಂಗ್ ಅನೇಕ ಸುತ್ತುಗಳಲ್ಲಿ ನಡೆಯುತ್ತದೆ. ನೀಟ್ ರ್‍ಯಾಂಕಿಂಗ್ ಆಧಾರ ವಿದ್ಯಾರ್ಥಿಗಳು ಮೊದಲು ನೋಂದಾಯಿಸಿಕೊಂಡು ಕೌನ್ಸೆಲಿಂಗ್ ಶುಲ್ಕ ಪಾವತಿಸಿ, ಆಯ್ಕೆ ತಿಳಿಸಿ ಸೀಟ್ ಲಾಕ್ ಮಾಡಬೇಕು. ಜತೆಗೆ ಪಿಯು ಮತ್ತು ನೀಟ್ ರ್‍ಯಾಂಕಿಂಗ್ ದಾಖಲೆಗಳನ್ನು ಅಪ್ಲೋಡ್ ಮಾಡಿ ನಿಗದಿತ ಸಂಸ್ಥೆಗೆ ವೈಯಕ್ತಿಕವಾಗಿ ವರದಿ ಮಾಡಬೇಕು.

ಸುಪ್ರೀಂಗೆ ಹೇಳಿದ್ದೇ ಒಂದು...

ನೀಟ್ ಯುಜಿ 2024ರ ರ್‍ಯಾಂಕಿಂಗ್ ಆಧರಿಸಿ ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ಪ್ರವೇಶ-ಕಾಲೇಜು ಆಯ್ಕೆಗೆ ಜು.6ರಂದು ಕೌನ್ಸೆಲಿಂಗ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು. ಆದರೆ, ಕೌನ್ಸೆಲಿಂಗ್‌ಗೆ ಸಂಬಧಿಸಿ ಯಾವುದೇ ಅಧಿಸೂಚನೆ ಅಥವಾ ವೇಳಾಪಟ್ಟಿಯನ್ನು ಮೆಡಿಕಲ್ ಕೌನ್ಸೆಲಿಂಗ್ ಕಮಿಟಿ(ಎಂಸಿಸಿ) ಈವರೆಗೂ ಪ್ರಕಟಿಸಿಯೇ ಇಲ್ಲ.

ಸದ್ಯ ಸಿಬಿಐ ತನಿಖೆ

ನೀಟ್ ಯುಜಿ 2024ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ತನಿಖೆಯನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಲಾಗಿದೆ. ಪ್ರಮುಖ ಸಂಚು ಕೋರ ಅಮನ್ ಸಿಂಗ್ ಸೇರಿದಂತೆ ಆರು ಆರೋ ಪಿ ಗಳನ್ನು ಈವರೆಗೆ ಬಂಧಿಸಲಾಗಿದೆ. ಇದಕ್ಕೂ ಮುನ್ನ ಬಿಹಾರ ಪೊಲೀಸರು, ಮೊದಲ ಎಫ್‌ಐಆರ್ ದಾಖಲಿಸಿ 14 ಮಂದಿಯನ್ನು ಬಂಧಿಸಿ ದ್ದರು. ಗುಜ ರಾತ್‌ನಲ್ಲಿ 1, ರಾಜಸ್ಥಾನದಲ್ಲಿ 3 ಸೇರಿ ದಂತೆ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮ ಸಂಬಂಧ ಒಟ್ಟು 6 ಎಫ್‌ಐಆರ್‌ಗಳು ದಾಖಲಾಗಿವೆ.

ಮಾಸಾಂತ್ಯಕ್ಕೆ ಕೌನ್ಸೆಲಿಂಗ್?

ದೆಹಲಿ: ನೀಟ್ ಯುಜಿ 2024ರ ರ್‍ಯಾಂಕಿಂಗ್ ಪಡೆದ ವಿದ್ಯಾರ್ಥಿಗಳು ಅವರ ಇಷ್ಟದ ಕಾಲೇಜು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವ ಕೌನ್ಸೆಲಿಂಗ್ ಇದೇ ಮಾಸಾಂತ್ಯ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಕೆಲ ವೈದ್ಯಕೀಯ ಕಾಲೇಜುಗಳಿಗೆ ಹೊಸದಾಗಿ ಅನುಮತಿ ಪತ್ರ ವಿತರಿಸುವ ಪ್ರಕ್ರಿಯೆ ನಡೆದಿದೆ. ಇದರಿಂದ ಅಖಿಲ ಭಾರತ ಮಟ್ಟದಲ್ಲಿ ಇನ್ನಷ್ಟು ಎಂಬಿಬಿಎಸ್ ಸೀಟುಗಳು ಸೇರ್ಪಡೆಯಾಗಲಿವೆ. ಕೌನ್ಸೆಲಿಂಗ್ ತಡವಾಗಿರುವುದರಿಂದ ಆ ಸೀಟುಗಳು ಸಹ ಮೊದಲ ಸುತ್ತಿನಲ್ಲೇ ಲಭ್ಯವಾಗಲಿವೆ. ಅದೆಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆಯೇ ಮಾಸಾಂತ್ಯ ವೇಳೆಗೆ ಕೌನ್ಸೆಲಿಂಗ್ ಆರಂಭವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ನೀಟ್ ಯುಜಿ 2024ರಲ್ಲಿ ಯಾವುದೇ ಪ್ರಶ್ನೆಪತ್ರಿಕೆ ಸೋರಿಕೆ ಆಗಿಲ್ಲ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿದೆ. ಆ ಮೂಲಕ ಲಕ್ಷಾಂತರ ಯುವಜನರ ಶೈಕ್ಷಣಿಕ ಭವಿಷ್ಯವನ್ನು ಹಾಳು ಮಾಡಿದೆ. ನೀಟ್ ಯುಜಿ 2024ರ ಪರೀಕ್ಷೆಯಲ್ಲಿ ಪಶ್ನೆಪತ್ರಿಕೆ ಸೋರಿಕೆಯಾಗಿರುವುದು ನಿಜ, ಕೃಪಾಂಕ ವಿವಾದವೂ ನಡೆದಿದೆ. ಇಷ್ಟೆಲ್ಲಾ ಅಕ್ರಮವಾಗಿರುವಾಗ ನೀಟ್ ಯುಜಿ-2024ರ ಪರೀಕ್ಷೆಯನ್ನು ಮತ್ತೊಮ್ಮೆ ಪಾರದರ್ಶಕವಾಗಿ ನಡೆಸಬೇಕಿದೆ. ಎನ್‌ಸಿಇಆರ್‌ಟಿ ಪಠ್ಯದಲ್ಲಿ ಬದಲಾವಣೆ, ನೀಟ್-ನೆಟ್ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ. ಒಟ್ಟಾರೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಮೋದಿ ಸರಕಾರ ನಾಶಪಡಿಸಿದೆ.

- ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಭಾರತಕ್ಕೆ ಆದಷ್ಟು ಬೇಗ ಭೇಟಿ ನೀಡುವಂತೆ ಆಹ್ವಾನ

ಸ್ಟಾರ್ಮರ್‌ಗೆ ಮೋದಿ ಅಭಿನಂದನೆ

ದೆಹಲಿ: ಇತ್ತೀಚೆಗಷ್ಟೇ ಕೊನೆಗೊಂಡ ಬ್ರಿಟನ್ ಸಂಸತ್ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ನೂತನ ಪ್ರಧಾನಿಯಾಗಲಿರುವ ಕೀರ್ ಸ್ಟಾರ್ಮರ್ ಅವರಿಗೆ ಶನಿವಾರ ಬೆಳಗ್ಗೆ ಕರೆ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಅಭಿನಂದನೆ ಸಲ್ಲಿಸಿದರು. ಅದೇ ವೇಳೆ, ಆದಷ್ಟು ಬೇಗ ಭಾರತ ಭೇಟಿ ಹಮ್ಮಿಕೊಳ್ಳುವಂತೆ ಆಹ್ವಾನ ನೀಡಿದರು.

ಭಾರತ-ಬ್ರಿಟನ್ ನಡುವಿನ ಐತಿಹಾಸಿಕ ಬಾಂಧವ್ಯ ನೆನಪಿಸಿಕೊಂಡ ಉಭಯ ನಾಯಕರು, ಎರಡೂ ರಾಷ್ಟ್ರಗಳ ನಡುವಿನ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಮತ್ತಷ್ಟು ದೃಢಪಡಿಸುವ ಬಗ್ಗೆ ಚರ್ಚಿಸಿ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು ಎಂದು ಪ್ರಧಾನ ಮಂತ್ರಿಗಳ ಕಚೇರಿ (ಪಿಎಂಒ) ತಿಳಿಸಿದೆ. ಬ್ರಿಟನ್ ನಿಯೋಜಿತ ಪ್ರಧಾನಿ ಸ್ಟಾರ್ಮರ್, ದ್ವಿಪಕ್ಷೀಯ ಸಂಬಂಧ ಬಲಪಡಿಸುವ, ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಬ್ರಿಟನ್‌ನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯಲ್ಲಿ ಭಾರತೀಯರ ಮಹತ್ವದ ಕೊಡುಗೆಗಳನ್ನು ಶ್ಲಾಘಿಸಿದ ಸ್ಟಾರ್ಮರ್, ಎರಡೂ ದೇಶಗಳ ಜನರ ಸಂಬಂಧ ಮತ್ತಷ್ಟು ನಿಕಟಗೊಳಿಸಬೇಕಾದ ಅಗತ್ಯವನ್ನು ನೆನಪಿಸಿದರು ಎಂದು ಪಿಎಂಒ ಕಚೇರಿ ತಿಳಿಸಿದೆ. ಸ್ಟಾರ್ಮರ್ ಮತ್ತು ಲೇಬರ್ ಪಕ್ಷದ ಗೆಲುವಿಗೆ ಪ್ರಧಾನಿ ಮೋದಿ ಶುಕ್ರವಾರವೇ 'ಎಕ್ಸ್' ಸಂದೇಶ ಮೂಲಕ ಅಭಿನಂದನೆ ಸಲ್ಲಿಸಿದ್ದರು.

ಸುನಕ್‌ಗೆ ಧನ್ಯವಾದ

ಬ್ರಿಟನ್‌ನ ನಿರ್ಗಮಿತ ಪ್ರಧಾನಿ ರಿಷಿ ಸುನಕ್ ಅವರಿಗೂ ಕರೆ ಮಾಡಿ ಮಾತನಾಡಿದ ಪ್ರಧಾನಿ ಮೋದಿ, ಬ್ರಿಟನ್‌ನಲ್ಲಿ ನಿಮ್ಮದು ಶ್ಲಾಘನೀಯ ನಾಯಕತ್ವ. ನಿಮ್ಮ ಅಧಿಕಾರವಧಿಯಲ್ಲಿ ಭಾರತ-ಬ್ರಿಟನ್ ಬಾಂಧವ್ಯವನ್ನು ಗಾಢವಾಗಿದೆ. ಈ ದಿಸೆಯಲ್ಲಿ ನಿಮ್ಮ ಕೊಡುಗೆಗೆ ಧನ್ಯವಾದ. ಉತ್ತಮ ಭವಿಷ್ಯಕ್ಕಾಗಿ ನಿಮಗೆ ಮತ್ತು ಕುಟುಂಬಕ್ಕೆ ಶುಭ ಹಾರೈಕೆ ಎಂದು ಮೋದಿ ಹೇಳಿದ್ದಾರೆ.

ಬಿಎಸ್‌ಪಿ ನಾಯಕ ಹತ್ಯೆ; 8 ಮಂದಿ ಬಂಧನ

ಚೆನ್ನೈ: ಬಹುಜನ ಸಮಾಜ ಪಕ್ಷದ(ಬಿಎಸ್‌ಪಿ) ತಮಿಳುನಾಡು ಘಟಕದ ಅಧ್ಯಕ್ಷ ಆರ್ಮ್‌ಸ್ಟ್ರಾಂಗ್ ಅವರ ಹತ್ಯೆ ಸಂಬಂಧ ತಮಿಳುನಾಡು ಪೊಲೀಸರು 8 ಮಂದಿಯನ್ನು ಶನಿವಾರ ನಸುಕಿನಲ್ಲಿ ಬಂಧಿಸಿದ್ದಾರೆ. ಹತ್ಯೆ ಪ್ರಕರಣದ ಪ್ರಾಥಮಿಕ ತನಿಖೆ ನಡೆದಿದ್ದು, ಇನ್ನಷ್ಟೇ ಸ್ಪಷ್ಟ ಚಿತ್ರಣ ಸಿಗಬೇಕಿದೆ. ಶಂಕೆಯ ಮೇರೆಗೆ 8 ಜನರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಅಪರಾಧಿಗಳ ಪತ್ತೆಗಾಗಿ ಚೆನ್ನೈ ಪೊಲೀಸ್‌ನಿಂದಲೇ 10 ವಿಶೇಷ ತಂಡಗಳನ್ನು ರಚಿಸಲಾಗಿದೆ. ಬಿಎಸ್‌ಪಿ ರಾಜ್ಯಾಧ್ಯಕ್ಷ ಆಮ್ರ್‌ಸ್ಟ್ರಾಂಗ್ ಅವರನ್ನು ಪೆರಂಬೂರ್‌ನಲ್ಲಿರುವ ಅವರ ನಿವಾಸದ ಬಳಿಯೇ ಆರು ಮಂದಿಯ ತಂಡ ಶುಕ್ರವಾರ ಕೊಲೆ ಮಾಡಿದೆ.

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಯಾದಗಿರಿ
ಜಿ: ಯಾದಗಿರಿ. ಕರ್ನಾಟಕ ರಾಜ್ಯ, ದೂರವಾಣಿ: 08443 256300
E-mail: itstaff_ulb_yadgiri@yahoo.com, Website: www.yadgir@yahoo.com
ಸಂ: ಸಸಯಾ:ನೈರ್ಮಲ್ಯ ಶಾಖೆ:ಇ-ಟೆಂಡರ:2024-25 ದಿನಾಂಕ:06-07-2024.

-: ಇ-ಪ್ರಕ್ಯೂರಮೆಂಟ್ ದ್ವಿ-ಲಕೋಟೆಯ ಅಲ್ಪಾವಧಿ ಟೆಂಡರ ಪ್ರಕಟಣೆ :-

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ಇ-ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ 2023-24ನೇ ಸಾಲಿನ ಸ್ವಚ್ಛ ಭಾತರ ಮೀಷನ್ ಯೋಜನೆ 2.00 ರಡಿ ಅನುದಾನದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ಇಂಡೆಂಟ್ ನಂಬರ 1) DMA/2024- 25/OW/ WORK_ INDENT20901 ಗೆ ಇ-ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಟೆಂಡರ ಕರೆಯಲಾಗಿದ್ದು, ಇಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನೋಂದಾಯಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ಪಿ.ಡಬ್ಲ್ಯೂ.ಡಿ ನೋಂದಾಯಿತ ಗುತ್ತಿಗೆದಾರರುಗಳಿಂದ ಕೆ.ಡಬ್ಲ್ಯೂ-3 ರ Standard Tender Documentಗಳ ಅಡಿಯಲ್ಲಿ ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರಕ್ಯೂರಮೆಂಟ್‌ನಲ್ಲಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.yadgircity.mrc.gov.in ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1) **ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ:** 06-07-2024 ರಂದು 10.30 ರಿಂದ 2) **ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 22-07-2024 ರಂದು ಸಾಯಂಕಾಲ 5.30ರ ವರೆಗೆ. 3) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 23-07-2024 ರಂದು ಬೆಳ್ಳಿಗ್ಗೆ 11.00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26-07-2024 ರಂದು ಬೆಳ್ಳಿಗ್ಗೆ 11.00 ಗಂಟೆಗೆ

ಸಹಿ/- ಪೌರಾಯುಕ್ತರು
ನಗರಸಭೆ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/65/ಕೆ.ಎಸ್.ಎಂ.ಸಿ&ಎ/2024-25

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/11/2024-25 ದಿನಾಂಕ: 04-07-2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30-01-2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಮುತ್ಸಂದ್ರ ಗ್ರಾಮ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ವಿ. ವೆಂಕಟೇಶ್ ಬಿನ್ ಸಿ. ವೆಂಕಟಪ್ಪ	231/2 ರ ಪೈಕಿ	01-00 1/2
2		231/4 ರ ಪೈಕಿ	01-13 1/2

ಷರಾ:- ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,ಹೊಸಕೋಟೆ.
ವಾಸಾಸಂಇ/ವಾ.ಪ್ರ/806/ಅಡ್ವಟೋರ್/2024-25

ಮೆದುಳು ತಿನ್ನುವ ಅಮೀಬಾ ಸೋಂಕು 4ನೇ ಪ್ರಕರಣ ಪತ್ತೆ

ಕೋಯಿಕ್ಕೋಡ್ ಬಾಲಕನಿಗೆ ಸೋಂಕು

ಕೋಯಿಕ್ಕೋಡ್: ಕೇರಳದಲ್ಲಿ ಮಾರಣಾಂತಿಕ ಅಮೀಬಿಕ್ ಮೆನಿಂಗೂ ಎನ್ಸೆಫಾಲಿಟಿಸ್ ಸೋಂಕಿನ (ಮೆದುಳು ತಿನ್ನುವ ಅಮೀಬಾ) 4ನೇ ಪ್ರಕರಣ ಪತ್ತೆಯಾಗಿದ್ದು, 14 ವರ್ಷದ ಬಾಲಕನನ್ನು ಕೋಯಿ ಕ್ಕೋಡ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜು.1ರಂದೇ ಆಸ್ಪತ್ರೆಗೆ ದಾಖಲಿಸಲಾ ಗಿದ್ದು, ವೆಂಟಿಲೇಟರ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ವಿದೇಶದಿಂದ ಔಷಧ ತರಿಸಿ ಕೊಡಲಾಗಿದೆ. ಸದ್ಯ ಬಾಲಕನ ಆರೋಗ್ಯ ಸ್ಥಿತಿಯಲ್ಲಿ ನಿಧಾನವಾಗಿ ಚೇತರಿಕೆ ಕಾಣುತ್ತಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಅಮೀಬಿಕ್ ಮೆನಿಂಗೂ ಎನ್ಸೆಫಾಲಿಟಿಸ್ ರೋಗದ ಲಕ್ಷಣಗಳು ಬಾಲಕನಲ್ಲಿ ಕಂಡು ಬಂದಿದೆ. ಉತ್ತರ ಕೇರಳದ ಕೋಯಿಕ್ಕೋಡ್ ಜಿಲ್ಲೆಯ ಪಯ್ಯೋಳಿ ಪ್ರದೇಶದ ಬಾಲಕ ಈಜುಕೊಳಕ್ಕೆ ಹೋಗಿದ್ದಾಗ ಸೋಂಕು ತಗುಲಿರಬಹುದು ಎನ್ನಲಾಗಿದೆ. ಮೇ ತಿಂಗಳಿಂದ ರಾಜ್ಯದಲ್ಲಿ ಒಟ್ಟು ನಾಲ್ಕು ಪ್ರಕರಣಗಳು ಪತ್ತೆಯಾದಂತಾಗಿದೆ. ಸೋಂಕಿ ತರೆಲ್ಲ ಚಿಕ್ಕಪ್ರಾಯದ ಮಕ್ಕಳಾಗಿದ್ದಾರೆ. ಈ ಪೈಕಿ ಮೂವರ ಜೀವಹಾನಿಯಾಗಿದೆ.

ಸೋಂಕ ತಡೆ ಸಂಬಂಧ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಶುಕ್ರವಾರ ಉನ್ನತ ಮಟ್ಟದ ಸಭೆ ನಡೆದಿದ್ದು, ಆರೋಗ್ಯ ಸಚಿವೆ ವೀಣಾ ಜಾರ್ಜ್, ಮುಖ್ಯ ಕಾರ್ಯದರ್ಶಿ ವೇಣು, ಆರೋಗ್ಯ ಇಲಾಖೆ ಹೆ.ಮುಖ್ಯ ಕಾರ್ಯದರ್ಶಿ ರಾಜನ್ ಎನ್ ಖೋಬ್ರಗಡೆ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ ವೈರಾಲಜಿ ನಿರ್ದೇಶಕ ಡಾ. ಇ.ಶ್ರೀಕುಮಾರ್ ಭಾಗಿಯಾಗಿದ್ದರು. ಈಜುಕೊಳಗಳನ್ನು ಸ್ವಚ್ಛಗೊಳಿಸಲು, ಕಲುಷಿತ ನೀರಲ್ಲಿ ಮಕ್ಕಳು ಆಟವಾಡದಂತೆ ತಡೆಯಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಏಕಕೋಶ ಜೀವಿ ಅಮೀಬಾ ಬ್ಯಾಕ್ಟೀರಿಯ ಕಲುಷಿತ ನೀರಿನಿಂದ ಮೂಗಿನ ಮೂಲಕ ಮಾನವ ದೇಹ ಪ್ರವೇಶಿಸಿ ಮೆದುಳಿಮ ಮೇಲೆ ದಾಳಿ ಮಾಡುತ್ತದೆ. ಮೆದುಳನ್ನೇ ತಿನ್ನುತ್ತಾ ಸಾವಿಗೆ ಕಾರಣವಾಗುತ್ತದೆ ಎಂದು ತಜ್ಞರು ತಿಳಿಸಿದ್ದಾರೆ. 2017 ಮತ್ತು 2023ರಲ್ಲಿ ಕೇರಳದ ಆಲಪ್ಪುಳ ಜಿಲ್ಲೆಯಲ್ಲಿ ಅಮೀಬಾ ಸೋಂಕು ಪ್ರಕರಣ ವರದಿಯಾಗಿತ್ತು.



ಕೇರಳದಲ್ಲೇ 3 ಸಾವು

ಕೇರಳದಲ್ಲಿ ಮಾರಣಾಂತಿಕ ಅಮೀಬಿಕ್ ಮೆನಿಂ ಗೂ ಎನ್ಸೆಫಾಲಿಟಿಸ್ ಸೋಂಕಿ ನಿಂದ (ಮೆದುಳು ತಿನ್ನುವ ಅಮೀಬಾ) ಈವರೆಗೆ 3 ಸಾವು ಸಂಭವಿಸಿದೆ. ಮೃತರೆಲ್ಲರೂ ಚಿಕ್ಕಪ್ರಾಯದವರು. ಜು.3ರಂದು 14 ವರ್ಷದ ಬಾಲಕ ಸೋಂಕಿಗೆ ಬಲಿಯಾದ. ಅದಕ್ಕೂ ಮುನ್ನ ಮಲಪ್ಪುರಂನ 5 ವರ್ಷದ ಬಾಲಕಿ ಮೇ 21ರಂದು ಮತ್ತು ಕಣ್ಣೂರಿನ 13 ವರ್ಷದ ಬಾಲಕಿ ಜೂ.25ರಂದು ಇದೇ ಸೋಂಕಿನಿಂದ ಸಾವಿಗೀಡಾದರು.

Office-08353-230236
ನಗರಸಭೆ, ರಬಕವಿ-ಬನಹಟ್ಟಿ
ಕಾರ್ಯಾಲಯ : ರಾಮಪೂರ
ಜಿಲ್ಲಾ : ಬಾಗಲಕೋಟ ಕರ್ನಾಟಕ ರಾಜ್ಯ
ಕ್ರ.ಸಂ.:ನಸರಬ/SBM/MRF/ಇಟೆಂಪ್ರ ಕಾಲ್-2/2024-25 ದಿನಾಂಕ: 06-07-2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಕಾಲ್-2

ನಗರಸಭೆ, ರಬಕವಿ-ಬನಹಟ್ಟಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ತಿದ್ದುಪಡಿ ಅಧಿನಿಯಮ/ನಿಯಮಗಳ ಪ್ರಕಾರ, ಸ್ವಚ್ಛ ಭಾರತ್ ಮಿಷನ್ (ನಗರ) 2.0 ಅಡಿಯಲ್ಲಿ ಅನುದಾನದಲ್ಲಿ ಸ್ಟ್ಯಾಂಡರ್ಡ್ ಬಿಡ್‌ನಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕೆಳಕಾಣಿಸಿದ ಇಂಡೆಂಟ್ ನಂಬರ್ 20790 ಕಾಲ್-2 ನೇದ್ದರ ಕಾಮಗಾರಿಗೆ ಟೆಂಡರ್ ಪ್ರಕಟಣೆ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 15-07-2024ರ ಸಾಯಂಕಾಲ 4-30 ಗಂಟೆ ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು ಹಾಗೂ ಟೆಂಡರ್‌ಗಳನ್ನು ದಿನಾಂಕ 16-07-2024 ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/-
ಪೌರಾಯುಕ್ತರು
ನಗರಸಭೆ, ರಬಕವಿ-ಬನಹಟ್ಟಿ

ಸಹಿ/-
ಆಡಳಿತಾಧಿಕಾರಿಗಳು
ನಗರಸಭೆ, ರಬಕವಿ-ಬನಹಟ್ಟಿ
ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟ

ಅಹಮದಾಬಾದ್ ಕಾರ್ಯಕರ್ತರ ಸಭೆ

ಆಯೋಧ್ಯೆಯಂತೆ ಗುಜರಾತಲ್ಲೂ ಸೋಲಿಸುತ್ತೇವೆ: ರಾಹುಲ್

ಅಹಮದಾಬಾದ್: ಉತ್ತರ ಪ್ರದೇಶದ ಶ್ರೀರಾಮ ಮಂದಿರ ನಿರ್ಮಿಸಿರುವ ಅಯೋ ಧ್ಯೆ ಒಳಗೊಂಡಂತೆ ಇರುವ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿಯೇ ಬಿಜೆಪಿಯನ್ನು ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಯಲ್ಲಿ 'ಇಂಡಿ' ಒಕ್ಕೂಟ ಸೋಲಿಸಿದೆ. ಅದೇ ಬಗೆಯಲ್ಲಿ ಮುಂಬರುವ ಗುಜರಾತ್ ವಿಧಾ ನಸಭಾ ಚುನಾವಣೆಯಲ್ಲಿಯೂ ಬಿಜೆಪಿ ಯನ್ನು ಸೋಲಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಲೋಕಸಭೆಯಲ್ಲಿ ಹಿಂದೂಗಳು ಹಿಂಸಾಚಾರ ನಡೆಸುವವರು ಎಂಬ ಹೇಳಿಕೆ ನೀಡಿದ್ದ ರಾಹುಲ್ ನಡೆ ಖಂಡಿಸಿ ಹಿಂದೂ ಸಂಘಟನೆಗಳು, ಬಿಜೆಪಿ ಕಾರ್ಯಕರ್ತ ರು ಗುಜರಾತ್‌ನಲ್ಲಿನ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿತ್ತು. ಕಲ್ಲು ತೂರಾಟವೂ ನಡೆದಿತ್ತು. ಇದರಿಂದ ಎಸಿಪಿ ಸೇರಿದಂತೆ ಐವರು ಪೊಲೀಸರು ಗಾಯಗೊಂಡಿದ್ದರು. ಕಾಂಗ್ರೆಸ್ ಕಚೇರಿಗೂ ಹಾನಿಯಾಗಿತ್ತು. ಈ ಹಿನ್ನೆಲೆಯಲ್ಲಿ ಅಹಮದಾಬಾದ್‌ಗೆ ಶನಿವಾರ ಭೇಟಿ ನೀಡಿದ ರಾಹುಲ್ ಗಾಂಧಿ, ಕಾರ್ಯಕರ್ತರು, ಸ್ಥಳೀಯ ನಾಯಕರ ಸಭೆ ನಡೆಸಿದರು. ಪಕ್ಷದ ಕಾರ್ಯಕರ್ತರ ಜತೆ ಮಾತನಾಡಿ ಧೈರ್ಯ ತುಂಬುವ ಪ್ರಯತ್ನ ಮಾಡಿದರು. ಉತ್ತರ ಪ್ರದೇಶದ ಆಯೋಧ್ಯೆಯಲ್ಲಿ ಸೋಲಿನ ರುಚಿ ತೋರಿಸಿದ್ದೇವೆ. ಅದೇ ರೀತಿ ಗುಜರಾತ್‌ನಲ್ಲಿಯೂ ಬಿಜೆಪಿ ಮತ್ತು ಮೋದಿಗೆ ಸೋಲು ಕಾಣುವಂತೆ ಮಾಡುತ್ತೇವೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಇಲ್ಲಿ ಕಾಂಗ್ರೆಸ್ ಜಯ ಸಾಧಿಸುವ ಮೂಲಕ ಗುಜರಾತಲ್ಲಿ ಹೊಸ ಯುಗ ಆರಂಭಗೊಳ್ಳಲಿದೆ ಎಂದು ಹೇಳಿದರು. ಗುಜರಾತ್‌ನಲ್ಲಿನ ನಮ್ಮ ಪಕ್ಷದ ಕಚೇರಿಗೆ ಹಾನಿ ಮಾಡಿರುವ ಬಿಜೆಪಿ ಕಾರ್ಯ ಕರ್ತರು ನಮಗೆ ಸವಾಲು ಹಾಕಿದ್ದಾರೆ. ಅದಕ್ಕೆ ಉತ್ತರವಾಗಿ ನಾವು ರಾಜ್ಯದಲ್ಲಿರುವ ಅವರ ಸರಕಾರವನ್ನೇ ಕಿತ್ತೊಗೆ ಯೋಣ ಎಂದು ಪಕ್ಷದ ಗುಜರಾತ್ ಘಟಕದ ಕಾರ್ಯಕರ್ತರನ್ನು ಕಾಂಗ್ರೆಸ್ ನಾಯಕ ರಾಹುಲ್ ಹುರಿದುಂಬಿಸಿದರು.

ಭಾರತದ ಗಿಡಮೂಲಿಕೆ ಮೇಲೆ ಯೂರೋಪ್ ವಾರೆನೋಟ!

ಅಶ್ವಗಂಧಕ್ಕೆ ಡೆನ್ಮಾರ್ಕ್ ನಿಷೇಧ!

ಕೂಪನ್‌ಹೇಗನ್/ದೆಹಲಿ: ಭಾರತೀಯ ಆಯುರ್ವೇದ ಪರಂಪರೆ-ಚಿಕಿತ್ಸಾ ಪದ್ಧತಿಯಲ್ಲಿ ಮಹತ್ವದ ಸ್ಥಾನ ಪಡೆದಿರುವ 'ಅಶ್ವಗಂಧ'ವನ್ನು ಡೆನ್ಮಾರ್ಕ್ ಸರಕಾರ ನಿಷೇಧಿಸಿದೆ!

ಲೈಂಗಿಕ ಹಾರ್ಮೋನ್ ಮತ್ತು ಸಂತಾನೋತ್ಪತ್ತಿ ಮೇಲೆ ಅಶ್ವಗಂಧ ಋಣಾತ್ಮಕ ಪರಿಣಾಮ ಬೀರುತ್ತದೆ. ಗರ್ಭಪಾತಕ್ಕೂ ಕಾರಣವಾಗಲಿದೆ. ಅಲ್ಲದೇ, ಅಶ್ವಗಂಧ ಕೇಂದ್ರ ನರಮಂಡಲ, ಥೈರಾಯ್ಡ್ ಗ್ರಂಥಿ ಮೇಲೂ ಪರಿಣಾಮ ಬೀರ ಬಹುದು. ಲಿವರ್‌ನಲ್ಲಿ ಸಮಸ್ಯೆ ಉಂಟು ಮಾಡಬಹುದು ಎಂದು ಟೆಕ್ನಾಲಜಿ ಯೂನಿವರ್ಸಿಟಿ ಆಫ್ ಡೆನ್ಮಾರ್ಕ್ 2020ರ ಮೇನಲ್ಲಿ ವರದಿ ನೀಡಿತ್ತು. ಆ ವರದಿ ಆಧರಿಸಿ ಡೆನ್ಮಾರ್ಕ್ ಸರಕಾರ ಈಗ ನಿಷೇಧ ಕ್ರಮ ಕೈಗೊಂಡಿದೆ.

ಈವರೆಗೂ ನಿರಾತಂಕವಾಗಿ ಈ ಗಿಡಮೂಲಿಕೆ ಬಳಸುತ್ತಿರುವ ಸ್ವೀಡನ್, ಫಿನ್‌ಲೆಂಡ್, ಆಸ್ಟ್ರೇಲಿಯ, ನೆದರ್ಲೆಂಡ್, ಫ್ರಾನ್ಸ್, ಟರ್ಕಿ, ಯುರೋಪಿಯನ್ ಒಕ್ಕೂಟದ ದೇಶಗಳು ಗೊಂದಲಕ್ಕೆ ಬಿದ್ದಿವೆ. ಜತೆಗೆ ಔಷಧ ಬಳಕೆ ಸಂಬಂಧ ಆತಂಕವನ್ನೂ ವ್ಯಕ್ತಪಡಿಸಿವೆ.

ಸಮಿತಿ ರಚಿಸಿದ ಭಾರತ: ಡೆನ್ಮಾರ್ಕ್ ಸರಕಾರದ ನಿಷೇಧ ನಿರ್ಧಾರ ಮತ್ತು ಪ್ರಯೋಗಾಲಯ ವರದಿ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಭಾರತದ ಆಯುಷ್ ಸಚಿವಾಲಯ, ಪ್ರಯೋಗಾಲಯ ವರದಿ ಮರುಪರಿಶೀಲಿಸುವ ಅಗತ್ಯವಿದೆ ಎಂದಿದೆ. ಅಶ್ವಗಂಧ ಬಹಳ ಸುರಕ್ಷಿತ ಎಂಬುದನ್ನು ದೃಢಪಡಿಸಲು 400 ಪುಟಗಳಷ್ಟು ದಾಖಲೆಗಳಿವೆ. ಡೆನ್ಮಾರ್ಕ್ ವಿವಿ ವರದಿಯಲ್ಲಿ ವೈಜ್ಞಾನಿಕ ಕೊರತೆ ಎದ್ದು ಕಾಣಿಸುತ್ತಿದೆ ಎಂದಿರುವ ಆಯುಷ್ ಸಚಿವಾಲಯ, ಡೆನ್ಮಾರ್ಕ್ ಆರೋಪವನ್ನು ತಳ್ಳಿಹಾಕಿದೆ.

ಟೆಕ್ನಾಲಜಿ ಯೂನಿವರ್ಸಿಟಿ ಆಫ್ ಡೆನ್ಮಾರ್ಕ್ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೈಂಟಿಫಿಕ್ ಜರ್ನಲ್ ಆಫ್ ಆಯುರ್ವೇದ ಆ್ಯಂಡ್ ಇಂಟಿಗ್ರೇಟಿವ್ ಮೆಡಿಸಿನ್ ಕೂಡ ಅನುಮಾನ ವ್ಯಕ್ತಪಡಿಸಿದೆ. ವರದಿಯ ವೈಜ್ಞಾನಿಕತೆ ಪರಿಶೀಲಿಸಲು ಆಯುಷ್ ಸಚಿವಾಲಯ ಸಮಿತಿಯನ್ನೂ ರಚಿಸಿದೆ.

ಅಶ್ವಗಂಧ ರಫ್ತು; ಭಾರತ ಅಗ್ರಗಣ್ಯ

ಭಾರತ ವಿಶ್ವದ ಅತಿದೊಡ್ಡ ಅಶ್ವಗಂಧ ಉತ್ಪಾದಕ ದೇಶ. ವರ್ಷಕ್ಕೆ 4,000 ಟನ್ ಅಶ್ವಗಂಧ ಬೇರು ಉತ್ಪಾದನೆ ಮಾಡುತ್ತದೆ. ವಿವಿಧ ದೇಶಗಳಿಗೆ ಅಶ್ವಗಂಧ ಪೂರೈಕೆ ಮಾಡುವುದರಲ್ಲಿ ಭಾರತದ ಕೊಡುಗೆ ಶೇ.42ರಷ್ಟಿದೆ ಎಂದಿರುವ ಭಾರತ ಸರಕಾರ, ಡೆನ್ಮಾರ್ಕ್ ದೇಶದ ನಿರ್ಧಾರ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಹೇಳಿದೆ.

ಆಳ್ವಾಸ್ ಎಐಇಟಿ ಕಾಲೇಜು ಸ್ವಾಯತ್ತ

ಸಂಶೋಧನೆ ವಿಭಾಗದಲ್ಲಿ ಗಣನೀಯ ಸಾಧನೆ | ಸರಕಾರದಿಂದ 1.25 ಕೋಟಿ ಅನುದಾನ ಬಿಡುಗಡೆ

ಮೂಡುಬಿದಿರೆ: ಕಲೆ, ಸಂಸ್ಕೃತಿ, ಕ್ರೀಡೆಯ ಮೂಲಕ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಶ್ರಮಿಸುತ್ತಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಂಗ ಸಂಸ್ಥೆಯಾದ ಮೂಡುಬಿದಿರೆ ತಾಲೂಕಿನ ಮಿಜಾರಿನ ಪ್ರಕೃತಿಯ ಮಡಿನಲ್ಲಿರುವ ಆಳ್ವಾಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜು (ಎಐಇಟಿ) ಸ್ವಾಯತ್ತ ಸ್ಥಾನಮಾನ ಪಡೆದಿದ್ದು, 2034-35ನೇ ಸಾಲಿನ ವರೆಗೆ ಅನ್ವಯಿಸಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು ನ್ಯಾಕ್‌ನ ಮೊದಲ ಸೈಕಲ್‌ನಲ್ಲೇ ೦+ ಶ್ರೇಣಿಯನ್ನು ಸಿಜಿಪಿಎ 3.32 (4 ಸ್ಕೇಲ್) ಗ್ರೇಡ್‌ನೊಂದಿಗೆ 16 ಜನವರಿ 2028ರ ವರೆಗೆ ಅನ್ವಯವಾಗುವಂತೆ ಪಡೆದಿದೆ. ನಿರ್ಫ್ ಇನ್ನೋವೇಷನ್ ರ್‍ಯಾಂಕಿಂಗ್ ಅನ್ನು 150ರಿಂದ 300 ಬ್ಯಾಂಡ್‌ನಲ್ಲಿ ಪಡೆದಿದೆ. ಜೊತೆಯಲ್ಲಿ ಕಾಲೇಜಿನ ಹಲವು ಎಂಜಿನಿಯರಿಂಗ್‌ಗೆ ವಿಭಾಗಗಳು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆಯನ್ನು ಪಡೆದಿವೆ.

ಪ್ರಮುಖ ಸಂಶೋಧನಾ ಸಂಸ್ಥೆಯಾದ ಇಸ್ರೊ ಹಾಗೂ ಇಸ್ರೋದ ಸಹ ಸಂಸ್ಥೆಗಳಾದ ರಾಷ್ಟ್ರೀಯ ದೂರ ಸಂವೇದಿ ಕೇಂದ್ರ, ಹೈದರಾಬಾದ್, ಪ್ರಾದೇಶಿಕ ದೂರ ಸಂವೇದಿ ಕೇಂದ್ರ, ಬೆಂಗಳೂರು, ರಾಷ್ಟ್ರೀಯ ವಾಯುಮಂಡಲ ಸಂಶೋಧನಾ

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಶನಿವಾರ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ಅವರು ಮಾತನಾಡಿದರು.

ಪ್ರಯೋಗಾಲಯಗಳು, ಗಡಂಕಿ, ಜೊತೆ ಆಳ್ವಾಸ್ ಮಹತ್ವದ ಒಡಂಬಡಿಕೆ ಮಾಡಿಕೊಂಡಿದೆ. ಇವುಗಳ ಜೊತೆ ಟೊಯೊಟೊ ಕಿರ್ಲೋಸ್ಕರ್ ಮೋಟಾರ್ಸ್, ಬೆಂಗಳೂರು, ಬುಲ್ಲರ್ ಇಂಡಿಯಾ ಕಂಪನಿ, ಬಿಟಾ ಸಿಎಇ ಸಿಸ್ಟಮ್ಸ್ ಇಂಡಿಯಾ ಪ್ರೈ.ಲಿ ಜೊತೆ ಒಪ್ಪಂದ ಮಾಡಿಕೊಂಡಿದೆ. ಒಲ್ವೋ, ಸನ್ಸೆರಾ, ಎಸ್ ಮ್ಯಾನುಫೆಕ್ಚರಿಂಗ್ ಸಿಸ್ಟಮ್ಸ್ ಮತ್ತಿತರ ಸಂಸ್ಥೆಗಳ ಜೊತೆ ಇಂಟರ್ನ್‌ಶಿಪ್, ಪ್ರಾಜೆಕ್ಟ್, ತಾಂತ್ರಿಕ ಚರ್ಚೆ, ಕಾರ್ಯಾಗಾರ, ಕೈಗಾರಿಕಾ ಭೇಟಿ, ಉನ್ನತ ಶಿಕ್ಷಣ ಹಾಗೂ ಬೋಧಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಬೌದ್ಧಿಕ ಆಸ್ತಿ ಹಕ್ಕು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಲ್ಲೂ ಗಣನೀಯ ಸಾಧನೆ ಮೆರೆದಿರುವ ಆಳ್ವಾಸ್, 2024ರಲ್ಲಿ 15 ಪೇಟೆಂಟ್‌ಗಳನ್ನು ಪ್ರಕಟಗೊಳಿಸಿದ್ದು, ಜೊತೆಯಲ್ಲಿ 8 ಪೇಟೆಂಟ್‌ಗಳ ಮಾನ್ಯತೆಗಳಿಸಿರುವುದು ಉಲ್ಲೇಖನೀಯ ಸಾಧನೆಯಾಗಿದೆ. ಅಲ್ಲದೆ ಇಲ್ಲಿನ ಹೆಚ್ಚಿನ ಸಂಶೋಧನಾ ಪ್ರಬಂಧಗಳು ಪೀರ್ ರಿವ್ಯೂಡ್ ಜರ್ನಲ್‌ಗಳಲ್ಲಿ ಪ್ರಕಟಗೊಳ್ಳುತ್ತಿವೆ. 2023-24ನೇ ಸಾಲಿನಲ್ಲಿ ಸರಕಾರಿ ಸಂಶೋಧನಾ ಕೇಂದ್ರಗಳಿಂದ 1.25 ಕೋಟಿ ರೂಪಾಯಿ ಅನುದಾನ ಪಡೆದಿರುವುದು ಸಂಸ್ಥೆಯು ಆವಿಷ್ಕಾರ ಹಾಗೂ ತಂತ್ರಜ್ಞಾನದ ಉನ್ನತೀಕರಣದಲ್ಲಿ ಹೊಂದಿದ ಬದ್ಧತೆಯನ್ನು ತೋರಿಸುತ್ತದೆ.

ಇಸ್ರೋದಿಂದ ಒಂದು ಕೋಟಿಗೂ ಅಧಿಕ ಮೌಲ್ಯದ ಎಲ್‌ಡಿಎಸ್- ಮಿಂಚು ಪತ್ತೆ ಸಂವೇದಿ ಜಾಲ, ಜಿಎನ್‌ಎಸ್‌ಎಸ್ ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ಸ್ ಮತ್ತು ಅಟೋಮೆಟಿಕ್ ವೆದರ್ ಸ್ಟೇಷನ್ ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಸಮಕಾಲೀನ ಸಮಸ್ಯೆಗಳ ಕುರಿತು ಪ್ರಾಜೆಕ್ಟ್ ಮತ್ತು ಇಂಟರ್ನ್‌ಶಿಪ್ ಮಾಡಲು ಅವಕಾಶ ಕಲ್ಪಿಸಿದೆ.

ಬಹುರಾಷ್ಟ್ರೀಯ ಕಂಪೆನಿಗಳಾದ ಇನ್ಫೋಸಿಸ್, ಸ್ಟೇಲಿಯಂ, ಬಿಟಾ ಸಿಸ್ಟಮ್ಸ್ ಇಂಡಿಯಾ ಪ್ರೈ.ಲಿ. ಮತ್ತು ರಹ್ಮತ್-ಟೆಕ್, ಇಂಟರ್‌ನ್ಯಾಷನಲ್ ಎಫ್‌ಝಇ ಸಂಸ್ಥೆಗಳ ಘಟಕಗಳು ಕಾಲೇಜಿನ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಅತ್ಯುನ್ನತ ಸಾಧನೆ ಮೆರೆದಿರುವ ಇಲ್ಲಿನ ವಿದ್ಯಾರ್ಥಿಗಳು, ವಿಶ್ವವಿದ್ಯಾಲಯ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳಿಸಿ, ವಿಟಿಯು ವಿವಿಯನ್ನು ದೇಶಿಯ ಮಟ್ಟದಲ್ಲಿ ಮಿಂಚುವಂತೆ ಮಾಡಿದೆ. ಪತ್ರಿಕಾಗೋಷ್ಠಿಯಲ್ಲಿ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ ಪೀಟರ್ ಫೆರ್ನಾಂಡೀಸ್, ಅಕಾಡೆಮಿಕ್ಸ್ ಡೀನ್ ಡಾ ದಿವಾಕರ ಶೆಟ್ಟಿ, ರಿಸರ್ಚ್ ಡೀನ್ ಡಾ.ರಿಚರ್ಡ ಪಿಂಟೋ ಉಪಸ್ಥಿತರಿದ್ದರು.

ಆಳ್ವಾಸ್‌ನಿಂದ ಒಡಂಬಡಿಕೆ

ಪ್ರಮುಖ ಸಂಶೋಧನಾ ಸಂಸ್ಥೆಯಾದ ಇಸ್ರೊ ಹಾಗೂ ಇಸ್ರೋದ ಸಹ ಸಂಸ್ಥೆಗಳಾದ ರಾಷ್ಟ್ರೀಯ ದೂರ ಸಂವೇದಿ ಕೇಂದ್ರ, ಹೈದರಾಬಾದ್, ಪ್ರಾದೇಶಿಕ ದೂರ ಸಂವೇದಿ ಕೇಂದ್ರಗಳ ಜೊತೆ ಆಳ್ವಾಸ್ ಮಹತ್ವದ ಒಡಂಬಡಿಕೆ ಮಾಡಿಕೊಂಡಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

ಜಾಗತಿಕ ಮಾನ್ಯತೆಗೆ ನೆರವು ಸ್ವಾಯತ್ತದಿಂದ ಪ್ರಮುಖವಾಗಿ ಪಠ್ಯಕ್ರಮ ನಮ್ಯತೆ(ಪ್ರಸ್ತುತ ಬೇಡಿಕೆಗೆ ಅನುಗುಣವಾದ ಉದ್ಯೋಗಾಧರಿತ ಪಠ್ಯಕ್ರಮ ರೂಪಿಸಲು ಅವಕಾಶ), ನವನವೀನ ಬೋಧನಾ ಕ್ರಮಗಳ ಅಳವಡಿಕೆ, ಜಾಗತಿಕ ಮಾನ್ಯತೆಗೆ ನೆರವು ದೊರೆಯಲಿದೆ.

ಡಾ.ಎಂ.ಮೋಹನ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

ಶೃಂಗೇರಿ ಆಸ್ಪತ್ರೆಯಲ್ಲಿ ವೈದ್ಯರಿಲ್ಲದೇ ಪರದಾಟ

ಶೃಂಗೇರಿ: ಕಳೆದ ಒಂದು ವರ್ಷಕ್ಕೂ ಅಧಿಕ ಅವಧಿಯಿಂದ ಶೃಂಗೇರಿ ತಾಲೂಕು ಆಸ್ಪತ್ರೆಯಲ್ಲಿ ಹೆರಿಗೆ ವೈದ್ಯರು ಇಲ್ಲ, ಅದರಿಂದಾಗಿ ಶೃಂಗೇರಿ ಜನರ ಪರದಾಟ ಅಷ್ಟಿಷ್ಟಲ್ಲ, ಪ್ರಸೂತಿ ಮತ್ತು ಸ್ತ್ರೀರೋಗಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಬೇಕಾದಲ್ಲಿ 30 ಕಿಲೋಮೀಟರ್ ದೂರದ ಕೊಪ್ಪಕ್ಕೆ ತೆರಳಬೇಕಾಗಿದೆ.

ನೂತನ ಹೆರಿಗೆ ವೈದ್ಯರ ನೇಮಕ: ನೇಮಕವಾಗಿ 24 ಗಂಟೆಗಳ ಒಳಗೆ ಕೊಪ್ಪಕ್ಕೆ ನಿಯೋಜನೆ ಆದರೆ ಕಳೆದ ವಾರ ಶೃಂಗೇರಿ ತಾಲೂಕು ಆಸ್ಪತ್ರೆಗೆ ನೂತನವಾಗಿ ಡಾ. ವರ್ಷಾರಾಮ್ ಎಂಬ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ, ಆದರೆ ನೇಮಕವಾಗಿ ಕೇವಲ 24 ಗಂಟೆಗಳ ಒಳಗಾಗಿ ಅವರನ್ನು ಕೊಪ್ಪ ತಾಲ್ಲೂಕು ಆಸ್ಪತ್ರೆಗೆ ನಿಯೋಜನೆ ಮಾಡಲಾಗಿದೆ.

ಹೇಳುವವರಿಲ್ಲ ಕೇಳುವವರಿಲ್ಲದಂತಾದ ಶೃಂಗೇರಿ: ಕೊಪ್ಪ ಆಸ್ಪತ್ರೆಯಲ್ಲಿ ಈಗಾಗಲೇ ಒಬ್ಬರು ಹೆರಿಗೆ ವೈದ್ಯರಿದ್ದಾರೆ, ಆದರೆ ಕಳೆದ ಒಂದು ವರ್ಷದಿಂದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರನ್ನು ಹೊಂದಿಲ್ಲದ ಶೃಂಗೇರಿ ಆಸ್ಪತ್ರೆಗೆ ಈಗ ನೇಮಕವಾಗಿರುವ ವೈದ್ಯರನ್ನು ಸಹ ಒತ್ತಡಕ್ಕೆ ಒಳಗಾಗಿ ಕೊಪ್ಪಕ್ಕೆ ನಿಯೋಜನೆ ಮಾಡಲಾಗಿದೆ, ಮತ್ತೊಂದೆಡೆ ಶೃಂಗೇರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಸಹ ಇದ್ದು ಅದಕ್ಕೂ ಪರಿಹಾರ ಇಲ್ಲವಾಗಿದೆ. ಒಟ್ಟಾರೆ ಶೃಂಗೇರಿ ಮಟ್ಟಿಗೆ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗಿದೆ.

ಈ ಹಿಂದೆಯೂ ಮೂಳೆ ತಜ್ಞರ ನಿಯೋಜನೆ: ಈ ಹಿಂದೆ ಸಹ ಶೃಂಗೇರಿ ಆಸ್ಪತ್ರೆಗೆ ನೇಮಕವಾಗಿದ್ದ ಮೂಳೆ ತಜ್ಞರನ್ನು ಕೊಪ್ಪಕ್ಕೆ ನಿಯೋಜನೆ ಮಾಡಲಾಗಿತ್ತು, ಕಣ್ಣಿನ ತಜ್ಞರು ತಿಂಗಳಿಗೆ ಒಂದು ಬಾರಿ ಮಾತ್ರ ಶೃಂಗೇರಿಗೆ ನಿಯೋಜನೆ ಮಾಡಲಾಗಿತ್ತು. ಆಗ ನೂರು ಬೆಡ್ ಆಸ್ಪತ್ರೆ ಹೋರಾಟ ಸಮಿತಿಯ ಒತ್ತಡಕ್ಕೆ ಮಣಿದು ಶೃಂಗೇರಿಗೆ ವಾರಕ್ಕೆ ಎರಡು ದಿನ ಮೂಳೆ ತಜ್ಞರ ನೇಮಕ, ವಾರಕ್ಕೆ ಒಂದು ದಿನ ಕಣ್ಣಿನ ತಜ್ಞರ ನಿಯೋಜನೆ ಆದೇಶ ಮಾಡಲಾಗಿತ್ತು. ಆದರೆ ಈಗ ಮೂಳೆ ತಜ್ಞರು ಸಹ ಬೇರೆಡೆಗೆ ವರ್ಗಾವಣೆ ಆಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಕಾರ್ಮಿಕರ ಸುರಕ್ಷತೆಗೆ ಕ್ರಮ ವಹಿಸಿ: ಡಿಸಿ

ಉಡುಪಿ: ಕಟ್ಟಡ ನಿರ್ಮಾಣ ಸಂದರ್ಭ ಭೂ ಕುಸಿತ, ಅಪಘಾತ ಹಾಗೂ ಅವಘಡ ಉಂಟಾಗದಂತೆ, ಯಾವುದೇ ಕಾರ್ಮಿಕರ ಜೀವ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟಡ ನಿರ್ಮಾಣದಾರರಿಗೆ ಸೂಚಿಸಿರುತ್ತಾರೆ. ಯಾವುದೇ ಸುರಕ್ಷತೆ ವಹಿಸದೆ ಅಪಘಾತವಾಗಿ ಕಾರ್ಮಿಕರ ಜೀವ ಹಾನಿ ಹಾಗೂ ಇನ್ನಿತರ ಅವಘಡವಾದಲ್ಲಿ ಅಂತಹ ಕಾಮಗಾರಿಯ ನಿರ್ಮಾಣದಾರರ ವಿರುದ್ಧ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯಿದೆ 1996 ರಡಿ ಕಾನೂನು ಕ್ರಮ ಜರುಗಿಸುವುದಾಗಿ, ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಿ ಆದೇಶಿಸಲಾಗುವುದು. ಜೊತೆಗೆ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ 3 ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ದಂಡವನ್ನು ನ್ಯಾಯಾಲಯ ವಿಧಿಸಬಹುದಾಗಿದೆ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ರೈತ ಆತ್ಮಹತ್ಯೆ: 5 ಲಕ್ಷ ಪರಿಹಾರ

ಸುಳ್ಯ: ಅಡಕೆ ಕೃಷಿಗೆ ಹಳದಿ ರೋಗ ಬಾಧಿಸಿ ಆರ್ಥಿಕ ಸಂಕಷ್ಟಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ಮತ್ತು ಮಾಜಿ ಎಂಎಲ್‌ಸಿ ಹರೀಶ್ ಕುಮಾರ್ ಭೇಟಿ ನೀಡಿ ಸಾಂತ್ವನ ಹೇಳಿ 5 ಲಕ್ಷ ಪರಿಹಾರ ಘೋಷಣೆ ಮಾಡಿದರು. ಮಡಪ್ಪಾಡಿ ಗ್ರಾಮದ ಬಲ್ಕಜೆ ಸೀತಾರಾಮ ಎಂಬವರು ಅಡಕೆ ಕೃಷಿಗೆ ಬಾಧಿಸಿದ ಹಳದಿ ರೋಗಕ್ಕೆ ಸಿಲುಕಿ ತೋಟ ಸಂಪೂರ್ಣ ನಾಶಗೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಇದರಿಂದ ನೊಂದ ಸೀತಾರಾಮ ಅವರು 4 ದಿನದ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಶನಿವಾರ ಅವರ ಮನೆಗೆ ಸಚಿವ ದಿನೇಶ್ ಗುಂಡೂರಾವ್ ಮತ್ತು ಮಾಜಿ ಎಂಎಲ್‌ಸಿ. ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಭೇಟಿ ನೀಡಿ ಮನೆಯವರಿಗೆ ಸಾಂತ್ವನ ಹೇಳಿದರು.

ಐವನ್ ಡಿಸೋಜಾಗೆ ಎನ್‌ಎಸ್‌ಯುಐ ಸನ್ಮಾನ

ಮಂಗಳೂರು: ವಿಧಾನಪರಿಷತ್‌ನ ನೂತನ ಶಾಸಕರಾಗಿ ಆಯ್ಕೆಯಾದ ಐವನ್ ಡಿಸೋಜಾ ಅವರನ್ನು ಎನ್‌ಎಸ್‌ಯುಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾಧ್ಯಕ್ಷ ಸುಹಾನ್ ಆಳ್ವ ಅವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ, ಎನ್ ಎಸ್ ಯು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಕ್ರಿಸ್ಟನ್ ಮಿನೇಜಸ್, ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿರಾಜ್ ಗುದುರು, ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಕ್ಷ ಶಾನ್ ಶಿರಿ,ನಜೀಬ್ ಮಂಚಿ, , ರೋನ್ಸ್ಟನ್ ಸಿಕ್ವೇರಾ,ಸೋಹಾನ್,ವಿಶಾಲ್, ಫಾರೂಕ್ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ಬಸ್ ಸಂಚಾರಕ್ಕೆ ಮನವಿ

ಚಿಕ್ಕಮಗಳೂರು: ಚಿಕ್ಕಮಗಳೂರಿನ ನಲ್ಲೂರು ಗ್ರಾಮಕ್ಕೆ ಸ್ವಾತಂತ್ರ ಸಿಕ್ಕಿದಾಗಿನಿಂದಲೂ ಕೆಎಸ್‌ಆರ್‌ಟಿಸಿ ಬಸ್ ಗಳ ಸಂಚಾರ ವ್ಯವಸ್ಥೆ ಕಲ್ಪಿಸಿರಲಿಲ್ಲ, ಆದ ಕಾರಣ ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ ಹೋಗಲು ವಯೋವೃದ್ದರೂ ನಡೆದಾಡಲು ಕಷ್ಟವಾಗಿತ್ತು. ಈ ವಿಚಾರವಾಗಿ ಭೀಮ್ ಆರ್ಮಿ ಸಂಘಟನೆ ವತಿಯಿಂದ ಕೆಎಸ್‌ಆರ್‌ಟಿಸಿ ಡಿಸಿ ಯವರಿಗೆ ನಲ್ಲೂರು ಗ್ರಾಮಕ್ಕೆ ಬಸ್ಸಿನ ಸಂಚಾರ ವ್ಯವಸ್ಥೆಯನ್ನು ಮಾಡಿಕೊಡುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಭೀಮ್ ಆರ್ಮಿ ಗೌರವಾಧ್ಯಕ್ಷರು ಹೊನ್ನೇಶ್ ರವರು ತಾಲೂಕು ಅಧ್ಯಕ್ಷರಾದ ರಮೇಶ್ , ನಲ್ಲೂರು ಗ್ರಾಮಸ್ಥರಾದ ಮಧುಕುಮಾರ್ ಮತ್ತು ನಂದನ್ ಇದ್ದರು.

ನಿವೇಶನ ರಹಿತರಿಗೆ ಮನೆ ನೀಡಲು ಮನವಿ

ಚಿಕ್ಕಮಗಳೂರು: ಚಿಕ್ಕಮಗಳೂರು ನಗರಕ್ಕೆ ಹೊಂದಿಕೊಂಡಂತೆ ಎರೆಹಳ್ಳಿಯಲ್ಲಿ ಸುಮಾರು 12 ಎಕರೆ ಸರಕಾರಿ ಗ್ರಾಮ ಠಾಣಾ ಜಾಗವಿದ್ದು. ಭೂ ಮಾಫಿಯಾಗಳಿಗೆ ಒಬ್ಬೊಬ್ಬರಿಗೆ ಅರ್ಧ ಎಕರೆಯಿಂದ 2 ಎಕರೆವರೆಗೂ 2017ರ ಸಾಲಿನಿಂದ ಇಲ್ಲಿಯವರೆಗೂ ಅಕ್ರಮ ಖಾತೆ ದಾಖಲು ಮಾಡಲಾಗಿದೆ.ಇದನ್ನು ರದ್ದುಗೊಳಿಸಿ ನಿವೇಶನ ರಹಿತರಿಗೆ ನಿವೇಶನ, ಮನೆ ನೀಡಬೇಕೆಂದು ಸಂವಿಧಾನ ಸಂರಕ್ಷಣಾ ವೇದಿಕೆ ವತಿಯಿಂದ ಚಿಕ್ಕಮಗಳೂರು ಜಿಲ್ಲಾಧಿಕಾರಿಯವರಿಗೆ ಮನವಿ ನೀಡಲಾಯಿತು.ಸುಮಾರು 30 ಜನ ವಸತಿರಹಿತ ಕುಟುಂಬಗಳು ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂವಿಧಾನ ರಕ್ಷಣಾ ವೇದಿಕೆ ಮುಖಂಡ ಕೃಷ್ಣಮೂರ್ತಿ, ಮಂಜುಳಮ್ಮ ಮತ್ತು ಎರಹಳ್ಳಿ ಗ್ರಾಮಸ್ಥರು ಭಾಗವಹಿಸಿದ್ದರು.

ರಸ್ತೆಗೆ ಜಾರ್ಜ್ ಫರ್ನಾಂಡಿಸ್ ಹೆಸರು

ಮಂಗಳೂರು: ಮಹಾನಗರ ಪಾಲಿಕೆ ವತಿಯಿಂದ ನಗರದ ಸರ್ಕ್ಯೂಟ್ ಹೌಸ್ ಬಳಿಯಿಂದ ಬಿಜೈ ಸರ್ಕಲ್ ವರೆಗಿನ ರಸ್ತೆಗೆ ಜಾರ್ಜ್ ಫರ್ನಾಂಡಿಸ್ ರಸ್ತೆ ಎಂದು ಅಧಿಕೃತವಾಗಿ ನಾಮಕರಣಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್ ಅವರು, ದಕ್ಷಿಣ ಭಾರತದಲ್ಲಿ ಜನಿಸಿ ಉತ್ತರ ಭಾರತದಲ್ಲಿ ರಾಜಕೀಯವಾಗಿ ಬಹು ಎತ್ತರಕ್ಕೆ ಬೆಳೆದವರು ಜಾರ್ಜ್ ಫರ್ನಾಂಡಿಸ್. ಚಿಕ್ಕಂದಿನಲ್ಲೇ ಅನ್ಯಾಯದ ವಿರುದ್ಧ ಸಿಡಿದೇಳುವ ಸ್ವಭಾವದ ಅವರು ಕ್ರಿಶ್ಚಿಯನ್ ಪಾದ್ರಿಯಾಗಬೇಕೆಂದು ಬಯಸಿದ್ದರು. ಆದರೆ ಅವರು ದೇಶದ ಅಮೂಲ್ಯ ಆಸ್ತಿಯಾದರು. ಉದ್ಯೋಗವನ್ನು ಅರಸಿ ಮುಂಬೈಗೆ ಹೋದ ಅವರು ಅಲ್ಲಿ ಕಾರ್ಮಿಕ ನಾಯಕನಾಗಿ ಕೊನೆಗೆ ದೇಶವೇ ಮೆಚ್ಚುವಂತಹ ರಾಜಕಾರಣಿಯಾದರು. ಅವರ ಬದುಕು ರಾಜಕೀಯ ಇತಿಹಾಸದಲ್ಲೇ ಅತ್ಯಂತ ರೋಚಕ.

ಇಂದಿರಾ ಗಾಂಧಿಯವರ ಕಾಲದಲ್ಲಿ ಇವರು ಅಖಿಲ ಭಾರತ ರೈಲ್ವೆ ನೌಕರರ ಸಂಘದ ಅಧ್ಯಕ್ಷರಾಗಿ ನಡೆಸಿದ ರೈಲ್ವೆ ನೌಕರರ ಮುಷ್ಕರ ಇಡೀ ದೇಶದ ರೈಲ್ವೆ ಸಂಪರ್ಕ ಸ್ಥಬ್ದವಾಯಿತು. ಅಂದೇ ಈ ಮನುಷ್ಯ ಸಾಮಾನ್ಯನಲ್ಲ ಎಂಬುದು ಇಂದಿರಾಗಾಂಧಿಯವರ ಅರಿವಿಗೆ ಬಂದಿತ್ತು. ದೇಶದ ತುರ್ತು ಪರಿಸ್ಥಿಯ ವೇಳೆ ಭೂಗತರಾಗಿ ಹೋರಾಟ ಸಂಘಟಿಸಿದರು. ಕೊನೆಗೆ ಜೈಲು ಸೇರಿದರೂ ಜೈಲಿನಲ್ಲೇ ಇದ್ದು ದಾಖಲೆಯ ಮಟ್ಟದಲ್ಲಿ ಗೆದ್ದು ಕೇಂದ್ರ ಮಂತ್ರಿಯೂ ಆದರು. ವಾಜಪೇಯಿಯವರ ಜೊತೆ ಎನ್‌ಡಿಎ ಸೇರಿ ರೈಲ್ವೆ ಸಚಿವರಾಗಿ ಅಭೂತ ಪೂರ್ವ ಅಭಿವೃದ್ಧಿ ಕೆಲಸಗಳನ್ನು ಮಾಡಿದರು.

ಮೂಲೆಗುಂಪಾಗಿದ್ದ ಕೊಂಕಣ ರೈಲ್ವೆ ಯೋಜನೆಯನ್ನು ಮತ್ತೆ ಕೈಗೆತ್ತಿಕೊಂಡು ಅದಕ್ಕೆ ಜೀವಕೊಟ್ಟು ಯೋಜನೆಯನ್ನು ಸಾಕಾರಗೊಳಿಸಿದ ಕೀರ್ತಿ ಜಾರ್ಜ್‌ರದ್ದು. ದೇಶದ ರಕ್ಷಣಾ ಸಚಿವರಾಗಿ ಕೈಗೊಂಡ ಕ್ಷಿಪ್ರ ನಿರ್ಧಾರಗಳು, ಮಾಡಿದ ಕೆಲಸಗಳ ಬಗ್ಗೆ ಇಡೀ ದೇಶಕ್ಕೆ ಹೆಮ್ಮೆಯಿದೆ. ಸಿಯಾಚಿನ್ ನೀರ್ಗಲ್ಲು ಪ್ರದೇಶಕ್ಕೆ ಹದಿನೆಂಟು ಸಲ ಭೇಟಿ ನೀಡಿದ ಏಕಮಾತ್ರ ರಕ್ಷಣಾ ಸಚಿವ ಅವರಾಗಿದ್ದು ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಮಣ್ಣು ಮುಕ್ಕಿಸಿದರು. ಜಾರ್ಜ್, ವಾಜಪೇಯಿ, ಅಡ್ವಾಣಿಯವರ ಮಧ್ಯೆ ಅದಮ್ಯ ದೇಶ ಪ್ರೇಮದ ಬಲವಿತ್ತು. ಇವರ ಜೀವನಗಾಥೆ ಮುಂದಿನ ಹಲವು ತಲೆಮಾರುಗಳಿಗೆ ಆದರ್ಶ ಮತ್ತು ಸ್ಫೂರ್ತಿಯಾಗಿದ್ದು ಇಂತಹ ಶ್ರೇಷ್ಠ ವ್ಯಕ್ತಿತ್ವದ ಹೆಸರನ್ನು ಮಂಗಳೂರಿನ ಈ ರಸ್ತೆಗೆ ಇಡುತ್ತಿರುವುದು ಇಡೀ ಜಿಲ್ಲೆಗೆ ಹೆಮ್ಮೆಯ ಸಂಗತಿ ಎಂದರು. ಈ ಸಂದರ್ಭದಲ್ಲಿ ಕ್ಯಾ. ಬ್ರಿಜೇಶ್ ಚೌಟ, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಬಿಜೈ ಚರ್ಚ್ ನ ಧರ್ಮಗುರು ಜೆ ಬಿ ಸಾಲ್ದಾನ, ವಿಶೇಷ ಅತಿಥಿಗಳಾಗಿ ಜಾರ್ಜ್ ಫೆರ್ನಾಂಡಿಸ್ ರ ಸಹೋದರ ಮೈಕಲ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

ಕಿಶೋರ್ ಶೆಟ್ಟಿ ಪ್ರೇಕ್ಷಕರನ್ನು ಸೃಷ್ಟಿಸಿದ ಕಲಾವಿದ

ಮಂಗಳೂರು: ರಂಗ ಸವ್ಯಸಾಚಿ ಕಿಶೋರ್ ಡಿ ಶೆಟ್ಟಿ ನೇತೃತ್ವದ ಶ್ರೀಲಲಿತೆ ಕಲಾವಿದರು (ರಿ) ತಂಡದ ಮೂಲಕ ಪ್ರದರ್ಶನ ಕಾಣಲಿರುವ ಶನಿ ಮಹಾತ್ಮೆ ತುಳು ಪೌರಾಣಿಕ ನಾಟಕವು ತುಳು ರಂಗ ಭೂಮಿಯಲ್ಲಿ ಸಂಚಲನ ಉಂಟು ಮಾಡಲಿದೆ ಎಂದು ಕದಿರೆಯ ಕಲಾವಿದರು ಸಂಸ್ಥೆಯ ಅಧ್ಯಕ್ಷ ಗೋಕುಲ್ ಕದ್ರಿ ಶುಭ ಪ್ರತೀಕ್ಷೆ ಗೈದರು.

ಕದ್ರಿಯಲ್ಲಿ ಜರಗಿದ ಕದ್ರಿ ನವನೀತ ಶೆಟ್ಟಿ ವಿರಚಿತ ನೂತನ ಕಲಾಕೃತಿ ಶನಿ ಮಹಾತ್ಮೆ ನಾಟಕದ ಮುಹೂರ್ತ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು ತುಳು ಪೌರಾಣಿಕ, ಚಾರಿತ್ರಿಕ ನಾಟಕ ಪ್ರದರ್ಶನಗಳಿಗೆ ನೂತನ ವೇದಿಕೆ ಹಾಗೂ ಪ್ರೇಕ್ಷಕರನ್ನು ಸೃಷ್ಟಿಸಿದ ನಿಜ ಅರ್ಥದ ಕಲಾಪೋಷಕ ಕಿಶೋರ್ ಶೆಟ್ಟಿ ಎಂದರು. ಕದ್ರಿ, ದೇವಸ್ಥಾನದ ಅರ್ಚಕ ಕೃಷ್ಣ ಅಡಿಗ ಅವರು ಕದ್ರಿಯ ಸಾಮೂಹಿಕ ಶನೀಶ್ವರ ಪೂಜಾ ಸಂಧರ್ಭದಲ್ಲಿ ವಿಶೇಷ ಪ್ರಾರ್ಥನೆ ಮಾಡಿ ಶನಿ ದೇವರು ಬೇರೆ ಬೇರೆ ಯುಗಗಳಲ್ಲಿ ತೋರಿದ ಮಹಿಮೆಗಳನ್ನು ನಾಟಕ ರೂಪದಲ್ಲಿ ಶನಿ ದೇವರ ಭಕ್ತರಿಗೆ ಪ್ರಸ್ತುತ ಪಡಿಸುವುದು ಪುಣ್ಯ ಕಾರ್ಯ. ನಾಲ್ಕು ದಶಕಗಳಿಂದ

ಶನೀಶ್ವರ ಮಹಾತ್ಮೆ ಯಕ್ಷಗಾನ ದಲ್ಲಿ ಅರ್ಥಧಾರಿಯಾಗಿ, ವೇಷಧಾರಿ ಪಡೆದ ಅನುಭವದ ಹಿನ್ನಲೆಯಲ್ಲಿ ಕದ್ರಿ ನವನೀತ ಶೆಟ್ಟಿ ಅವರು ರಚಿಸಿದ ಈ ನಾಟಕವು ಶನಿ ದೇವರ ಪೂರ್ಣಶೀರ್ವಾದ ಇದೆ ಎಂದು ಶುಭ ಹಾರೈಸಿದರು. ಕಟೀಲಪ್ಪೆ ಉಳ್ಳಾಲ್ದಿ, ಗರುಡ ಪಂಚಮಿ, ಬೀರೆ ದೇವು ಪೂಂಜೆ, ಕಾರ್ನಿಕದ ಶಿವ ಮಂತ್ರ, ತಿರುಪತಿ ತಿಮ್ಮಪ್ಪೆ, ಮಣ್ಣ್ ದ ಮಗಳ್ ಅಬ್ಬಕ್ಕ ಮೊದಲಾದ 17 ತುಳು, ಕನ್ನಡ ನಾಟಕಗಳ ಸಾವಿರಾರು ಪ್ರದರ್ಶನ ಗಳನ್ನು ದೇಶ ವಿದೇಶಗಳಲ್ಲಿ ನೀಡಿದ ಶ್ರೀಲಲಿತೆ ತಂಡದ ಪ್ರಬುದ್ಧ ಕಲಾವಿದರು ಹೊಸ ರಂಗ ವಿನ್ಯಾಸ ದೊಂದಿಗೆ ಶನಿ ಮಹಾತ್ಮೆ " ನಾಟಕವನ್ನು ಆಗಸ್ಟ್ ತಿಂಗಳಲ್ಲಿ ಪ್ರದರ್ಶಿಸಲಿದ್ದಾರೆ. ಕಿಶೋರ್ ಡಿ ಶೆಟ್ಟಿ, ಜೀವನ್ ಉಳ್ಳಾಲ್, ಪ್ರದೀಪ್ ಆಳ್ವ ಕದ್ರಿ, ಮೋಹನ್ ಕೊಪ್ಪಳ, ತಾರಾನಾಥ್ ಉರ್ವಾ, ಮಂಜು ಕಾರ್ಕಳ, ಯಾದವ ಮಣ್ಣಗುಡ್ಡೆ, ದಿನೇಶ್ ಕುಂಪಲ, ಹರೀಶ್ ಪಣಂಬೂರು, ನವೀನ್ ಶೆಟ್ಟಿ ಅಠಬ್ಲಮೊಗರು, ಅಶ್ವಿನಿ, ಸ್ನೇಹ ಕುಂದರ್, ರಾಮಾಚಾರಿ ಮೊದಲಾದ ಕಲಾವಿದರು ಅಭಿನಯಿಸಲಿದ್ದಾರೆ. ಜೀವನ್ ಉಳ್ಳಾಲ್ ನಾಟಕ ನಿರ್ದೇಶನ, ಮೋಹನ್ ಕೊಪ್ಪಳ ಕದ್ರಿ ಸಮಗ್ರ ನಿರ್ವಹಣೆಯಲ್ಲಿ ಹೊಸ ರಂಗ ಪರಿಕರ, ವೇಷ ಭೂಷಣ ಗಳೊಂದಿಗೆ ಶನಿ ಮಹಾತ್ಮೆ ನಾಟಕವು ಅಭೂತ ಪೂರ್ವ ಯಶಸ್ಸು ಕಾಣಲಿ ಎಂದು ಹಿರಿಯ ಕಲಾವಿದೆ ಸರೋಜಿನಿ ಶೆಟ್ಟಿ ಶುಭ ಹಾರೈಕೆ ಮಾಡಿದರು. ಪ್ರದೀಪ್ ಆಳ್ವ ಕದ್ರಿ ನಿರೂಪಣೆ ಮಾಡಿದರು. ಅಶ್ವಿನಿ ಧನ್ಯವಾದ ಸಮರ್ಪಿಸಿದರು.

ಒಪಿಎಸ್ ಜಾರಿಗೆ ನೌಕರರ ಮನವಿ

ಚಿಕ್ಕಮಗಳೂರು: ಹೊಸ ಪಿಂಚಣಿ ವ್ಯವಸ್ಥೆ ರದ್ದುಗೊಳಿಸಿ, ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂ ಘದ ಜಿಲ್ಲಾ ಪದಾಧಿಕಾರಿಗಳು ತಹಸೀಲ್ದಾರ್ ಸುಮಂತ್ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಪರಸಪ್ಪ ಕೂಸೂರ ಈಗಾಗಲೇ ಸರ್ಕಾರವು ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಓಪಿಎಸ್ ಜಾರಿಗೊಳಿಸುವ ಭರವಸೆ ನೀಡಿ ರುವ ಹಿನ್ನೆಲೆಯಲ್ಲಿ ಬೇಡಿಕೆ ಈಡೇರಿಸಿ ಅನುಕೂಲ ಕಲ್ಪಿಸಿಕೊಡಬೇಕು ಎಂದರು.

ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ಓಪಿಎಸ್ ಜಾರಿ ವಿಳಂಬವಾದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ ಎನ್‌ಪಿಎಸ್‌ನ್ನು ಯಥಾವತ್ತಾಗಿ ಜಾರಿ ಮಾಡಬೇಕು. ನೇಮಕಾತಿ, ಪ್ರಾಧಿಕಾರದ ವಂತಿಗೆಯನ್ನು ಆಡಳಿತ ಮಂಡಳಿಗಳ ಬದಲಾಗಿ ಸರ್ಕಾರ ಭರಿಸಲು ಕ್ರಮ ವಹಿಸಬೇಕು ಎಂದರು. ರಾಜ್ಯದ ಖಾಸಗೀ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ ವಿಧೇಯಕಕ್ಕೆ ತಿದ್ದುಪಡಿ ತರಬೇಕು ಅಥವಾ ರದ್ದುಪಡಿಸಿ ಭವಿಷ್ಯಾವರ್ತಿಯಾಗಿ ಜಾರಿಗೆ ಬರುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಅನುದಾನಿತ ನೌಕರರಿಗೆ ಕೂಡ ಸರಕಾರಿ ನೌಕರರಂತೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಯಥಾವತ್ತಾಗಿ ಜಾರಿಯಾಗಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ದಶಕಗಳಿಂದ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರದಲ್ಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹೀಗಾಗಿ ಅನುದಾನಿತ ನೌಕರರಿಗೆ ಪ್ರಮುಖ ಬೇಡಿಕೆಗಳನ್ನು ಮಾನವೀಯ ಕಾಳಜಿ ಹಿನ್ನೆಲೆಯಲ್ಲಿ ಈಡೇರಿಸಲು ಸರ್ಕಾರ ಶೀಘ್ರವೇ ಕ್ರಮ ಕೈಗೊಳ್ಳಬೇಕು. ಸಹಾನುಭೂತಿಯಿಂದ ಅನುದಾನಿತ ಶಾಲೆ ಕಾಲೇ ಜುಗಳ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೆ ತರುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ಈಡೇರಿಕೆಗೆ ಮುಂದಾಗಬೇಕು ಎಂದರು.

ಪ್ರಸ್ತುತ ರಾಜ್ಯಸರಕಾರತ ಅಧಿಕಾರಕ್ಕೆ ಬಂದು ವರ್ಷವನ್ನು ಪೂರೈಸುತ್ತಿದೆ. ಹೀಗಾಗಿ ಹೆಚ್ಚಿನ ವಿಳಂಬ ನೀತಿ ಅನುಸರಿಸದೇ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಾವಿರಾರು ನೌಕರರನ್ನು ಮತ್ತೆ ಹೋರಾಟಕ್ಕೆ ಅವಕಾಶ ನೀಡದಂತೆ ನ್ಯಾಯಯುತ ಬೇಡಿಕೆಗಳನ್ನು ತ್ವರಿತಗತಿಯಲ್ಲಿ ಈಡೇರಿಸಿ ನೌಕರರ ಜೀವನ ಸುಧಾರಣೆಗೆ ಅನು ಕೂಲ ಮಾಡಿಕೊಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಂಘದ ತಾಲ್ಲೂಕು ಅಧ್ಯಕ್ಷ ರಘು, ಉಪಾಧ್ಯಕ್ಷ ಗಂಗಾಧರ್, ಕಾರ್ಯದರ್ಶಿ ಪ್ರಕಾಶ್, ಸದಸ್ಯರುಗಳಾದ ನಟರಾಜ್, ಧನಂಜಯ್, ಜೆಲ್ಲಿಕೆ ಜಾರ್ಜ್, ಸುಜಾತ, ಸಂತೋಷ್, ಅಣ್ಣಪ್ಪಶೆಟ್ಟಿ, ವೆಂಕಟೇಶ್, ಪ್ರಸನ್ನ, ಶಿವರುದ್ರಪ್ಪ, ಎನ್.ಜಿ.ಚಂದ್ರಪ್ಪ, ಮಹೇಂದ್ರಕುಮಾರ್ ಹಾಜರಿದ್ದರು.

ತಮಿಳರು ಒಗ್ಗಟ್ಟು ಪ್ರದರ್ಶಿಸಿದರೆ ಜೀವನ ಸಾಧ್ಯ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ತಮಿಳು ಜನಾಂಗ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದೆ. ಒಗ್ಗಟ್ಟಿನ ಪ್ರದರ್ಶನದಿಂದ ಮಾತ್ರ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ ಎಂದು ಶ್ರೀಸುಬ್ರಹ್ಮಣ್ಯ ಭಾರತಿ ಮಹಾಸಭಾ ತಮಿಳು ಸಂಘದ ಅಧ್ಯಕ್ಷ ಜಿ.ರಘು ಹೇಳಿದರು.

ನಗರದ ವಿಶ್ವಕರ್ಮ ಸಮುದಾಯ ಭವನದಲ್ಲಿ ಶ್ರೀಸುಬ್ರಹ್ಮಣ್ಯ ಭಾರತಿ ಮಹಾಸಭಾದ ತಮಿಳು ಸಂಘದ ಸದಸ್ಯರುಗಳ ಸಭೆಯನ್ನು ಶುಕ್ರವಾರ ಸಂಜೆ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಹಲವಾರು ಸಣ್ಣಪುಟ್ಟ ಕೆಲಸಗಳಲ್ಲಿ ತಮಿಳು ಜನಾಂಗದ ಶ್ರಮ ಬಹಳಷ್ಟಿದೆ. ದಿನದ ದುಡಿಮೆಯನ್ನೇ ನಂಬಿಕೊಂಡು ಅನೇಕರು ಕಷ್ಟಪಡುತ್ತಿದ್ದಾರೆ. ಇಂದಿಗೂ ತಮಿಳರ ಜನಾಂಗವನ್ನು ಜನಪ್ರತಿ ನಿಧಿಗಳಾಗಲೀ ಅಥವಾ ಸರ್ಕಾರವಾಗಲೀ ಸಮರ್ಪಕವಾಗಿ ಗುರುತಿಸುವ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮುದಾಯಕ್ಕೆ ತಮಿಳು ಮಾತೃಭಾಷೆಯಾದರೆ, ಕನ್ನಡ ಜೀವನದ ಭಾಷೆಯಾಗಿದೆ. ಅನೇಕ ತಲೆಮಾರುಗಳಿಂದ ತಮಿಳರು ಕನ್ನಡ ನೆಲದಲ್ಲೇ ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ ರಾಜಕೀಯ ಹಾಗೂ ಸಾಮಾಜಿಕ ಬೆಳೆಯುವ ಹಂತವನ್ನು ಇಂದಿಗೂ ತಲುಪಿಲ್ಲ. ಸರ್ಕಾರ ಜನಾಂಗ ಕಡೆಗಣಿಸುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಅಲ್ಪಪ್ರಮಾಣದ ಜನಸಂಖ್ಯೆ ಹೊಂದಿರುವ ಸಮುದಾಯಕ್ಕೆ ಐಶರಾಮಿ ಜೀವನ ಹಾಗೂ ರಾಜಕೀಯ ಸೇರಿದಂತೆ ಇನ್ನಿತರೆ ಸ್ಥಾನಗಳಲ್ಲಿ ಅವಕಾಶ ಕಲ್ಪಿಸಿ ಬೆಳೆಯುತ್ತಿದೆ. ಹಲವಾರು ವರ್ಷಗಳ ಪೂ ರ್ವಜರ ಕಾಲದಿಂದ ನೆಲೆಸಿರುವ ತಮಿಳರಿಗೆ ಸೂಕ್ತ ಸ್ಥಾನ ಒದಗಿಸದೇ ಸ್ಥಳೀಯ ಜನಪ್ರತಿನಿಧಿಗಳು ಹಿಂದೇಟು ಹಾಕುತ್ತಿದ್ದಾರೆ ಎಂದು ದೂರಿದರು.

ಜನಾಂಗದಲ್ಲಿ ಬಹಳಷ್ಟು ಮಂದಿ ಆರ್ಥಿಕವಾಗಿ ಹಿಂದುಳಿದಿರುವ ಕಾರಣ ಮಕ್ಕಳ ವಿದ್ಯಾಭ್ಯಾಸ ಹಾಗೂ ಮದುವೆ ಕಾರ್ಯಕ್ಕೆ ತುಂಬಾನೇ ಸಮಸ್ಯೆಯಾಗುತ್ತಿದೆ. ಇಂದಿನ ಬೆಲೆಏರಿಕೆ ನಡುವೆ ದುಡಿಮೆ ಶೇ.100 ಭಾಗ ಕುಟುಂಬದ ನಿರ್ವಹಣೆಗೆ ಸೀಮಿತವಾಗಿದೆ. ಹೀಗಾಗಿ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸಿ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯ ಜನಾಂಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಕುಮಾರಗಿರಿ ದೇವಾಲಯ ನಿರ್ಮಿಸಿ ಮದುವೆ ಸೇರಿದಂತೆ ಇನ್ನಿತರ ಸಮಾರಂಭ ನಡೆಸಲು ಅನುಕೂಲವಾಗಿದೆ. ಈ ದುಬಾರಿ ಜೀವನದಲ್ಲಿ ಕಷ್ಟದಿಂದ ಬದುಕು ಸಾಗಿಸುತ್ತಿರುವ ಜನಾಂಗ ಸಮಾರಂಭ ನಡೆಸಲು ದೂರದ ಊರಿಗೆ ತೆರಳಬೇಕಾಗಿತ್ತು ಎಂದು ತಿಳಿ ಸಿದರು.

ಈ ಸಂದರ್ಭದಲ್ಲಿ ಸಂಘದ ಸಹಕಾರ್ಯದರ್ಶಿ ಸಿ.ಕೆ.ಮೂರ್ತಿ, ಮುಖಂಡರುಗಳಾದ ಮುರುಗಣ್ಣ, ಮಹಾಲಿಂಗಂ, ಚಿನ್ನಪ್ಪ, ಸತೀಶ್, ಹರೀಶ್, ಹರಿ, ಸಂತೋಷ್, ಸತ್ಯವತಿ, ಲಕ್ಷ್ಮೀ, ಪಾರ್ವತಿ ಮತ್ತಿತರರು ಉಪಸ್ಥಿತರಿದ್ದರು.

ಕಾಡಾನೆ ದಾಳಿಗೆ ಬೆಳೆ ಹಾನಿ, ಪರಿಹಾರಕ್ಕೆ ಒತ್ತಾಯ

ಕೊಟ್ಟಿಗೆಹಾರ: ಇಲ್ಲಿನ ತರುವೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ರಿಚರ್ಡ್ ಲೋಬೋ ಅವರ ತೋಟಕ್ಕೆ ಕಾಡಾನೆ ನುಗ್ಗಿ ಬೆಳೆ ಹಾನಿ ಮಾಡಿದೆ.

ಗುರುವಾರ ರಾತ್ರಿ ಅರಣ್ಯ ಪ್ರದೇಶದಿಂದ ಕಾಡಾನೆ ಬಂದಿದ್ದು, ಬಾಳೆ, ಏಲಕ್ಕಿ, ಕಾಫಿ ಹಾಗೂ ಇನ್ನಿತರ ಬೆಳೆಗಳು ಹಾನಿ ಉಂಟು ಮಾಡಿದ್ದು,

ಸಾವಿರಾರು ಬೆಲೆಯ ಬೆಳೆಯನ್ನು ನಾಶ ಮಾಡಿದೆ.

ಈ ಭಾಗದಲ್ಲಿ ಕಾಡಾನೆಗಳು ಪದೇ ಪದೇ ದಾಳಿ ನಡೆಸಿ ಹಾನಿಗೊಳಿಸುತ್ತಿರುವುದರಿಂದ, ಬೆಳೆದಿದ್ದ ಬೆಳೆಗೆ ಪರಿಹಾರ ನೀಡಬೇಕು ಎಂದು ರೈತ ರಿಚರ್ಡ್ ಲೋಬೋ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದಾರೆ. ಕಾಡಾನೆಗಳ ಹಾವಳಿ ತಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಸಹ ಅರಣ್ಯ ಇಲಾಖೆಗೆ ಆಗ್ರಹಿಸಿದ್ದಾರೆ.

ಒಟಿಎಸ್ ಗ್ರಾಹಕರಿಗೆ ಸಾಲ ನೀಡಲು ಆಗ್ರಹ

ಚಿಕ್ಕಮಗಳೂರು: ಬ್ಯಾಂಕ್‌ಗಳು ಒನ್‌ಟೈಮ್ ಸೆಟ್ಲ್‌ಮೆಂಟ್(ಒಟಿಎಸ್) ಆದಂತಹಗ್ರಾಹಕರಿಗೆ ಸಾಲ ಮಂಜೂರು ಮಾಡುತ್ತಿಲ್ಲಇದನ್ನು ಗಂಭೀರವಾಗಿ ಪರಿಗಣಿಸಿ ಸಾಲ ನೀಡುವಂತೆಕೋರಿ ಅರ್ಜಿ ಸಲ್ಲಿಸುವವರಿಗೆಕೂಡಲೇ ಸಾಲ ನೀಡಬೇಕೆಂದು ಆಗ್ರಹಿಸಿ ಇಂದು ಉಪ ವಿಭಾಗಾಧಿಕಾರಿದಲ್ಜಿತ್‌ಕುಮಾರ್‌ಅವರಿಗೆ ಕಾಂಗ್ರೆಸ್ ಮುಖಂಡ ಕೆ.ಭರತ್ ಮನವಿ ನೀಡಿದರು. ನಂತರ ಪತ್ರಿಕಾ ಹೇಳಿಕೆಯಲ್ಲಿ ಈ ವಿಷಯ ತಿಳಿಸಿರುವ ಅವರುಜಿಲ್ಲೆಯಲ್ಲಿಒಟಿಎಸ್‌ಆದಗ್ರಾಹಕರು ಸಾವಿರಾರು ಸಂಖ್ಯೆಯಲ್ಲಿದ್ದುಇದರಲ್ಲಿ ಬಹುತೇ ಕೃಷಿಕರು, ರೈತಾಪಿ ವರ್ಗದವರು ಹಾಗೂ ಮಧ್ಯಮ ವರ್ಗದವರು, ಸಣ್ಣಪುಟ್ಟ ವ್ಯಾಪಾರಸ್ಥರು ಈ ತೊಂದರೆಗೆ ಒಳಪಟ್ಟಿದಾರೆಂದು ಮನವಿಯಲ್ಲಿ ತಿಳಿಸಿದ್ದಾರೆ. ಬ್ಯಾಂಕ್‌ಗಳಲ್ಲಿ ಸಾಲ ಪಡೆದಗ್ರಾಹಕರು ನಿಗದಿತ ಅವಧಿಯೊಳಗೆ ಸಾಲ ಅಸಲು-ಬಡ್ಡಿ ಸಹಿತ ಶೇ.80 ರಷ್ಟು ಹಣವನ್ನು ಸಂದಾಯ ಮಾಡಲಾಗಿರುತ್ತದೆ. ಉಳಿದ ಹಣಕ್ಕೆ ಬ್ಯಾಂಕಿನವರೇ ಈ ಸೌಲಭ್ಯದಡಿ ನಿಮಗೆ ಅನುಕೂಲವಾಗುತ್ತ ದೆಎಂದು ಹೇಳಿ ಎರಡುಅಥವಾ ಮೂರು ಕಂತುಗಳಲ್ಲಿ ಈ ಉಳಿಕೆ ಹಣವನ್ನು ಪಾವತಿಸಿಕೊಂಡು ನಂತರ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಸಾಲ ಕೇಳಲು ಹೋದರೆ ಹಿಂದೆ ಪಡೆದ ಸಾಲವನ್ನುಒಟಿಎಸ್ ಮೂಲಕ ಪಾವತಿಸಿರುವುದರಿಂದ ನಿಮಗೆ ಸಾಲ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ನಿರಾಕರಿಸುತ್ತಿದ್ದಾರೆ ಎಂದಿದ್ದಾರೆ. ಸಾಲ ನೀಡುವ ಸಂದರ್ಭದಲ್ಲಿ ಸಾಲ ಪಡೆಯುವಾತನ ಆಸ್ತಿಯ ಮಾರುಕಟ್ಟೆ ಹಾಗೂ ಸರ್ಕಾರದ ಬೆಲೆಗೆ ಅನುಗುಣವಾಗಿ ಶೇ.60 ರಷ್ಟು ಭಾಗದ ಸಾಲ ನೀಡಿರುತ್ತಾರೆಎಂದು ತಿಳಿಸಿದ್ದಾರೆ.

ಆಂಗ್ಲಭಾಷೆ ನಾಮಫಲಕ ತೆರವಿಗೆ ಒತ್ತಾಯ

ಚಿಕ್ಕಮಗಳೂರು: ನಗರ ಭಾಗದ ಅಂಗಡಿ ಮುಂಗಟ್ಟುಗಳ ಆಂಗ್ಲಭಾಷೆಯ ನಾಮಫಲಕ ತೆರವುಗೊಳಿಸಬೇಕು ಹಾಗೂ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಿ ಕೊಡಬೇಕು ಎಂದು ಕನ್ನಡ ಸೇನೆ ಮುಖಂಡರುಗಳು ನಗರಸಭೆ ಪೌರಾಯುಕ್ತ ಬಿ.ಸಿ.ಬಸವರಾಜ್ ಅವರಿಗೆ ಶನಿವಾರ ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಕನ್ನಡಸೇನೆ ಜಿಲ್ಲಾಧ್ಯಕ್ಷ ಪಿ.ಸಿ.ರಾಜೇಗೌಡ ಆಂಗ್ಲಭಾಷೆ ನಾಮಫಲಕ ತೆರವು ಸಂಬಂಧ ಕನ್ನಡಪರ ಸಂಘಟನೆಗಳು ಹೋರಾಡಿದ ಪರಿಶ್ರಮದಿಂದ ಕನ್ನಡ ನಾಮಫಲಕಕ್ಕೆ ಪ್ರಾಮುಖ್ಯತೆ ಸಿಕ್ಕಿದೆ. ಇದನ್ನು ಲೆಕ್ಕಿಸದೇ ಪ್ರಮುಖ ಬೀದಿಗಳಲ್ಲಿ ಆಂಗ್ಲಭಾಷೆ ನಾಮಫಲಕ ಇಂದಿಗೂ ಹಾಗೇ ಉಳಿದು ಕೊಂಡಿದೆ ಎಂದರು. ಕನ್ನಡ ಭಾಷೆಯ ಇತಿಹಾಸ ಅರಿತು ಜಿಲ್ಲೆಯ ಜನತೆ ಸ್ವಯಂಪ್ರೇರಿತರಾಗಿ ಹೆಚ್ಚು ಪ್ರಮಾಣದಲ್ಲಿ ಕನ್ನಡ ಪದಗಳನ್ನು ಫಲಕದಲ್ಲಿ ಬಳಸಬೇಕು. ಇದನ್ನು ಹೊರತುಪಡಿಸಿ ಅಂಗಡಿ ಮುಂಗಟ್ಟುದಾರರು ವ್ಯಾಪಾ ರಕ್ಕೆ ಮುಂದಾದರೆ ಫಲಕಗಳಿಗೆ ಮಸಿ ಬಳಿಯುವ ಕಾರ್ಯ ಮುಂದಾಗುತ್ತೇವೆ

ಎಂದು ಎಚ್ಚರಿಸಿದರು. ನಗರದ ಕೆಲವು ವಾರ್ಡ್‌ಗಳಲ್ಲಿ ಒಳಚರಂಡಿ ನೀರು ರಸ್ತೆಯ ಮೇಲೆಲ್ಲ ನೀರು ಹರಿದು ಸಂಚರಿಸದ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಿಸಿದ ನಗರ ಸಭಾ ಸದಸ್ಯರುಗಳು ಗಮನಹರಿ ಸಬೇಕು. ಜೊತೆಗೆ ಮಳೆಯ ಹೆಚ್ಚಿರುವ ಕಾರಣ ತಗ್ಗು ಪ್ರದೇಶಗಳ ಚರಂಡಿ ನೀರು ಒಂದೆಡೆ ಶೇಖರಣೆಗೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಇತ್ತೀಚೆಗೆ ಡೆಂಗ್ಯೂ ಪ್ರಕರಣಗಳು ಹೆಚ್ಚಿರುವ ಕಾರಣ ಮಳೆ ನೀರು ನಿಲ್ಲದಂತೆ ಕ್ರಮ ವಹಿಸಲು ನಗರ ಸಭೆ ನಿವಾಸಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಸಾರ್ವಜನಿಕರ ಹಿತದೃಷ್ಟಿಗಾಗಿ ಇಲಾಖೆಯಿಂದ ಕ್ರಮ ಕೈಗೊಂಡರೆ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ ಎಂದು ತಿಳಿಸಿದರು. ನಗರದ ಪ್ರಮುಖ ಪಾರ್ಕ್‌ಗಳಲ್ಲಿ ಗಿಡ-ಗಂಟಿಗಳು ಹೆಚ್ಚಿವೆ ಹಾಗೂ ಸ್ವಚ್ಚತೆ ಇಲ್ಲದೇ ಮರುಗುತ್ತಿದೆ. ಈ ಬಗ್ಗೆ ಪೌರಾಯುಕ್ತರು ಉದ್ಯಾನವನ ಪರಿಶೀಲಿಸಿ ಸ್ವಚ್ಚಗೆ ಕ್ರಮ ವಹಿಸಬೇಕು. ಆಸನದ ವ್ಯವಸ್ಥೆ, ಪರಿಸರಕ್ಕೆ ಪೂರಕವಾದ ಸಸಿಗಳನ್ನು ನೆಡುವ ಕಾರ್ಯಕ್ಕೆ ಮುಂದಾಗಬೇಕು. ಇದಕ್ಕೆ ಪ್ರತಿಕ್ರಿಯಿಸಿದ ಪೌರಾಯುಕ್ತರು ಸೂಕ್ತ ವಾಗಿ ಸ್ಪಂದಿಸಲಾಗುವುದು ಭರವಸೆ ಎಂದರು. ಈ ಸಂದರ್ಭದಲ್ಲಿ ಕನ್ನಡಸೇನೆ ಮುಖಂಡರುಗಳಾದ ಅಜಯ್, ಸತೀಶ್, ಅನ್ವರ್, ಚೇತನ್, ಪ್ರದೀಪ್, ಸಂಜೀವಶೆಟ್ಟಿ, ಮಹೇಶ್, ಸಂತೋಷ್, ರಂಗನಾಥ್, ಅಶೋಕ್ ಮತ್ತಿತರಿದ್ದರು.

ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಲು ಸೂಚನೆ

ಚಿಕ್ಕಮಗಳೂರು: ಕೊಳೆತು ನಾರುವ ಜಾಗದಲ್ಲಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಿರುವ ಕಾರಣ ವಿಶಾಲವಾಗಿ ಹರಡಿರುವ ಗಿಡ-ಗಂಟಿಗಳ ಸಮೀಪ ಮಕ್ಕಳು ಹೋಗಬಾರದು. ಸ್ವಚ್ಚತೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ಜಿಲ್ಲಾಸ್ಪತ್ರೆ ಹಿರಿಯ ವೈದ್ಯ ಡಾ.ಮುರಳಿಧರ್ ಕರೆ ನೀಡಿದರು. ನಗರದ ಎಸ್.ಆರ್ ನರ್ಚರ್ ಇಂಟರ್‌ನ್ಯಾಷನಲ್ ಶಾಲೆಯ ಮಕ್ಕಳಿಗೆ ಡೆಂಗ್ಯೂ ಜಾಗೃತಿ ಮೂಡಿ ಸುವ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ಮಳೆಯ ಸಂದರ್ಭಗಳಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಾಗುತ್ತದೆ. ಕ್ರಿಮಿ ಕೀಟಗಳ ರೋಗಾಣುಗಳನ್ನು ಮನುಷ್ಯ ದೇಹದಲ್ಲಿ ಬಿತ್ತುವ ಪರಿಣಾಮ ಡೆಂಗ್ಯೂ, ಮಲೇರಿಯಾ ಸೇರಿದಂತೆ ಇನ್ನಿತರೆ ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ ಎಂದು ತಿಳಿಸಿದರು. ಸೊಳ್ಳೆಗಳ ಕಡಿತದಿಂದ ಹೆಚ್ಚಾಗಿ ಮಕ್ಕಳು ಅನಾರೋಗ್ಯ ಪೀಡಿತರಾಗುತ್ತಾರೆ. ಹೀಗಾಗಿ ಶಾಲೆಯಿಂದ ತೆರಳುವ ವೇಳೆ ಅಥವಾ ಆಟೋಟದಲ್ಲಿ ಚರಂಡಿಗಳ ಸಮೀಪ, ಗಿಡ-ಗಂಟಿಗಳು ಹೆಚ್ಚಿರುವ ಭಾಗಕ್ಕೆ ತೆರಳದಂತೆ ನಿಗಾವಹಿಸಬೇಕು ಎಂದು ಕಿವಿಮಾತು ಹೇಳಿದರು. ಮನೆಗಳ ಅಕ್ಕಪಕ್ಕದ ಮೋರಿಗಳಲ್ಲಿ ಅಥವಾ ಕಾಂಪೌಂಡ್ ಆವರಣದಲ್ಲಿ ಎಳನೀರು ಅರ್ಧಭಾಗ, ಕಾಯಿಚಿಪ್ಪುಗಳಲ್ಲಿ ನೀರು ನಿಲ್ಲದಂತೆ ಗಮನಹರಿಸಬೇಕು. ಸೊಳ್ಳೆಗಳು ನಿಂತ ನೀರಿನಲ್ಲೇ ಯಥೆಚ್ಚವಾಗಿ ಮೊಟ್ಟೆಯಿಟ್ಟು ಮರಿಯಾಗಿಸಿ ಇನ್ನಷ್ಟು ಸೊಳ್ಳೆಗಳು ಉತ್ಪತ್ತಿಯಾಗಿ ಡೆಂಗ್ಯೂಗೆ ತುತ್ತಾಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಿಬ್ಬಂದಿಗಳಾದ ರಾಕೇಶ್, ಪ್ರೀತೇಶ್, ತಸ್ಮಿಯಾ ಮತ್ತಿತರರು ಹಾಜರಿದ್ದರು

{ ಎಚ್‌ಡಿಕೆ } ಕೇಂದ್ರ ಕೈಗಾರಿಕಾ ಸಚಿವ

ಮೈಸೂರಿನ ಮುಡಾ ಹಗರಣದ ದಾಖಲೆಗಳನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ವಿಶೇಷ ವಿಮಾನದಲ್ಲಿ ಸಾಗಿಸಿ, ಸುರಕ್ಷಿತ ಸ್ಥಳಗಳಲ್ಲಿ ಇಟ್ಟುಕೊಂಡಿದ್ದರೂ, ರೀಡೂನಂತೆ ಈ ಹಗರಣವನ್ನು ಸರಕಾರ ಮುಚ್ಚಿಹಾಕಲು ಸಾಧ್ಯವಿಲ್ಲ.

ಸಮಾಚಾರ ಸಣ್ಣದಲ್ಲ

ಚೆಸ್ ಆಡುವಾಗಲೇ ಹೃದಯಾಘಾತ: ಸಾವು

ಢಾಕಾ: ಬಾಂಗ್ಲಾದೇಶದ ಚೆಸ್ ಗ್ರ್ಯಾಂಡ್‌ಮಾಸ್ಟರ್ ಜಿಯಾವುರ್ ರೆಹಮಾನ್ ಚೆಸ್ ಆಡುತ್ತಿರುವಾಗಲೇ ದಿಢೀರ್ ಕುಸಿದುಬಿದ್ದು ಸಾವನ್ನೊಪ್ಪಿದ್ದಾರೆ ಎಂದು ವರದಿಯಾಗಿದೆ.

ರಾಷ್ಟ್ರೀಯ ಚಾಂಪಿಯನ್ ಶಿಪ್ 12ನೇ ಸುತ್ತಿನ ಪಂದ್ಯದಲ್ಲಿ ಆಡುತ್ತಿದ್ದ ವೇಳೆ ಜಿಯಾ ವುರ್ ರೆಹಮಾನ್ ಕುಸಿದು ಬಿದ್ದು ನಿಧನರಾದರು ಎಂದು ಬಾಂಗ್ಲಾದೇಶ ಚೆಸ್ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಶಹಾಬ್ ಉದ್ದೀನ್ ಶಮಿಮ್ ಖಚಿತಪಡಿಸಿದ್ದಾರೆ. ಸ್ಥಳೀಯ ಟೂರ್ನಿಯೊಂದರಲ್ಲಿ ರೆಹಮಾನ್ ಇನಾಮುಲ್ ಹೊಸೈನ್ ವಿರುದ್ಧ ಪಂದ್ಯವಾಡುತ್ತಿದ್ದಾಗ ದಿಢೀರ್ ಕುಸಿದುಬಿದ್ದರು. ತಕ್ಷಣವೇ ಅವರನ್ನು ಢಾಕಾದ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ, ಅಷ್ಟರೊಳಗೆ ಅವರು ಸಾವನ್ನಪ್ಪಿದ್ದರು ಎಂಬುದನ್ನು ವೈದ್ಯರು ಧೃಡಪಡಿಸಿದರು ಎಂದು ಶಮಿಮ್ ಹೇಳಿದ್ದಾರೆ.

ಚಿನ್ನ ಗೆದ್ದು ಸಿಹಿ ಹಂಚುವೆ: ನೀರಜ್ ಚೋಪ್ರಾ

ದೆಹಲಿ: ಜುಲೈ 26 ರಿಂದ ಶುರುವಾಗಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಮೂಲಕ ಸಿಹಿ ತಂದು ಕೊಡುತ್ತೇನೆ ಎಂದು ಜಾವೆಲಿಯನ್ ಎಸತಗಾರ ಹಾಗೂ ಭಾರತೀಯ ಅಥ್ಲೆಟಿಕ್ಸ್ ತಂಡದ ನಾಯಕ ನೀರಜ್ ಚೋಪ್ರಾ, ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಪ್ಯಾರಿಸ್ ತೆರಳಿರುವ ಭಾರತೀಯ ಕ್ರೀಡಾಪಟುಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ವಿಶೇಷ ಸಂವಾದ ನಡೆಸಿದ್ದು, ಆನ್‌ಲೈನ್‌ನಲ್ಲಿ ನಡೆದ ಈ ಸಂವಾದ ವೇಳೆ ಪ್ರಧಾನಿ, ಕಳೆದ ಬಾರಿ ಸಿಹಿ ತಂದು ಕೊಡುತ್ತೇನೆ ಎಂದಿರುವ ತಮ್ಮ ಮಾತನ್ನು ಇನ್ನೂ ಸಹ ಈಡೇರಿಸಿಲ್ಲ ಎಂದು ನೀರಜ್ ಚೋಪ್ರಾಗೆ ನೆನಪಿಸಿದರು. ಇದೇ ವೇಳೆ ನೀರಜ್ ಈ ಬಾರಿ ಖಂಡಿತವಾಗಿಯೂ ತಂದು ಕೊಡುತ್ತೇನೆ ಎಂದು ನೀರಜ್ ಚೋಪ್ರಾ, ತಿಳಿಸಿದರು. ಅದಕ್ಕೆ ಉತ್ತರಿಸಿದ ಮೋದಿ, ಈ ಬಾರಿ ಪದಕ ಗೆದ್ದು, ನಿಮ್ಮ ಮನೆಯಲ್ಲಿ ತಾಯಿ ತಯಾರಿಸಿದ ಚುರ್ಮಾ ತಂದುಕೊಡಬೇಕೆಂದು ತಿಳಿಸಿದರು. ಪ್ರಧಾನಿಯ ಕೋರಿಕೆಗೆ ನೀರಜ್ ಚೋಪ್ರಾ, ಒಕೆ ಅಂದಿದ್ದು, ಈ ಸಲ ಚಿನ್ನದ ಪದಕದೊಂದಿಗೆ ಹಿಂತಿರುಗುವುದಾಗಿ ಭರವಸೆ ನೀಡಿದ್ದಾರೆ. ಕಳೆದ ಬಾರಿ ಚಿನ್ನದ ಪದಕ ಗೆದ್ದಿದ್ದ ನೀರಜ್ ಚೋಪ್ರಾ, ಈ ಬಾರಿಯೂ ಚಿನ್ನದ ಮೇಲೆ ಕಣ್ಣಿಟ್ಟಿದ್ದಾರೆ. ಈ ಜವಾಬ್ದಾರಿಯೊಂದಿಗೆ ಅವರಿಗೆ ಅಥ್ಲಿಟ್ಸ್ ವಿಭಾಗದ ನಾಯತ್ವವನ್ನು ಹೇರಿಲಾಗಿದ್ದು, ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎಳೆಯರ ಬಳಗಕ್ಕೆ ಹೀನಾಯ ಸೋಲು

ವಿಶ್ವಕಪ್ ಬಳಿಕ ಮೊದಲ ಟಿ20ಯಲ್ಲಿ ಸೋಲನುಭವಿಸಿದ ಭಾರತ | ಜಿಂಬಾಬ್ವೆಗೆ 13 ರನ್ ಗೆಲುವು

ಹರಾರೆ: ನಾಯಕ ಸಿಕಂದರ್ ರಜಾ ಅವರ ಮಾರಕ ಬೌಲಿಂಗ್ ದಾಳಿಗೆ ಭಾರತದ ಎಳೆಯರ ಬಳಗ ತತ್ತರಿಸಿದ್ದು, ಜಿಂಬಾಬ್ವೆ ವಿರುದ್ಧ ಹೀನಾಯ ಸೋಲನುಭವಿಸಿದೆ. ವಿಶ್ವಕಪ್ ಗೆದ್ದ ನಂತರ ಭಾರತದ ಇದು ಮೊದಲ ಸೋಲಾಗಿದ್ದು, ಭಾರತದ ಅಜೇಯ ಓಟಕ್ಕೆ ಜಿಂಬಾಬ್ವೆ ತಡೆಯೊಡ್ಡಿದೆ. ವಿಶ್ವಕಪ್ ಮುಗಿದು ವಾರ ಕಳೆಯುತ್ತಿದ್ದಂತೆ ಭಾರತ ಜಿಂಬಾಬ್ವೆ ವಿರುದ್ಧ ಸರಣಿ ಆಡುತ್ತಿದ್ದು, ಎಳೆಯರ ಬಳಗವನ್ನು ಪ್ರವಾಸಕ್ಕೆ ಕಳಿಸಿದೆ. ಮೂಲ ತಂಡದ ಹೊರತು ಭಾರತ ತಂಡ ತತ್ತರಿಸಿದ್ದು, ಹೀನಾಯ ಸೋಲನುಭವಿಸಿದೆ. ಇಲ್ಲಿ ನಡೆದ ಭಾರತ ಹಾಗೂ ಜಿಂಬಾಬ್ವೆ ಸರಣಿಯ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ, ರವಿ ಬಿಷ್ಣೋಯ್ ಅವರ ಮಾರಕ ದಾಳಿಗೆ ಸಿಲುಕಿ 115 ರನ್ ಗಳಿಸಿತು. ಅದನ್ನು ಬೆನ್ನು ಹತ್ತಿದ ಭಾರತ 102 ರನ್ ಗಳಿಸಿ ಸರ್ವಪತನ ಕಂಡು ಸೋಲನುಭವಿಸಿತು.

ಜಿಂಬಾಬ್ವೆಗೆ ಬಿಷ್ಣೋಯ್ ಶಾಕ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆಗೆ ಆರಂಭಿಕ ಆಘಾತ ಉಂಟಾಯಿತು. ಆರಂಭದಲ್ಲೇ ಕೈಯಾ ಶೂನ್ಯ ಸುತ್ತಿ ವಿಕೆಟ್ ಒಪ್ಪಿಸಿದರು. ಆದರೆ ಈ ವೇಳೆ ಜತೆಗೂಡಿದ ಮಾಧೆವೆರೆ ಹಾಗೂ ಬೆನ್ನೆಟ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ನಿಧಾನವಾಗಿ ಬ್ಯಾಟಿಂಗ್ ಮಾಡಿದ ಈ ಜೋಡಿ, ವಿಕೆಟ್ ಉಳಿಸಿ ಆಟವಾಡಲು ಪ್ರಯತ್ನ ಪಟ್ಟರು. ಆದರೆ ಈ ವೇಳೆ ಮಾಧೆವೆರೆ 21 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಬಂದ ನಾಯಕ ರಜಾ ಸಹ ನಿಧಾನಗತಿ ಬ್ಯಾಟಿಂಗ್ ಮಾಡಲು ಆರಂಭಿಸಿದರು. ಆದರೆ ಈ ವೇಳೆ ಇಲುತ್ತಮವಾಗಿ ಕಾಣುತ್ತಿದ್ದ ಬೆನ್ನೆಟ್ 22 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರಜಾ ಜತೆ ಕೂಡಿದ ಮೆಯರ್ಸ್ 23 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಾಯಕ ರಜಾ 17 ರನ್ ಗಳಿಸಿ ನಿಧಾನಗತಿ ಆಟ ನಿಲ್ಲಿಸಿದರು. ಜಾಂಗ್ವಿ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಸ್ಕೋರ್:
ಜಿಂಬಾಬ್ವೆ: 115/9 ಕ್ಲೈವ್ 29★, ಮೆಯರ್ಸ್ 23, ಬಿಷ್ಣೋಯ್ 13/4
ಭಾರತ: 102 ಗಿಲ್ 31, ಸುಂದರ್ 27, ತೆಂಡೈ 16/3, ರಜಾ 25/3

ಉಳಿದಂತೆ ಇಬ್ಬರು ಆಟಗಾರರು ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಆದರೆ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ಕ್ಲೈವ್ 29 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರು ಕೊನೆಯಲ್ಲಿ ಆಟದ ಬ್ಯಾಟಿಂಗ್‌ನಿಂದಾಗಿ ಜಿಂಬಾಬ್ವೆ 9 ವಿಕೆಟ್ ಕಳೆದುಕೊಂಡು 115 ರನ್ ಗಳಿಸಿತು.

ಆರಂಭದಿಂದಲೂ ಕುಸಿದ ಭಾರತ: ಅದನ್ನು ಬೆನ್ನು ಹತ್ತಿದ ಭಾರತಕ್ಕೆ ಆರಂಭದಿಂದಲೂ ಆಘಾತ ಉಂಟಾಯಿತು. ಆರಂಭಿಕ ಅಭಿಷೇಕ್ ಶರ್ಮ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಗಾಯ್ಕವಾಡ್ 7 ರನ್ ಗಳಿಸಿ ವಿಕೆಟ್ ನೀಡಿದರೆ, ರಿಯಾನ್ ಪರಾಗ್ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ರಿಂಕು ಸಿಂಗ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರೆ, ಜುರೇಲ್ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಇನ್ನೊಂದೆಡೆ ಗಿಲ್ ವಿಕೆಟ್ ಉಳಿಸಿ ಆಡಿದರು. ಆದರೆ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಬಿಷ್ಣೋಯ್ 9 ರನ್ ಗಳಿಸಿ ವಿಕೆಟ್ ನೀಡಿದರೆ, ಆವೇಶ್ ಖಾನ್ 16 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನೊಂದೆಡೆ ಪಂದ್ಯ ಗೆಲ್ಲಿಸುವ ಭರದಲ್ಲಿ ಕ್ರೀಸ್‌ನಲ್ಲಿ ನಿಧಾನ ಗತಿಯಾಟ ಪ್ರದರ್ಶಿಸಿದ ಸುಂದರ್ 27 ರನ್ ಗಳಿಸಿ ಟೆಸ್ಟ್‌ನಂತೆ ಆಡಿದರು. ಕೊನೆಯಲ್ಲಿ ಭಾರತ 102 ರನ್‌ಗೆ ಸರ್ವಪತನ ಕಂಡು 13 ರನ್‌ಗಳ ಸೋಲನುಭವಿಸಿತು.

ಮೂವರ ಪದಾರ್ಪಣೆ

ಭಾರತದ ಎಳೆಯರ ತಂಡದಲ್ಲಿ ಇದೇ ಬಾರಿ ಆಯ್ಕೆಯಾದ ಮೂವರು ಯುವ ಆಟಗಾರರು ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿದಿದ್ದಾರೆ. ಐಪಿಎಲ್‌ನಲ್ಲಿ ವಿಶೇಷ ಗಮನ ಸೆಳೆದಿದ್ದ ರಿಯಾನ್ ಪರಾಗ್, ಧ್ರುವ್ ಜುರೆಲ್ ಹಾಗೂ ಅಭಿಷೇಕ್ ಶರ್ಮ ಭಾರತದ ಪರ ಮೊದಲನೇ ಬಾರಿಗೆ ಕಣಕ್ಕಿಳಿದಿದ್ದಾರೆ. ಆದರೆ ಈ ಮೂವರೂ ತಮ್ಮ ಮೊದಲ ಪಂದ್ಯದಲ್ಲಿ ವಿಫಲರಾಗಿದ್ದಾರೆ.

ಮಿಂಚಿದ ಬಿಷ್ಣೋಯ್

ಐಪಿಎಲ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಮೆಚ್ಚುಗೆ ಪಡೆದಿದ್ದ ಸ್ಪಿನ್ ಬೌಲರ್ ರವಿ ಬಿಷ್ಣೋಯ್ ಮಾರಕ ಬೌಲಿಂಗ್ ಮಾಡಿದರು. ಜಿಂಬಾಬ್ವೆ ಬೌಲರ್‌ಗಳಿಗೆ ಕಾಟ ನೀಡಿದ ಅವರು, 3.2 ಸರಾಸರಿಯೊಂದಿಗೆ 4 ಓವರ್‌ನಲ್ಲಿ 2 ಮೆಡೆನ್ ಮಾಡಿ, 13 ಕ್ಕೆ 4 ವಿಕೆಟ್ ಪಡೆದು ಮಿಂಚಿದರು.

ಯೂರೋ ಕಪ್ | ನಿವೃತ್ತಿ ಹಾದಿಯಲ್ಲಿರುವ ರೊನಾಲ್ಡೊಗೆ ನಿರಾಸೆ

ಸೆಮಿಫೈನಲ್‌ಗೆ ಫ್ರಾನ್ಸ್, ಸ್ಪೇನ್

ಜರ್ಮನಿ: ಪೆನಾಲ್ಟಿ ಶೂಟೌಟ್‌ನಲ್ಲಿ ಪೋರ್ಚುಗಲ್ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 5-3 ಗೋಲುಗಳ ಅಂತರದಿಂದ ಫ್ರಾನ್ಸ್ ಗೆಲುವು ಸಾಧಿಸಿದ್ದು, ಸೆಮಿಫೈನಲ್ಗೆ ಲಗ್ಗೆ ಇಟ್ಟಿದೆ.

ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ರಡೂ ತಂಡಗಳು ಸಮಾನ ಪೈಪೋಟಿ ನಡೆಸಿದ್ದರಿಂದ ನೇರ ಫಲಿತಾಂಶ ದೊರೆಯಲಿಲ್ಲ. ಆದ್ದರಿಂದ ಫಲಿತಾಂಶಕ್ಕೆ ಪೆನಾಲ್ಟಿ ಹಂತಕ್ಕೆ ಹೋಗಲಾಯಿತು. ಅದರಲ್ಲಿ ಭರ್ಜರಿ ಪ್ರದರ್ಶನ ತೋರಿದ ಫ್ರಾನ್ಸ್ ಭರ್ಜರಿ ಗೆಲುವು ಸಾಧಿಸಿದ್ದು, ಜುಲೈ 10ರಂದು ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಸ್ಪೇನ್ ಸವಾಲನ್ನು ಎದುರಿಸಲಿದೆ. ಕ್ರಿಸ್ಟಿಯಾನೊ ರೊನಾಲ್ಡೊ ಹಾಗೂ ಫ್ರಾನ್ಸ್ ನಾಯಕ ಕಿಲಿಯನ್ ಎಂಬಾಪೆ ನಡುವೆ ನೇರ ಪೈಪೋಟಿಗೆ ಪಂದ್ಯ ಸಾಕ್ಷಿಯಾಗಿತ್ತು. ಎರಡೂ ತಂಡಗಳು ಜಿದ್ದಾಜಿದ್ದಿನ ಆಟವಾಡಿದ ಪರಿಣಾಮ 20 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಗೋಲು ದಾಖಲಾಗಲಿಲ್ಲ. ಕೊನೆಗೆ ಫಲಿತಾಂಶ ನಿರ್ಧರಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಶೂಟೌಟ್‌ನಲ್ಲಿ ಫ್ರಾನ್ಸ್ 5 ಗೋಲು ಬಾರಿಸಿದರೆ, ಪೋರ್ಚುಗಲ್ 3 ಗೋಲು ಮಾತ್ರ ಗಳಿಸಿ ಶರಣಾಯಿತು.

ಸ್ಪೇನ್‌ಗೆ ಭರ್ಜರಿ ಗೆಲುವು

ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆತಿಥೇಯ ಜರ್ಮನಿ ತಂಡವನ್ನು 2-1ರ ಗೋಲುಗಳಿಂದ ಮಣಿಸಿ ಸ್ಪೇನ್ ಸೆಮಿಫೈನಲ್‌ಗೆ ಪ್ರವೇಶಿಸಿತು. ಪಂದ್ಯದ 51ನೇ ನಿಮಿಷದಲ್ಲಿ ಡ್ಯಾನಿ ಓಲ್ಮೊ ಅವರು ಸ್ಪೇನ್‌ಗೆ ಮುನ್ನಡೆ ಒದಗಿಸಿದರು. ಬಳಿಕ ಬದಲಿ ಆಟಗಾರ ಜೋಶುವಾ ಕಿಮ್ಮಿಚ್ ಅವರು 89ನೇ ನಿಮಿಷದಲ್ಲಿ ಬಾರಿಸಿದ ಗೋಲಿನಿಂದ ಜರ್ಮನಿ ತಂಡ ಸಮಬಲ ಸಾಧಿಸಿ ಪಂದ್ಯದಲ್ಲಿ ಹಿಡಿತ ಸಾಧಿಸಿತು. ಆದರೆ ಹೆಚ್ಚುವರಿ ಸಮಯದಲ್ಲಿ ಮೈಕೆಲ್ ಮೆರಿನೊ ಗೋಲು ಗಳಿಸಿ ಸ್ಪೇನ್ ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟರು.

ರೊನಾಲ್ಡೊಗೆ ಮತ್ತೊಮ್ಮೆ ನಿರಾಸೆ

ಫಿಫಾ ವಿಶ್ವಕಪ್ ಸೋಲಿನ ನಂತರ ನಿವೃತ್ತಿ ಬಗ್ಗೆ ಮಾತನಾಡಿದ್ದ ಅವರು, ಸುಳಿವು ನೀಡಿದ್ದರು. ಅದಾದ ಬಳಿಕ ಇದೀಗ ಯೂರೋ ಕಪ್‌ನ ನಂತರ ನಿವೃತ್ತರಾಗುವುದಾಗಿ ಸುಳಿವು ನೀಡಿದ್ದು, ರೊನಾಲ್ಡೊ ಅವರಿಗೆ ಇದು ಕೊನೆಯ ಟೂರ್ನಿಯಾಗಿದೆ ಎನ್ನಲಾಗಿದೆ. ತಮ್ಮ ಸೋಲಿನಿಂದಾಗಿ ಅವರ ಕಪ್ ಗೆಲ್ಲುವ ಕನಸು ಮತ್ತೊಮ್ಮೆ ಭಗ್ನಗೊಂಡಿತು. ಪಂದ್ಯ ಮುಕ್ತಾಯದ ಬಳಿಕ ರೊನಾಲ್ಡೊ ಅತ್ಯಂತ ಬೇಸರದಿಂದಲೇ ಮೈದಾನ ತೊರೆದರು.

ಸದ್ಯ ನಿವೃತ್ತಿಯಿಲ್ಲ: ಬುಮ್ರಾ

ಮುಂಬಯಿ: ರೋಹಿತ್, ಜಡೇಜ ಮತ್ತು ಕೊಹ್ಲಿ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಬೆನ್ನಲ್ಲೇ ಜಸ್‌ಪ್ರೀತ್ ಬುಮ್ರಾ ಸಹ ವಿದಾಯ ಹೇಳಲಿದ್ದಾರೆ ಎಂದು ಸುದ್ದಿಯಾಗಿತ್ತು. ಈ ಬಗ್ಗೆ ಸ್ವತಃ ಜಸ್‌ಪ್ರೀತ್ ಬುಮ್ರಾ ಅವರೇ ಸ್ಪಷ್ಟನೆ ನೀಡಿದ್ದು, ನನ್ನ ನಿವೃತ್ತಿ ಬಗ್ಗೆ ಹರಿದಾಡುತ್ತಿರುವ ಸುದ್ದಿ ಸುಳ್ಳು. ಟಿ20 ಕ್ರಿಕೆಟ್ ನಿಂದ ನಿವೃತ್ತಿ ಹೊಂದುವ ಯಾವುದೇ ಯೋಜನೆ ಹಾಕಿಕೊಂಡಿಲ್ಲ ಎಂದು ಹೇಳಿದ್ದಾರೆ. ವಿಶ್ವಕಪ್ ಗೆದ್ದ ಬಳಿಕ ಮಾತನಾಡಿದ್ದ ಬುಮ್ರಾ, ಇದು ನಿಜವಾಗಿಯೂ ಖುಷಿಯ ವಿಚಾರ. ನಮಗೆ ಆತ್ಮ ವಿಶ್ವಾಸವಿತ್ತು. ಈ ರೀತಿಯ ಗೆಲುವನ್ನು ಪಡೆಯಲು ನಿಜವಾಗಿಯೂ ಸಂತೋಷವಾಗಿದೆ. ಇದು ಉತ್ತಮ ಟೂರ್ನಿ. ಪುತ್ರ ಅಂಗದ್ ಜತೆಯಲ್ಲಿರುವ ಕಾರಣ ಆತನೊಂದಿಗೆ ವಿಶ್ವ ಕಪ್ ಗೆಲುವು ಸಂಭ್ರಮಿಸುವುದು ಖುಷಿಯ ವಿಚಾರ ಎಂದು ಹೇಳಿದ್ದರು.

ರಾನಿಯ ಮಧುರಗಾನ

ಕಿರುತೆರೆಯಲ್ಲಿ ಖ್ಯಾತಿ ಪಡೆದಿದ್ದ ಕಿರಣ್ ರಾಜ್ ಹಿರಿತೆರೆಗೂ ಎಂಟ್ರಿ ಕೊಟ್ಟಿದ್ದು, ರಾನಿಯಾಗಿ ಮಿಂಚಲು ಸಿದ್ಧವಾಗಿದ್ದಾರೆ. ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸಿರುವ ರಾನಿ ಚಿತ್ರದ ಹಾಡು ಬಿಡುಗಡೆಯಾಗಿದೆ. ಹವಮಾನವೇ ಸುಂದರ ಸುಂದರ.. ಎಂಬ ಹಾಡು ಇದಾಗಿದ್ದು ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದು, ಮಣಿಕಾಂತ್ ಕದ್ರಿ ಸಂಗೀತ ಸಂಯೋಜಿಸಿದ್ದಾರೆ. ಇದು ಆ್ಯಕ್ಷನ್ ಚಿತ್ರವಾದರೂ, ಕೌಟುಂಬಿಕ ಕಥೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಹಿಂದೆ ನೀವು ನೋಡಿರದ ಕಿರಣ್ ರಾಜ್ ಅವರನ್ನು ರಾನಿ ಚಿತ್ರದಲ್ಲಿ ನೋಡಬಹುದು. ಸೆಂಟಿಮೆಂಟ್ ಕೂಡ ಹೆಚ್ಚಾಗಿಯೇ ಇದೆ. ಆರು ಅದ್ಭುತ ಸಾಹಸ ಸನ್ನಿವೇಶಗಳಿವೆ ಎಂದು ನಿರ್ದೇಶಕ ಗುರುತೇಜ್ ಶೆಟ್ಟಿ ತಿಳಿಸಿದರು. ಈ ಚಿತ್ರದ ಕಥೆ ಕಾಲ್ಪನಿಕವಾದರೂ, ಪ್ರತಿಯೊಬ್ಬರಿಗೂ ನನ್ನ ಪಾತ್ರ ಹತ್ತಿರವಾಗುತ್ತದೆ ಎಂದು ಕಿರಣ್ ರಾಜ್ ಹೇಳಿದರು. ಸಮೀಕ್ಷಾ ಹಾಗೂ ರಾಧ್ಯಾ ನಾಯಕಿಯರಾಗಿ ಬಣ್ಣ ಹಚ್ಚಿದ್ದು ಗ್ಲಾಮರ್ ಪಾತ್ರದಲ್ಲಿ ಕಂಗೊಳಿಸಿದ್ದಾರೆ. ಚಂದ್ರಕಾಂತ್ ಪೂಜಾರಿ ಹಾಗೂ ಉಮೇಶ್ ಹೆಗ್ಡೆ ಜಂಟಿಯಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಬಿ.ರಾಘವೇಂದ್ರ, ಕೋಲಾರ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ. ಆಗಸ್ಟ್ 30 ರಂದು ರಾನಿ ಅದ್ದೂರಿಯಾಗಿ ತೆರೆಗೆ ಬರಲಿದೆ.

ಕಾಗದದಲ್ಲಿ ಶಿವನ ಪ್ರೇಮಕಥೆ

ಮೊಬೈಲ್ ಪೂರ್ವ ಕಾಲದ ಪ್ರೇಮ ಕಥೆಯ ಕಾಗದ ತೆರೆಗೆ ಬಂದಿದೆ. ಆತ ಶಿವ ಕಾಲೇಜಿನ ಪ್ರಾಮಾಣಿಕ ವಿದ್ಯಾರ್ಥಿ, ಆಟ ಪಾಠದಲ್ಲಿಯೂ ಶಿವನೇ ಮುಂದು. ಹಾಗಾಗಿ ಆತನನ್ನು ಕಂಡರೆ ಊರಿನವರಿಗೆಲ್ಲಾ ಬಲು ಅಚ್ಚುಮೆಚ್ಚು. ಆತನ ಕಾಲೇಜಿಗೆ ಆಯಿಷಾ ದಾಖಲಾಗುತ್ತಾಳೆ. ಮುಸಲ್ಮಾನ ಧರ್ಮದ ಆಕೆಗೆ ಶಿವನ ಮೇಲೆ ಪ್ರೀತಿ ಮೂಡುತ್ತದೆ. ಧರ್ಮಗಳು ಬೇರೆಯಾದರೂ ಅವರ ನಡುವೆ ಪ್ರೀತಿ ಬಲ ವಾಗುತ್ತದೆ. ಆ ಊರಿನಲ್ಲಿ ಜಾತಿಗಿಂತ ಮನು ಷ್ಯತ್ವಕ್ಕೆ ಬೆಲೆಕೊಡುವ ಕಾರಣ, ಅಂತರ್ಜಾತಿಯ ವಿವಾಹಗಳು ನಡೆದಿರುತ್ತವೆ. ಆ ಊರಿನ ಮುಖ್ಯಸ್ಥ, ತನ್ನೂರನ್ನು ಮಾದರಿಯಾಗಿ ಮಾಡಿ ರುತ್ತಾನೆ. ಹಾಗಿದ್ದಾಗ ಈ ಊರಿನಲ್ಲಿ ಅನ್ಯ ಧರ್ಮೀಯರ ವಿವಾಹವೂ ನಡೆಯುತ್ತದೆಯೇ ಎಂಬ ಕುತೂಹಲ ಕಾಡುತ್ತದೆ. ಅಲ್ಲಿಗೆ ಪ್ರಥಮಾರ್ಧ ಮುಗಿಯುತ್ತದೆ.

ಈ ನಡುವೆಯೇ ಯಾರೋ ಕಿಡಿಗೇಡಿಗಳು ಆಯಿಷಾ ಮನೆಗೆ ಬೆಂಕಿ ಹಚ್ಚುತ್ತಾರೆ. ಮನೆ ಕಳೆದುಕೊಂಡ ಆಯಿಷಾ ಕುಟುಂಬ ಪಕ್ಕದ ಊರಿಗೆ ಸ್ಥಳಾಂತರವಾಗುತ್ತದೆ. ಮುಂದೆ ಆಯಿಷಾ, ಶಿವು ಒಂದಾಗುತ್ತಾರಾ ಅವರ ಪ್ರೀತಿಗೆ ಜಯ ಸಿಗುತ್ತದೆಯೇ ಎಂಬುದೇ ಚಿತ್ರದ ಸಸ್ಪೆನ್ಸ್ ಅದನ್ನು ತೆರೆಯಲ್ಲಿ ನೋಡಿಯೇ ತಿಳಿಯಬೇಕು. ಕಾಗದಂತಹ ಪ್ರೇಮ ಕಥೆಗಳು ಈ ಹಿಂದೆ ಬಂದಿವೆಯಾದರೂ, ಈ ಪ್ರೇಮಕಥೆ ಒಂದಷ್ಟು ಹೊಸತನದಿಂದ ಕೂಡಿದೆ. ನಿರ್ದೇಶಕ ರಂಜಿತ್ ಚಿತ್ರವನ್ನು ಮನಮುಟ್ಟುವಂತೆ ಕಟ್ಟಿ ಕೊಟ್ಟಿದ್ದಾರೆ. ನಾಯಕನಾಗಿ ಆದಿತ್ಯನಿಗೆ ಇದು ಮೊದಲ ಚಿತ್ರವಾದರೂ ಮೆಚ್ಚುವ ಅಭಿನಯ ತೋರಿದ್ದಾರೆ. ಅಂಕಿತಾ ಜಯರಾಮ್, ಆಯಿಷಾ ಪಾತ್ರಕ್ಕೆ ತಕ್ಕಂತೆ ಹೊಂದಿಕೊಂಡು

ಅದ್ಭುತವಾಗಿ ನಟಿಸಿದ್ದಾರೆ. ಕಾಗದ ಅಂಕಿತಾಗೆ ಬ್ರೇಕ್ ನೀಡಲಿದೆ. ಉಳಿದಂತೆ ಬಲರಾಜವಾಡಿ, ನೇಹಾ ಪಾಟೀಲ್, ನೀನಾಸಂ ಅಶ್ವತ್ಥ್ ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಚಿತ್ರದ ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಕಾಗದ ಕೌಟುಂಬಿಕ ಮನರಂಜನೆಯ ಚಿತ್ರವಾಗಿದ್ದು ಎಲ್ಲಾ ಧರ್ಮಗಳ ಸಾರ ಒಂದೇ ಎಂದು ಚಿತ್ರದಲ್ಲಿ ಸಾರಲಾಗಿದೆ.

ಚಿತ್ರ	: ಕಾಗದ
ನಿರ್ದೇಶನ	: ರಜಿತ್
ನಿರ್ಮಾಣ್	: ಅರುಣ್
ತಾರಾಗಣ	: ಆದಿತ್ಯ, ಅಂಕಿತಾ ನೇಹಾ ಪಾಟೀಲ್ ಬಲರಾಜವಾಡಿ ನೀನಾಸಂ ಅಶ್ವತ್ ಮುಂತಾದವರು.
	ರೇಟಿಂಗ್ : ★★★

ಬಿಲ್ಲಾ ರಂಗ ಭಾಷನಿಗಾಗಿ ಕಿಚ್ಚನ ತಯಾರಿ

ಕಿಚ್ಚ ಸುದೀಪ್ ಮ್ಯಾಕ್ಸ್ ಚಿತ್ರದ ಚಿತ್ರೀಕರಣ ಮುಗಿಸಿದ್ದು, ಈ ಚಿತ್ರ ಪೋಸ್ಟ್ ಪ್ರೊಡಕ್ಷನ್‌ನ ಹಂತದಲ್ಲಿದೆ. ಮ್ಯಾಕ್ಸ್ ಆಗಸ್ಟ್ ಅಥವಾ ಸೆಪ್ಟಂಬರ್‌ನಲ್ಲಿ ಅದ್ದೂರಿಯಾಗಿ ತೆರೆಗೆ ಬರಲಿದೆ. ಮ್ಯಾಕ್ಸ್ ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ. ಈ ನಡುವೆಯೇ ಕಿಚ್ಚ ಹೊಸ ಚಿತ್ರಕ್ಕೆ ಭರ್ಜರಿ ತಯಾರಿ ನಡೆಸಿದ್ದಾರೆ. ಹೌದು, ಬಿಲ್ಲಾ ರಂಗ ಭಾಷಾ ಚಿತ್ರಕ್ಕಾಗಿ ಕಿಚ್ಚ ಸುದೀಪ್ ಸಿದ್ಧತೆ ನಡೆಸಿದ್ದಾರೆ. ಮ್ಯಾಕ್ಸ್ ಚಿತ್ರಕ್ಕಿಂತ ಮೊದಲೇ ಬಿಲ್ಲಾ ರಂಗ ಭಾಷಾ ಸೆಟ್ಟೇರಬೇಕಿತ್ತು. ಆದರೆ ಕಾರಣಾಂತರಗಳಿಂದ ಚಿತ್ರ ಮುಂದಕ್ಕೆ ಹೋಯಿತು. ಅಂತೂ ಈಗ ಚಿತ್ರದ ಮುಹೂರ್ತಕ್ಕೆ ಕಾಲ ಕೂಡಿಬಂದಿದೆ. ಈ ಸಿನಿಮಾದಲ್ಲಿ ಸುದೀಪ್ ಮೂರು ವಿಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹಾಗಾಗಿ ಈ ಪಾತ್ರಕ್ಕೆ ಅಗತ್ಯ ತಯಾರಿ ಬೇಕಿದ್ದು, ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದಾರೆ.

ಒಂದು ಪಾತ್ರದಿಂದ ಒಂದು ಪಾತ್ರಕ್ಕೆ ಭಿನ್ನತೆಯಿದ್ದು ಅದಕ್ಕಾಗಿ ಸಾಕಷ್ಟು ಸಮಯ ಹಿಡಿಸಲಿದೆ. ಮೊದಲು ಬಿಲ್ಲಾನ ಪಾತ್ರ ಮುಗಿದರೆ ಮತ್ತೆ ರಂಗನ ಅವತಾರಕ್ಕಾಗಿ ಮತ್ತೆ ತಯಾರಿ ನಡೆಸಬೇಕಿದೆ. ಮತ್ತೆ ಭಾಷಾನಿಗಾಗಿ ಇನ್ನಷ್ಟು ತಯಾರಿಬೇಕು. ಹೀಗಾಗಿ ಈ ಚಿತ್ರಕ್ಕಾಗಿ ಸಾಕಷ್ಟು ಸಿದ್ಧತೆ ಬೇಕಾಗುತ್ತದೆ. ಅದಕ್ಕಾಗಿಯೇ ಕಿಚ್ಚ ಈ ಚಿತ್ರವನ್ನು ಮುಂದೂಡತ್ತಾ ಬಂದಿದ್ದರು. ಅಂತೂ ಈಗ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರವನ್ನು ಅನೂಪ್ ಭಂಡಾರಿ ನಿರ್ದೇಶನ ಮಾಡಲಿದ್ದಾರೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ನಿರ್ಮಾಣವಾಗಲಿದೆ. ಈ ಚಿತ್ರದ ಬಳಿಕ ಅಶ್ವತ್ಥಾಮ ಚಿತ್ರಕ್ಕಾಗಿ ಸುದೀಪ್ ಮತ್ತು ಅನೂಪ್ ಮತ್ತೆ ಒಂದಾಗಲಿದ್ದಾರೆ.

ನಾಟ್‌ಔಟ್‌ನಲ್ಲಿ ಕಾಮಿಡಿ ಕಚಗುಳಿ

ಅಜಯ್ ಪೃಥ್ವಿ ಚಂದನವನದ ಭರವಸೆಯ ನಾಯಕನಾಗಿ ಗುರುತಿಸಿಕೊಂಡಿದ್ದಾರೆ. ಈ ಹಿಂದೆ ಬಿಡುಗಡೆಯಾದ ಪುರುಷೋತ್ತಮ ಪ್ರಸಂಗದಲ್ಲಿ ಕಾಮಿಡಿ ಮಾಡುತ್ತಾ ಸೆಂಟಿಮೆಂಟ್‌ನಲ್ಲಿಯೇ ಗಮನಸೆಳೆದಿದ್ದ ಅಜಯ್ ಈಗ ಡಾರ್ಕ್ ಕಾಮಿಡಿಯ ನಾಟ್‌ಔಟ್ ಚಿತ್ರದ ಮೂಲಕ ಮತ್ತೆ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಸದ್ಯ ನಾಟ್ ಔಟ್ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ನಟ ಶ್ರೀನಗರ ಕಿಟ್ಟಿ, ನಿರ್ದೇಶಕ ಸಿಂಪಲ್ ಸುನಿ, ಆಂಬುಲೆನ್ಸ್ ಚಾಲಕ ಹನೀಫ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರದ ತಂಡಕ್ಕೆ ಶುಭಕೋರಿದರು. ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ.ರವಿಕುಮಾರ್ ಹಾಗೂ ಎ.ಶಂಶುದ್ದೀನ್ ನಿರ್ಮಿಸಿರುವ ಈ ಚಿತ್ರವನ್ನು ಎಂ.ಅಂಬರೀಶ್ ನಿರ್ದೇಶಿಸಿದ್ದಾರೆ. ಅಜಯ್ ಈ ಚಿತ್ರದಲ್ಲಿ ಆಂಬುಲೆನ್ಸ್ ಚಾಲಕನ ಪಾತ್ರದಲ್ಲಿ ಕಾಣಿಸಿ ಕೊಂಡಿದ್ದಾರೆ. ಅಜಯ್ ತಮ್ಮ ಈ ಹಿಂದಿನ ಚಿತ್ರಗಳಿಗಿಂತ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಜಯ್‌ಗೆ ಜತೆಯಾಗಿ ರಚನಾ ಇಂದರ್ ಬಣ್ಣ ಹಚ್ಚಿದ್ದು, ನರ್ಸ್ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ರವಿಶಂಕರ್ ಡಾನ್ ಆಗಿ ನಟಿ ಸಿದ್ದು, ಕಾಮಿಡಿ ಕಚಗುಳಿ ಇಡಲಿದ್ದಾರೆ. ಉಳಿದಂತೆ ಕಾಕ್ರೋಜ್ ಸುಧಿ, ಅಶ್ವಿನ್ ಹಾಸನ್, ಪ್ರಶಾಂತ್ ಸಿದ್ದಿ, ಸಲ್ಮಾನ್ ಮುಂತಾದವರು ತಾರಾ ಬಳಗದಲ್ಲಿದ್ದಾರೆ.

ನಾಟ್‌ಔಟ್, ಲಾಕ್ ಡೌನ್ ಸಮಯದಲ್ಲಿ ಬರೆದ ಕಥೆ, ಒಂದು ಆಸ್ಪತ್ರೆಯ ಆ್ಯಂಬು ಲೆನ್ಸ್ ಚಾಲಕನ ಸುತ್ತ ಚಿತ್ರದ ಕಥೆ ಸಾಗುತ್ತದೆ. ಇಲ್ಲಿ ಹ್ಯೂಮರ್ ಜತೆಗೆ ಕಾಮಿಡಿಯೂ ಬೆರೆತಿದೆ. ಚಿತ್ರದ ಜತೆಗೆ ಪ್ರೇಕ್ಷಕರು ಕೂಡ ಸಾಗುತ್ತಾರೆ.

-ಅಂಬರೀಶ್ ನಿರ್ದೇಶಕ